
ಪ್ರಬೋಧನೆ

ಲಂಕೇಶ್

ಸೌದಿ ಎಂಬ ಕೌದಿಯೊಳಗೆ

ಮಾರ್ಚ್ 06, 2013 ಪುಟ 20 ರೂ. 14/-



ಚ್ಚೇಗೌಡನ ಹಾರ



ಟೆಂಪಲ್ ಆಫ್ ಸಕ್ಸಸ್

ಚೋರಗುರು ರಘುನಾಥ



ಕೆಜೆಪಿ:ಸಿದ್ಲಿಂಗು-ಶೋಭಾ ಕಿತ್ತಾಟ



ಹೊಳಲ್ಕೆರೆ

ಂಜನೇಯನ ಗೆ ಜಯ?


ಚನ್ನಗಿರಿ

ವಿರುಪಾಕ್ಷಪ್ಪ ಪೀಕಲಾಟ

ಉತ್ತರಕನ್ನಡ

ಕಾಗೇರಿ ಅಸ್ನೋಟಿಕರ್ ಸೆಣಸಾಟ

ಧಾರ್'ಬರುತ್ತಿದೆ ಹುಷಾರ್!



• ಪಾರ್ವತೀಶ

ಬಿಡಿ ಚಿತ್ರಗಳು

ವೀರಪ್ಪನ್‌ನ ಸೈಕಲಾಜಿಕಲ್ ಪ್ರೊಫೈಲ್ ಏನು

ಆಗಿನ್ನೂ ವೀರಪ್ಪನ್ ಹತ್ಯೆಯಾಗಿರಲಿಲ್ಲ.

ಬ್ರಿಟಿಶ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ನಿನ (ಬಿಬಿಸಿ) ಅಂಗಸಂಸ್ಥೆ ಚಾನಲ್-4 ನ ವರದಿಗಾರ ದಂಪತಿಯಾಗಿದ್ದ ಕ್ರಿಸ್ಟೋಫರ್ ಹಾಗೂ ಹೆಲೆನ್ ಒಮ್ಮೆ ಬೆಂಗಳೂರಿಗೆ ಬಂದಿದ್ದರು. ವೀರಪ್ಪನ್ ಕುರಿತು ತಮ್ಮ ಟಿ.ವಿ. ಚಾನಲ್‌ಗಾಗಿ ಅವರೊಂದು ಡಾಕ್ಯುಮೆಂಟರಿ ಸಿನಿಮಾ ರೆಡಿ ಮಾಡುತ್ತಿದ್ದರು. ವೀರಪ್ಪನ್‌ನ ಸೆರೆಯಿಂದ ಹೊರಬಂದಿದ್ದ ಕೃಪಾಕರ ಸೇನಾನಿಯನ್ನು ಮಾತಾಡಿಸಿ ನನ್ನದೊಂದು ಪುಟ್ಟ ಸಂದರ್ಶನ ರೆಕಾರ್ಡ್ ಮಾಡಿಕೊಂಡು ಹೋದರವರು. ವೀರಪ್ಪನ್ ಹಿನ್ನೆಲೆ, ಕಾಡಿನ ಸ್ಮಗ್ಲಿಂಗ್ ದಂಧೆಗೆ ಬೆಂಬಲಕ್ಕಿದ್ದ ನಾಡಿನ ಜನರ ಬಗ್ಗೆ ನಾನವತ್ತು ಹೇಳಿದ್ದೆ. ನಂತರ ಅದು **'Veerappan- The Last Bandit'** ಎಂಬ ಹೆಸರಿನಲ್ಲಿ ಪ್ರಸಾರವಾಯಿತು.

ಅವತ್ತು ಕ್ರಿಸ್ಟೋಫರ್ ಒಂದು ವಿಚಾರ ಹೇಳಿದ.

ಅವನು ಕರ್ನಾಟಕದ ಅತ್ಯುನ್ನತ ಪೊಲೀಸ್ ಆಫೀಸರ್ ಒಬ್ಬರ ಭೇಟಿಗೆ ಹೋಗಿದ್ದಾಗ "ನಿಮ್ಮ ಬಳಿ ವೀರಪ್ಪನ್‌ನ ಸೈಕಲಾಜಿಕಲ್ ಪ್ರೊಫೈಲ್ ಇದೆಯಾ?" ಅಂತ ಕೇಳಿದನಂತೆ.

"ಅಂತಾದ್ದೇನೂ ಇಲ್ಲ!" ಅಂದರಂತೆ ಆಫೀಸರ್!

ನಿಮಗೆ **Profile** ಅಥವಾ ಬಯೋಡೇಟಾ ಅಂದರೇನೆಂದು ಗೊತ್ತಿರುತ್ತದೆ. ಅದೇರೀತಿ ಸೈಕಲಾಜಿಕಲ್ ಪ್ರೊಫೈಲ್ ಎನ್ನುವುದು ವ್ಯಕ್ತಿಯೊಬ್ಬರ ಹಿನ್ನೆಲೆ, ಮನಸ್ಥಿತಿ, **Character formation,** ಯೋಚಿಸುವ ವಿಧಾನ, ಪ್ರಭಾವಿಸಿರಬಹುದಾದ ಅಂಶಗಳನ್ನು ಕಲೆ ಹಾಕುವುದು ಹಾಗೂ ಅದರ ಆಧಾರದಲ್ಲಿ ಅಂತವರ ಯೋಚನೆ ಹಾಗೂ ಮನಸ್ಸಿನ ಚಲನೆಯನ್ನು ಗ್ರಹಿಸುವುದು.

ಸಾಮಾನ್ಯವಾಗಿ ಸರ್ಕಾರಗಳಿಗೆ ಸವಾಲಾಗಿ ಪರಿಣಮಿಸುವ ಬಂಡುಕೋರ ನಾಯಕರ ಬಗ್ಗೆ ಇಂತ ಪ್ರೊಫೈಲ್‌ಗಳನ್ನು ತಯಾರಿಸಿ ಇಟ್ಟುಕೊಳ್ಳುತ್ತಾರೆ. ಪೆರು ದೇಶದ ಸಮಾಜವಾದಿ ಕ್ರಾಂತಿಯ ನಾಯಕನಾಗಿದ್ದ ಅಬುಮಲ್ ಗೋಂಜಾಲೊ ಇದಕ್ಕೊಂದು ಉದಾಹರಣೆ. ಅವನಿಗಿದ್ದ ಸಿಗರೇಟಿನ ಚಟ ಹಾಗೂ ಜೊತೆಗಾರರ ಬಗೆಗಿನ ಭಾವುಕ ಕಾಳಜಿಯ ಬಗ್ಗೆ ಅರಿತಿದ್ದ ಪೊಲೀಸರು ಅದನ್ನೇ ಗಾಳವಾಗಿ ಬಳಸಿ ಗೋಂಜಾಲೊನನ್ನು ಸೆರೆ ಹಿಡಿದರು. ಪೆರು ಕ್ರಾಂತಿಯ ಸಾಧ್ಯತೆಯನ್ನೇ ಹೊಸಕಿ ಹಾಕಿಬಿಟ್ಟರು.

ಇದಲ್ಲದೆ ತುಡುಗುತನ ಮೀರಿ ಬೆಳೆಯಬಹುದಾದ ಅಸಾಧ್ಯ ಕ್ರಿಮಿನಲ್‌ಗಳ ಬಗ್ಗೆಯೂ ಯುರೋಪ್-ಅಮೆರಿಕಗಳಲ್ಲಿ ಇಂತಹ ಸೈಕಲಾಜಿಕಲ್ ಪ್ರೊಫೈಲ್‌ಗಳನ್ನು ಇಟ್ಟುಕೊಂಡಿರುತ್ತಾರೆ. ನೀವು ಎಂದಾದರೂ ಡಿಸ್ಕವರಿ ಚಾನಲ್‌ನಲ್ಲಿ **'New Detectives'** ಹಾಗೂ **'FBI Files'** ಪ್ರೋಗ್ರಾಂ ನೋಡಿದರೆ ಈ ಪ್ರೊಫೈಲ್‌ಗಳ ಮಹತ್ವ ತಿಳಿಯುತ್ತದೆ. ಇಂತಾ ಪ್ರೊಫೈಲ್‌ಗಳು ಹಾಗೂ ಫೊರೆನ್ಸಿಕ್ ಸೈನ್ಸ್ ನೆರವಿನಿಂದ ಅಪರಾಧಿಗಳನ್ನು ಪತ್ತೆ ಹಚ್ಚಿದ ಘಟನೆಗಳನ್ನು ಅದರಲ್ಲಿ ನಿರೂಪಿಸುತ್ತಿರುತ್ತಾರೆ.

ಈಗ ವೀರಪ್ಪನ್ ತಂಡದಲ್ಲಿದ್ದ ನಾಲ್ವರು ಗಲ್ಲಿಗೇರಬೇಕಾದ ಸನ್ನಿವೇಶ ಬಂದಿದೆ. ಇವರೆಲ್ಲ ಕ್ರಿಮಿನಲ್ ಚಟುವಟಿಕೆ ನಡೆಸಿದವರು ಹಾಗೂ ಪೊಲೀಸರನ್ನೇ ಕೊಂದವರೆಂಬ ಆರೋಪ ಹೊತ್ತಿದ್ದಾರೆ. ಇವರ ನಾಯಕನಾಗಿದ್ದ ವೀರಪ್ಪನ್ ಮೇಲೂ ಘನಘೋರ ಅಪರಾಧಗಳ ಆರೋಪವಿದ್ದವು. ಕೊನೆಗೆ ಪೊಲೀಸರು ಒಂದು ಬಲೆ ಹೆಣೆದು, ಮಜ್ಜಿಗೆಯಲ್ಲಿ ವಿಷ ಬೆರೆಸಿ, ವೀರಪ್ಪನ್ ಅದನ್ನು ಕುಡಿಯುವಂತೆ ಮಾಡಿ ತಾವೇ ಸಾವಿನ ಶಿಕ್ಷೆ ಜಾರಿ ಮಾಡಿದರು. ಆದರೆ ಪಾಪರ್‌ಪಟ್ಟಿ ಗ್ರಾಮದಲ್ಲಿ ಎನ್‌ಕೌಂಟರ್‌ನಲ್ಲಿ ವೀರಪ್ಪನ್‌ನನ್ನು ವೀರೋಚಿತವಾಗಿ ಕೊಂದೆವೆಂದು ಪ್ರಚಾರ ಮಾಡಿಕೊಂಡರು. ಅದು ಒಂದೆಡೆ ಇರಲಿ, ಈ ವೀರಪ್ಪನ್ ಹತ್ಯೆಗೀಡಾಗುವ ಕೆಲತಿಂಗಳ ಹಿಂದೆ ಒಂದು ಪತ್ರಿಕಾ ಸಂದರ್ಶನದಲ್ಲಿ "ನಾನು ಕಳ್ಳ ಅಂತಾರಲ್ಲ, ಇವರು ಮಾತ್ರ ಸಾಚಾನಾ?" ಅಂತ ಒಂದು ಪ್ರಶ್ನೆ ಕೇಳಿದ್ದ.

ಈ ಪ್ರಶ್ನೆಗೆ ಇವತ್ತಿಗೂ ಉತ್ತರ ಸಿಕ್ಕಿಲ್ಲ, ನಾಳೆ ಒಂದು ವೇಳೆ ಜ್ಞಾನಪ್ರಕಾಶ್, ಮೀಸೆ ಮಾದಯ್ಯ, ಬಿಲವೇಂದ್ರನ್ ಹಾಗೂ ಸೈಮನ್ ಗಲ್ಲಿಗೇರಿದರೂ ನಮಗೆ ಉತ್ತರ ಸಿಗುವುದಿಲ್ಲ.

ಯಾಕೆಂದರೆ ಯಾರೂ ಕೂಡ ಇದುವರೆಗೂ ಈ ಪ್ರಶ್ನೆಯನ್ನೇ ಹಾಕಿಕೊಂಡಿಲ್ಲ, ಯಾರನ್ನೂ ಇದುವರೆಗೂ ಕೇಳಿಲ್ಲ.

ವೀರಪ್ಪನ್ ದಂತಚೋರನಾಗಿದ್ದ ನಿಜ. ಅವನು ಗಂಧ ಕಳ್ಳಸಾಗಾಣಿಕೆಯನ್ನು ಮಾಡುತ್ತಿದ್ದ, ಅದೂ ಕೂಡ ನಿಜವೆ!

ವೀರಪ್ಪನ್ ಸಹ ಇದನ್ನೆಲ್ಲ 'ಇಲ್ಲ' ಎಂದಿರಲಿಲ್ಲ, ಇಲ್ಲಿ ಕೇಳಬೇಕಾದ ಪ್ರಶ್ನೆ ಏನೆಂದರೆ ಅವನು ಮುನ್ನೂರು ಆನೆ ಕೊಂದ ಅಂದರು, ಅಂದರೆ ಒಟ್ಟು ಆರು ನೂರು ದಂತ..! ಇಲ್ಲಿ ಕೊಂದವನು ವೀರಪ್ಪನ್. ಆದರೆ ಅದನ್ನು ಕಾಡಿನಿಂದ ನಾಡಿಗೆ ಸಾಗಿಸಿದವರ್ಯಾರು? ನಾಡಿನಲ್ಲಿ ಅದನ್ನು ದುಡ್ಡು ಕೊಟ್ಟು ಖರೀದಿ ಮಾಡಿದವರ್ಯಾರು?

ವೀರಪ್ಪನ್ ಅದನ್ನೇನು ಬಳಸಲಿಲ್ಲ, ಕೊನೆತನಕ ಒಂದು ಅಲುಮಿನಿಯಂ ತಟ್ಟೆ, ಜೊತೆ ಹವಾಯ್ ಚಪ್ಪಲಿಯಲ್ಲೇ ಅವನು ಕಾಡಲೆಯುತ್ತಿದ್ದ.

ಅದೇ ರೀತಿ ಅವನು ಸಾವಿರಾರು ಟನ್ ಗಂಧದ ಮರ ಕಡಿದು ಕಳ್ಳಸಾಗಾಣಿಕೆ ಮಾಡಿದ ಎಂಬ ಆರೋಪವೂ ಇತ್ತಲ್ಲ, ಇದು ನಿಜವಾಗಿದ್ದರೆ ಆ ಗಂಧವೆಲ್ಲಾ ಯಾರಿಗೆ ಸಾಗಾಣಿಕೆಯಾಯಿತು? ಅದರ **destination** ಯಾವುದಾಗಿತ್ತು, ಯಾಕೆ ಮೂವತ್ತು ವರ್ಷದಲ್ಲಿ ಒಮ್ಮೆಯೂ ಅವನ ಕಳ್ಳಸಾಗಾಣಿಕೆಯ ಮಾಲು ಜಪ್ತಿಯಾಗಲಿಲ್ಲ, ಇಷ್ಟೊಂದು ಪೊಲೀಸ್, ಫಾರೆಸ್ಟ್ ಅಧಿಕಾರಿಗಳು, ಚೆಕ್‌ಪೋಸ್ಟ್‌ಗಳು ಇದ್ದಾಗಲೂ ವೀರಪ್ಪನ್‌ನ ಕಳ್ಳಸಾಗಾಣಿಕೆಯ ಮಾಲು ಅದು ಹೇಗೆ ಸುರಕ್ಷಿತವಾಗಿ ನಾಡು ತಲುಪುತ್ತಿತ್ತು?

ಈ ಸರಕು ಕರ್ನಾಟಕ, ಕೇರಳ ಗಡಿ ಪ್ರದೇಶದಲ್ಲಿದ್ದ ಗಂಧದೆಣ್ಣೆ ಕಾರ್ಖಾನೆಗಳಿಗೆ ಹೋಗಿ ತಲುಪುತ್ತಿತ್ತೆಂಬುದನ್ನು ಸರ್ಕಾರ ಯಾಕೆ ಒಪ್ಪಿಕೊಳ್ಳಲಿಲ್ಲ? ಪೊಲೀಸರೇಕೆ ಒಬ್ಬನೇ ಒಬ್ಬ ಗಂಧದೆಣ್ಣೆ ಕಾರ್ಖಾನೆಯ ಮಾಲೀಕನನ್ನು ಹಿಡಿದು ಕೇಸ್ ಹಾಕಲಿಲ್ಲ? ಫಾರೆಸ್ಟ್ ಜಾಗೃತದಳದವರು ಯಾಕೆ ಎಂದಾದರೂ ಈ ಕಾರ್ಖಾನೆಗಳಿಗೆ ಸರ್ಕಾರ ಅಧಿಕೃತವಾಗಿ ಸರಬರಾಜು ಮಾಡಿದ ಗಂಧದ ತುಂಡಿನ ಪ್ರಮಾಣ ಹಾಗೂ ಉತ್ಪಾದನೆಯಾದ ಗಂಧದೆಣ್ಣೆಯ ಪ್ರಮಾಣದಲ್ಲಿರುತ್ತಿದ್ದ ವ್ಯತ್ಯಾಸಗಳ ಬಗ್ಗೆ ಅನುಮಾನ ಪಡಲಿಲ್ಲ..?

"ನಾನು ಕಳ್ಳ ಹೌದು. ನೀವು ಮಾತ್ರ ಸಾಚಾನಾ?" ಎಂದು ವೀರಪ್ಪನ್ ಪ್ರಶ್ನೆಗೆ ಎಲ್ಲಿದೆ ಉತ್ತರ. ಮೀಡಿಯಗಳು, ಪೊಲೀಸರು, ನ್ಯಾಯಾಲಯಗಳು ಕೂಡ ಎಂದೂ ಈ ಪ್ರಶ್ನೆ ಹಾಕಿಕೊಳ್ಳಲಿಲ್ಲ ಏಕೆ?

ನಾವು ವೀರಪ್ಪನ್‌ನನ್ನು ಸಮರ್ಥಿಸಿಕೊಳ್ಳುವ ಅಗತ್ಯವೇನಿಲ್ಲ. ಆತ್ಮರಕ್ಷಣೆ



ಹಾಗೂ ಸೇಡಿಗಾಗಿ ಅವನು ಪೊಲೀಸರನ್ನು ಕೊಂದ. ನಾವದನ್ನು ಖಂಡಿಸೋಣ. ವೀರಪ್ಪನ್ ಕಾನೂನನ್ನು ಉಲ್ಲಂಘಿಸಿದ್ದೂ ಅಪರಾಧ. ಆದರೆ ನಮ್ಮ ಸರ್ಕಾರ, ರಾಜಕಾರಣಿಗಳು, ಪೊಲೀಸರು, ಸರ್ಕಾರಿ ಅಧಿಕಾರಿಗಳೆಲ್ಲ ಪ್ರತಿದಿನ ಕಾನೂನು ಉಲ್ಲಂಘಿಸುವ ಕೆಲಸವಲ್ಲದೆ ಬೇರೇನು ಮಾಡುತ್ತಿದ್ದಾರೆ? ವೀರಪ್ಪನ್‌ನದು ಕಾಡಿನಲ್ಲಿ ಆನೆ ಕೊಂದ ಅಪರಾಧವಾದರೆ ನಾಡಿನಲ್ಲಿ ದಂತ ಖರೀದಿಸಿದವನದ್ದೂ ಅಪರಾಧವೇ ತಾನೆ?

ವೀರಪ್ಪನ್‌ಗೆ ಇವರೆಲ್ಲಾ ಪ್ರಚೋದಿಸಿ ಉತ್ತೇಜಿಸಿದ್ದಕ್ಕೆ ತಾನೆ ಅವನು ಅರಣ್ಯ ಚೋರನಾಗಿದ್ದು? ವೀರಪ್ಪನ್ ಕ್ರಿಮಿನಲ್ ಆಗಿದ್ದಿರಬಹುದು. ಆದರೆ ಅವನಲ್ಲಿ ದ್ವಂದ್ವಗಳಿದ್ದಿರಲಿಲ್ಲ, ಅವನ ಸೈಕಲಾಜಿಕಲ್ ಪ್ರೊಫೈಲ್ ಒಂದನ್ನು ನಿರ್ಮಿಸುವುದಾದಲ್ಲಿ ಅದು ಹೀಗೆ ಆಕಾರ ಪಡೆಯಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ದಟ್ಟ ಕಾಡುಗಳ ಪುಟ್ಟ ಗ್ರಾಮವೊಂದರಲ್ಲಿ ಹುಟ್ಟಿದ ವೀರಪ್ಪನ್‌ಗೆ ಕಾಡು ಹಾಗೂ ಪ್ರಾಣಿಗಳ ಬಗ್ಗೆ ಗಮನ ಹರಿದದ್ದೇ ಇಂಗ್ಲಿಷ್ ಶಿಕಾರಿದಾರರಿಂದ. ಕುದುರೆ ಹತ್ತಿ ಕಾಡೊಳಗೆ ನುಗ್ಗಿಬರುತ್ತಿದ್ದ ಬ್ರಿಟಿಷ್ ಆಫೀಸರ್‌ಗಳು ನಿರ್ಯೋಚನೆಯಿಂದ ಕಣ್ಣಿಗೆ ಬೀಳುವ ಆನೆಗಳಿಗೆಲ್ಲಾ ಗುಂಡಿಟ್ಟು ಕೊಂದು ದಂತಗಳನ್ನಷ್ಟೇ ಅಲ್ಲದೆ ಆನೆಯ ಕಾಲುಗಳನ್ನೂ ಕಡಿದು ಹೊತ್ತೊಯ್ಯುತ್ತಿದ್ದರು. ದಂತಗಳು ಕಲಾತ್ಮಕ ವಸ್ತುಗಳ ತಯಾರಿಕೆಗೆ, ಅವರ ಪೌರುಷ ಪ್ರದರ್ಶನಕ್ಕೆ ಬಳಕೆಯಾದರೆ ಆನೆ ಕಾಲುಗಳು ಅವರ ಮನೆಯ ಟೀಪಾಯ್ ಆಗುತ್ತಿದ್ದವು. ಇದಲ್ಲದೆ ಕಾವೇರಿ ನದಿಯಲ್ಲಿರುತ್ತಿದ್ದ ಮೊಸಳೆಗಳನ್ನೂ ಬೇಟೆಯಾಡಿ ಚರ್ಮ ಸುಲಿದು ಒಯ್ಯುತ್ತಿದ್ದರು. ಇಂಗ್ಲಿಷ್ ಶಿಕಾರಿದಾರರಿಗೆ ಆನೆ-ಮೊಸಳೆಗಳ ಜಾಡು ತೋರಿಸಿದರೆ ವೀರಪ್ಪನ್ ತರದ ಬಾಲಕರಿಗೆ ಕಾಸಿನ ಇನಾಮು ಸಿಗುತ್ತಿತ್ತು, ಜೊತೆಗೆ ಕಾಡುಪ್ರಾಣಿಗಳನ್ನು ಕೊಂದ ಆಗ ಸರ್ಕಾರವೇ ನಗದು ಬಹುಮಾನ ನೀಡಿ ಉತ್ತೇಜಿಸುತ್ತಿತ್ತು,

ವೀರಪ್ಪನ್ ಬದುಕಿನಲ್ಲಿ ಇದು ಒಂದು ಹಂತವಾದರೆ ಸ್ವಾತಂತ್ರ್ಯ ಎರಡನೇ ಅಧ್ಯಾಯ ಶುರುವಾಯಿತು. ನಮ್ಮಲ್ಲಿ **Wild life Prote Act** ಜಾರಿಗೆ ಬಂದಿದ್ದೇ 1972ರಲ್ಲಿ.

ಅಷ್ಟರಲ್ಲಿ ಅರಣ್ಯ ಲೂಟಿಯಲ್ಲಿ ಪಳಗಿದ್ದ ವೀರಪ್ಪನ್ ಮತ್ತಿತರ ಸಮುದಾಯಕ್ಕೆ ಆಗಲೂ ಈ ಕಾಯ್ದೆಯ ಬಿಸಿಯೇನು ತಟ್ಟಿರಲಿಲ್ಲ, ಆಳದಲ್ಲಿ ವಾಸವಿದ್ದ ಸಹಸ್ರಾರು ಜನರಿಗೆ ಸರ್ಕಾರವೆಂಬುದರ, ಅರಣ್ಯ ರಕ್ಷ ಕಾನೂನುಗಳ ಮುಖಾಮುಖಿಯಾಗಿದ್ದೇ ಭ್ರಷ್ಟ ಅಧಿಕಾರಿಗಳ ರೂ ವ್ಯವಸ್ಥೆಯೊಂದರ ಆಚೆಗಿದ್ದವರನ್ನು ಒಳಗೊಳ್ಳಲಾಗದ, ಕಾನೂನಿನ ಚೌ ತರಲಾಗದ ಮೊದಲ ವೈಫಲ್ಯವಾಗಿತ್ತದು. ವೀರಪ್ಪನ್ ಆಕ್ಟೀವ್ 1970ರಿಂದ 2004 ರವರೆಗಿನ 34 ವರ್ಷದಲ್ಲಿ 1984 ರಲ್ಲಿ ಒಂದೇ ಒಂದು ಸಾರಿ ಅರೆಸ್ಟ್ ಆಗಿದ್ದ. ಆಗಲೂ ಅಧಿಕಾರಿಗಳು ತಿಂದು ಬೂದಿಪಡಗ ಗೆಸ್ಟ್ ಹೌಸ್‌ನಿಂದ ವೀರಪ್ಪನ್ ತಪ್ಪಿಸಿಕೊಳ್ಳಲು ಸಹ ಮಾಡಿದ್ದರು. ಇದಲ್ಲದೆ ಅರಣ್ಯವಾಸಿ ಜನರ ಬೆಂಬಲ, ನೆರವೂ ವೀರಪ್ಪನ್

ಆರು ಸಾವಿರ ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಬದುಕು ಸಾಗಿಸ ಸಾವಿರಾರು ಅರಣ್ಯವಾಸಿ ಜನರ ಪಾಲಿಗೆ ಸರ್ಕಾರವೆಂಬುದು ಅಭಿವೃದ್ಧಿಯ ಏಜೆನ್ಸಿಯಾಗಿ ವರ್ತಿಸಲಿಲ್ಲ, ಜನಪರ ವ್ಯವಸ್ಥೆ ಅವರಲ್ಲಿನ ಬದುಕನ್ನು ಪ್ರವೇಶಿಸಲು ಆಗಿರಲೇ ಇಲ್ಲ ಎಂಬ ಇದು ಪುರಾವೆ ತಾನೆ?

ಇಲ್ಲಿ ದ್ವಂದ್ವ-ವೈರುಧ್ಯ ಇದ್ದದ್ದು ಈ ಅರಣ್ಯವಾಸಿಗಳಲ್ಲಲ್ಲ, ವೀರ ಬಲಿ ತೆಗೆದುಕೊಂಡ ಹರಿಕೃಷ್ಣ, ಶಕೀಲ್ ಅಹಮದ್ ಇವ ಒಳ್ಳೆಯ ಪೊಲೀಸ್ ಆಫೀಸರ್‌ಗಳಾಗಿದ್ದರು. ಅರಣ್ಯಾಧಿಕಾರಿ ಶ್ರೀನಿವಾ ಸಹೃದಯಿಯಾಗಿದ್ದರು. ಆದರೆ ಇವರ ಇಲಾಖೆಯ ಬೇರೆ ಅಧಿಕಾರಿ ಕೆಲವರು ವೀರಪ್ಪನ್ ಜೊತೆ ದಶಕಗಟ್ಟಲೆ ಸ್ಮಗ್ಲಿಂಗ್ ಬ್ಯುಸಿನೆ ಪಾರ್ಟನರ್‌ಶಿಪ್ ಹೊಂದಿದ್ದರು. ಈ ದಂಧೆ ಯಶಸ್ವಿಯಾಗಿ ನಡೆ ಕಾಲ ತಮ್ಮ ಲಾಭದ ಪಾಲನ್ನು ತೆಗೆದುಕೊಳ್ಳುತ್ತಾ ಇದ್ದ ಈ ಸಹ ಪಾರ್ಟನರ್‌ಗಳು ಯಾವಾಗ ವೀರಪ್ಪನ್‌ನ ಕಳ್ಳತನ ಬಹಿರಂಗವಾ ಶುರುವಾಯಿತೋ ಆಗ ತಾವೆಲ್ಲಾ ಅಮಾಯಕ ಮುಗ್ಧರೆಂಬ ಪಾರ್ಟನರ್‌ಶಿಪ್‌ನಿಂದ ಕಳಚಿಕೊಂಡುಬಿಟ್ಟರು. ಅವರೆಲ್ಲಾ ಈಗ ಸುರಕ್ಷಿತವಾಗಿಯೇ ಇದ್ದಾರೆ. ಮತ್ತೊಂದೆಡೆ ವೀರಪ್ಪನ್‌ನ ನಾ ಕಾಡಿನ ಸಹಚರರನ್ನು ನೇಣಿಗೆ ಹಾಕಲಾಗುತ್ತಿದೆ. ಆದರೆ ನಾ ಸಹಚರರನ್ನು ಅವರೆಲ್ಲಾ ಯಾರೆಂತಲೂ ವಿಚಾರಿಸದೆ ಸುಮ್ಮನಿದ್ದು ಬಿಡಲಾ

ಆದರೆ ನಾವೂ ಹಾಗೆ ಸುಮ್ಮನಿದ್ದುಬಿಡುವುದು ಸರಿಯಲ್ಲ ಎನಿಸು ಕಾರಣ ವೀರಪ್ಪನ್‌ನ ಬ್ಯುಸಿನೆಸ್ ಪಾಲುದಾರರ ಬಗ್ಗೆ ತಿಳಿಯಲು ಪ್ರಯತ್ನಿಸಿದ ಈ ಹುಡುಕಾಟದಲ್ಲಿ ಒಮ್ಮೆ ನಮಗೊಬ್ಬ ತಮಿಳು ಯುವಕ ಸಿಕ್ಕ, ಕೆಲಕಾಲ ವೀರಪ್ಪನ್ ತಂಡದಲ್ಲಿದ್ದವನು. ಪರಿಚಿತರೊಬ್ಬರ ಮೂಲಕ ಅವ ಪತ್ರಿಕೆಯ ಕಚೇರಿಗೆ ಒಂದು ದಿನ ಕರೆಸಿಕೊಂಡೆವು.

"ವೀರಪ್ಪನ್ ಸರಬರಾಜು ಮಾಡುತ್ತಿದ್ದ ಆನೆ ದಂತ, ಗಂಧದ ಇವೆಲ್ಲಾ ಎಲ್ಲಿಗೆ ಹೋಗುತ್ತಿತ್ತು. ಸಿಟಿಗಳಲ್ಲಿ ಅದು ಯಾರ ಕೈ ಸೇರುತ್ತಿ ಪೊಲೀಸ್-ಫಾರೆಸ್ಟಿನವರ ಸಹಕಾರವಿಲ್ಲದೆ ಇದೆಲ್ಲಾ ನಡೆಯುವುದು ಸಾಧ್ಯವಿರಲಿ ಹಾಗಾದರೆ ಈ ಭ್ರಷ್ಟರ್ಯಾರು?" ಅಂತೆಲ್ಲಾ ಕೇಳಿದೆವು.

ಆ ಯುವಕನಿಗೆ ಕೆಲ ಸಂಗತಿಗಳು ತಿಳಿದಿದ್ದಂತಿತ್ತು. ನಿಜ ಹೇಳ ಆತನಿಗೆ ಹಿಂಜರಿಕೆಯೂ ಇದ್ದಂತಿರಲಿಲ್ಲ, ಆದರೆ ಅವತ್ತು ಎಲ್ಲವನ್ನು ಕ ತಿಳಿಯಲು ನಮ್ಮ ತಂಡಕ್ಕೆ ಸಮಯಾವಕಾಶ ಸಿಗಲಿಲ್ಲ, ಈಗ ತಪ್ಪು ಮಾಡಿದರೆ ಕಾಡಿನ ನಾಲ್ವರನ್ನು ನೇಣಿಗೇರಿಸುತ್ತಿರುವ ಸಂದರ್ಭದಲ್ಲೇ ಆ ತಪ್ಪಿಗೆ ಪ್ರಚೋದ ಸಹಕಾರ ನೀಡಿ ಲಾಭ ಮಾಡಿಕೊಂಡ ನಾಡಿನ ಮಹಾತ್ಮರ ಬಗ್ಗೆಯ ಜನತೆಗೆ ತಿಳಿಸಬೇಕಾಗಿದೆ. ನಾವೀಗ ಪುನಃ ಆ ಯುವಕನನ್ನು ಪತ್ತೆ ಹಚ್ಚ ಪ್ರಯತ್ನದಲ್ಲಿದ್ದೇವೆ.

ನ್ಯಾಯ ತಕ್ಕಡಿ ಸದಾ ಒಂದೇ ಕಡೆ ವಾಲಬಾರದಲ್ಲವೆ?

ಕಾಮನ ಬಿಲ್ಲಿನ ಕೆಳಗೇ ಕಾರ್ಮೋಡ....

ಕಳೆದ ವರ್ಷ ನಮ್ಮ 'ಗ್ರೈಡ್' ಪತ್ರಿಕೆಗೆ ಲೇಖನ ಬರೆಯಲೆಂದು ಆಸ್ಕರ್ ಪಿಸ್ಟೋರಿಯಸ್ ಎಂಬ ಅಥ್ಲೀಟ್ ಕುರಿತು ಓದಿದಾಗ ಅವನ ಬಗ್ಗೆ ಅಪಾರ ಮೆಚ್ಚುಗೆ ನನ್ನಲ್ಲಿ ಮೂಡಿತು. ತನ್ನನ್ನು "The fastest thing on no legs" (ಕಾಲುಗಳಿಲ್ಲದಿದ್ದರೂ ಅತಿ ವೇಗವಾಗಿ ಓಡುವವ) ಎಂದೇ ಪರಿಚಯಿಸಿಕೊಳ್ಳುತ್ತಿದ್ದ ಆಸ್ಕರ್‌ನ ಸಾಧನೆ ಸಾಮಾನ್ಯವಲ್ಲ.

ಆತ ಹುಟ್ಟಿದಾಗಲೇ ಆತನ ಎರಡೂ ಮಂಡಿಗಳ ಕೆಳಗೆ ಫಿಬುಲಾ ಮೂಳೆಗಳೇ ಇರಲಿಲ್ಲ. ಆದ್ದರಿಂದ ಅವನಿಗೆ ಒಂದು ವರ್ಷ ವಯಸ್ಸಾಗುವ ಮುನ್ನವೇ ಮಂಡಿ ಕೆಳಗಿನ ಕಾಲುಗಳನ್ನು ವೈದ್ಯರು ಕತ್ತರಿಸಿ ಹಾಕಿದರು. ಆದರೂ ಆಸ್ಕರ್ ತನ್ನನ್ನು ಎಂದೂ ಅಂಗವಿಕಲ ಎಂದು ಭಾವಿಸಲಿಲ್ಲ. ಅಕ್ಕ ಅಣ್ಣ ಶಾಲೆಗೆ ಹೊರಡುವ ಮುನ್ನ ಶೂಗಳನ್ನು ತೊಡುತ್ತಿದ್ದಷ್ಟೆ ಸಹಜವಾಗಿ ಆಸ್ಕರ್ ತನ್ನ ಮಂಡಿಗೆ ಕೃತಕ ಕಾಲುಗಳನ್ನು ಜೋಡಿಸಿಕೊಂಡು ಹೊರಡುತ್ತಿದ್ದ. ಹಾಗೆಯೇ ಕಾಲುಗಳಿಲ್ಲದಿದ್ದರೂ ಫುಟ್‌ಬಾಲ್ ಕ್ರೀಡೆಯ ಬಗ್ಗೆ ಆಸಕ್ತಿ ಹೊಂದಿದ್ದು ಆ ಆಟದಲ್ಲಿ ಭಾಗವಹಿಸುತ್ತಿದ್ದ. ಒಮ್ಮೆ ಮಂಡಿಗೆ ಪೆಟ್ಟಾಗಿದ್ದರಿಂದ ಫುಟ್‌ಬಾಲ್ ಆಟವನ್ನು ತೊರೆದು ಅಥ್ಲೆಟಿಕ್ಸ್ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದ.

ಆ ನಿಟ್ಟಿನಲ್ಲಿ ತನ್ನೆಲ್ಲ ಶ್ರಮವನ್ನು ಹರಿಸಿದ ಆಸ್ಕರ್ ಅಂಗವಿಕಲರಿಗೆಂದು ನಡೆಯುವ ಪ್ಯಾರಾಲಿಂಪಿಕ್ಸ್‌ನಲ್ಲಿ ಹಲವಾರು ಪದಕಗಳನ್ನು ಗೆದ್ದು ವಿಶ್ವದ ಗಮನವನ್ನೇ ಸೆಳೆದ. ಸುಂದರನೂ ಸಾಹಸಿಯೂ ಆದ ಆಸ್ಕರ್ ನೈಕ್ ತರಹದ ಕಂಪನಿಗಳಿಗೆ ರೂಪದರ್ಶಿಯಾಗಿ ಕೋಟ್ಯಾಂತರ ಡಾಲರ್‌ಗಳನ್ನು ಸಂಭಾವನೆಯಾಗಿ ಪಡೆದ. ಅಂಗವಿಕಲರಲ್ಲಿ ಬದುಕಿನ ಬಗ್ಗೆ ಆಸ್ಕರ್ ಅದೆಷ್ಟು ವಿಶ್ವಾಸ ಮೂಡಿಸಿದನೆಂದರೆ ಅಂತರರಾಷ್ಟ್ರೀಯ ಟೈಮ್ ಪತ್ರಿಕೆ ಪ್ರಕಟಿಸಿದ 'ಜಗತ್ತಿನ ನೂರು ಪ್ರಭಾವಿ ವ್ಯಕ್ತಿಗಳ' ಪಟ್ಟಿಯಲ್ಲಿ ಆಸ್ಕರ್ ಕೂಡ ಸ್ಥಾನ ಪಡೆದ.


ಇಂತಹ ಆಸ್ಕರ್ ಕಳೆದ ವಾರ ತನ್ನ ಪ್ರಿಯತಮೆ ರೀವಾ ಎಂಬಾಕೆಯನ್ನು ಬೇಕಂತಲೇ ಕೊಂದ ಎಂಬ ಆರೋಪವನ್ನು ಹೊತ್ತು ಈಗ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸುತ್ತಿದ್ದಾನೆ. ಒಂದು ರೀತಿಯಲ್ಲಿ ಆಸ್ಕರ್‌ನ ಯಶಸ್ಸು ಮತ್ತು ದುರಂತಗಾಥೆ ಆತನ ದಕ್ಷಿಣ ಆಫ್ರಿಕಾ ದೇಶದ ಕತೆಯೂ ಆಗಿದೆ.

ಹತ್ತಿರತ್ತಿರ ಐವತ್ತು ವರ್ಷಗಳ ಕಾಲ ವರ್ಣಭೇದ ನೀತಿಯಡಿ ತತ್ತರಿಸಿದ್ದ ದಕ್ಷಿಣ ಆಫ್ರಿಕಾ ಹದಿನೆಂಟು ವರ್ಷಗಳ ಹಿಂದೆ ಅದರಿಂದ ಹೊರಬಂದು ಎಲ್ಲರಿಗೂ ಸಮಾನ ಹಕ್ಕುಗಳನ್ನು ಕೊಡುವ ಸಂವಿಧಾನವನ್ನು ರಚಿಸಿಕೊಂಡಿತ್ತು. ಹಲವಾರು ಸಂಸ್ಕೃತಿ ಮತ್ತು ಸಮುದಾಯಗಳ ಜನ ಆ ದೇಶದ ನಿವಾಸಿಗಳಾಗಿರುವುದರಿಂದ ತನ್ನನ್ನು 'ಕಾಮನಬಿಲ್ಲು ದೇಶ'ವೆಂದು ಬಣ್ಣಿಸಿಕೊಂಡಿತ್ತು. ಆಫ್ರಿಕಾದ ಬುಡಕಟ್ಟು ಸಮುದಾಯಗಳಲ್ಲಿ ಕಾಮನಬಿಲ್ಲು ಉಜ್ವಲ ಭವಿಷ್ಯದ ಸಂಕೇತವೂ ಆಗಿರುವುದರಿಂದ ಇನ್ನು ಮುಂದೆ ಆ ದೇಶ ಎಲ್ಲ ರೀತಿಯಲ್ಲಿ ಪ್ರಗತಿಯನ್ನು ಹೊಂದುತ್ತದೆ ಎಂದು ನಂಬಲಾಗಿತ್ತು.

ಆದರೀಗ ಅದೆಲ್ಲ ಸುಳ್ಳಾಗಿ ಅಲ್ಲಿನ ವಸ್ತುಸ್ಥಿತಿಯೇ ಬೇರೆಯದ್ದಾಗಿದೆ. ಆಫ್ರಿಕಾ ಖಂಡದಲ್ಲಿ ದಕ್ಷಿಣ ಆಫ್ರಿಕಾ ದೇಶವು ಅತಿ ಶ್ರೀಮಂತ ರಾಷ್ಟ್ರವಾಗಿದ್ದರೂ ಅದೆಲ್ಲ ಶೇ. 10 ಜನರ ಕೈಯಲ್ಲಿರುವುದರಿಂದ ಉಳಿದ ಶೇ. 90 ಜನ ಕಡುಬಡತನದಲ್ಲಿ ಜೀವಿಸುತ್ತಿದ್ದಾರೆ. ಉಳ್ಳವರು ಮತ್ತು ಬಡವರ ನಡುವೆ ದೊಡ್ಡ ಕಂದಕವೇ ಇರುವುದರಿಂದ ಅಲ್ಲಿನ ಅಪರಾಧಗಳ ಸಂಖ್ಯೆ ಏರುತ್ತಲೇ ಇದೆ. ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯೂ ಭ್ರಷ್ಟಗೊಂಡು ಡಕಾಯಿತಿ, ದರೋಡೆ, ದಾಳಿ, ಕಾರ್ ಕದಿಯುವಿಕೆ, ಅಂಗಡಿ ಮತ್ತು ಬಜಾರ್‌ಗಳಲ್ಲಿ ಲೂಟಿ ಇವೆಲ್ಲ ನಿತ್ಯ ನಡೆಯುತ್ತಲೇ ಇರುತ್ತವೆ. ಹಗಲಲ್ಲೂ ಜನ ತಮ್ಮ ಮನೆಯಲ್ಲಿ ಇರುವಾಗಲೇ ಕಳ್ಳರು ಬಂದು ಲೂಟಿ ಮಾಡುವುದು ಸರ್ವೇಸಾಮಾನ್ಯ ಎಂಬಂತಾಗಿದೆ. ಇಂತಹ ಪ್ರಕರಣಗಳು ಅದೆಷ್ಟು ಪ್ರಮಾಣದಲ್ಲಿ ನಡೆಯುತ್ತಿವೆ ಎಂದರೆ ಒಂದು ಅಂದಾಜಿನ ಪ್ರಕಾರ ದಕ್ಷಿಣ ಆಫ್ರಿಕಾ ದೇಶದಲ್ಲಿ ಮನೆಗಳಿಗೆ ಅಲಾರಾಮ್‌ಗಳನ್ನು ಅಳವಡಿಸುವ ಬ್ಯುಸಿನೆಸ್‌ನ ಒಟ್ಟು ವಹಿವಾಟು ಸುಮಾರು ಏಳು ಬಿಲಿಯನ್ ಡಾಲರ್! ಮನೆರಕ್ಷಣೆಗಲ್ಲದೆ ತಮ್ಮ ಪ್ರಾಣರಕ್ಷಣೆಗೆ ಜನ ಬಂದೂಕುಗಳನ್ನು ಹೊಂದಿರುತ್ತಾರೆ.

ಸ್ವತಃ ಆಸ್ಕರ್ ಮೇಲೆ ಹಲವು ಬಾರಿ ದೈಹಿಕ ದಾಳಿಗಳಾಗಿವೆಯಲ್ಲದೆ ಅವರ ಮನೆಯಲ್ಲಿ ಹಲವು ಬಾರಿ ಕಳ್ಳತನಗಳೂ ಆಗಿವೆ. ಇದರ ಜೊತೆಗೆ ಅವರಿಗೆ ಜೀವ ಬೆದರಿಕೆಗಳೂ ಇದ್ದವು. ಈ ಎಲ್ಲ ಕಾರಣಕ್ಕೆ ಆಸ್ಕರ್ ಕೆಲವು ಗನ್‌ಗಳನ್ನು ಹೊಂದಿದ್ದರು. ಅಷ್ಟೇ ಅಲ್ಲ ಪ್ರತಿದಿನ ತಮ್ಮ ಮಂಚದ ಪಕ್ಕ ಒಂದು ಗನ್ ಮತ್ತು ಒಂದು ಕ್ರಿಕೆಟ್ ಬ್ಯಾಟ್ ಇಟ್ಟುಕೊಂಡೇ ನಿದ್ದೆ ಮಾಡುವುದನ್ನು ಅವರು ರೂಢಿ ಮಾಡಿಕೊಂಡಿದ್ದರು. ಅವರಲ್ಲಿದ್ದ ಒಂದು ಗನ್‌ಅನ್ನು ಉಪಯೋಗಿಸಿಯೇ ತಮ್ಮ ಪ್ರಿಯತಮೆ ರೀವಾಳನ್ನು ಕೊಂದು ಹಾಕಿದರು ಎಂಬ ಆರೋಪ ಇವತ್ತು ಆಸ್ಕರ್ ಮೇಲಿದೆ.





ರೂಪದರ್ಶಿ ಮತ್ತು ಟಿವಿ ಸ್ಟಾರ್ ಆಗಿದ್ದ ರೀವಾ ಮತ್ತು ಆಸ್ಕರ್ ಕೇವಲ ಮೂರು ತಿಂಗಳ ಹಿಂದೆ ಭೇಟಿಯಾಗಿದ್ದರು. ಕೆಲ ದಿನಗಳಲ್ಲೇ ಅವರ ನಡುವಿನ ಸ್ನೇಹ ಪ್ರೇಮವಾಗಿ ಪರಿವರ್ತನೆಗೊಂಡಿತ್ತು. ಆಸ್ಕರ್ ತನ್ನ ಮಿತ್ರರ ಬಳಿ ರೀವಾ ತನಗೆ ಸೂಕ್ತವಾದ ಯುವತಿ ಎಂದು ಹೇಳಿದ್ದರೆ ರೀವಾ ತನ್ನ ಗೆಳತಿಯರಲ್ಲಿ "ಆಸ್ಕರ್‌ನನ್ನು ಮದುವೆಯಾಗಲು ನಾನು ಸಿದ್ಧ" ಎಂದಿದ್ದಳು. ಮೊನ್ನೆ ಪ್ರೇಮಿಗಳ ದಿನವನ್ನು ಇಬ್ಬರೂ ಜೊತೆಜೊತೆಗೆ ಬರಮಾಡಿಕೊಳ್ಳಲು ನಿರ್ಧರಿಸಿದರು. ಅದರಂತೆ ಫೆಬ್ರವರಿ 13ರಂದು ಪ್ರಿಟೋರಿಯಾ ನಗರದಲ್ಲಿರುವ ಆಸ್ಕರ್‌ನ ಬಂಗಲೆಗೆ ರೀವಾ ಬಂದಳು: ಅವತ್ತೇ ರಾತ್ರಿ ಆಕೆ ಹೆಣವಾದಳು.

ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಕಾರ ಅವತ್ತು ರಾತ್ರಿ ಆಸ್ಕರ್ ಮತ್ತು ರೀವಾ ಮಧ್ಯೆ ದೊಡ್ಡ ಜಗಳವಾಯಿತು. ಆಗ ರೀವಾ ವಿರುದ್ಧ ವ್ಯಗ್ರನಾದ ಆಸ್ಕರ್ ಆಕೆ ಬಾತ್‌ರೂಮಿಗೆ ಹೋಗಿದ್ದಾಗ ತನ್ನ ಗನ್‌ನಿಂದ ಗುಂಡುಗಳನ್ನು ಹಾರಿಸಿ ಆಕೆಯನ್ನು ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದ.

ಆದರೆ ಆಸ್ಕರ್ ಪ್ರಕಾರ ಅಂದು ನಡೆದದ್ದೇ ಬೇರೆ. "ಅವತ್ತು ರೀವಾ ಮತ್ತು ನಾನು ಜೊತೆಯಾಗಿ ಊಟ ಮಾಡಿದೆವು. ಆನಂತರ ನನ್ನ ಬೆಡ್‌ರೂಮಿನಲ್ಲಿ ಆಕೆ ಯೋಗಾಭ್ಯಾಸ ಮಾಡುತ್ತಿದ್ದಾಗ ನಾನು ಟಿವಿ ನೋಡುತ್ತಿದ್ದೆ. ನಾವಿಬ್ಬರೂ ಪರಸ್ಪರ ಅಪಾರವಾಗಿ ಪ್ರೀತಿಸುತ್ತಿದ್ದೆವು. ನಾನು ಅವತ್ತು ತುಂಬಾ ಸಂತಸದಿಂದಿದ್ದೆ. ನನಗೆ ಆಕೆ ಒಂದು ವ್ಯಾಲೆಂಟೈನ್ಸ್ ಉಡುಗೊರೆಯನ್ನು ಕೊಟ್ಟು ಮಾರನೆ ದಿನ ನಾನು ಅದನ್ನು ತೆರೆಯಬೇಕು ಎಂದಳು. ಸ್ವಲ್ಪ ಹೊತ್ತಿನ ನಂತರ ನಾವಿಬ್ಬರೂ ನಿದ್ದೆ ಮಾಡಿದೆವು. ನಾನು ನನ್ನ ಕೃತಕ ಕಾಲುಗಳನ್ನು ಕಳಚಿಟ್ಟಿದ್ದೆ. ಈ ಹಿಂದೆ ಜೀವ ಬೆದರಿಕೆಗಳನ್ನು ಮತ್ತು ಕಳ್ಳತನಗಳನ್ನು ನಾನು ಕಂಡಿರುವುದರಿಂದ ಎಂದಿನಂತೆ ಅವತ್ತೂ ನನ್ನ ಮಂಚದ ಪಕ್ಕದಲ್ಲಿ ನನ್ನ ಗನ್ ಇಟ್ಟುಕೊಂಡಿದ್ದೆ.

ಮಧ್ಯ ರಾತ್ರಿ ನನಗೆ ಎಚ್ಚರವಾಯಿತು. ಆಗ ಬಾತ್‌ರೂಮಿನಿಂದ ಎಂತಹದ್ದೋ ಸದ್ದು ಕೇಳಿಸಿತು. ಭೀತಿ ನನ್ನನ್ನು ಆವರಿಸಿಕೊಂಡಿತು. ಬಾತ್‌ರೂಮಿಗೆ ಕಳ್ಳರನ್ನು ತಡೆಯುವಂತಹ ಗ್ರಿಲ್ ಹಾಕಿರಲಿಲ್ಲ ಮತ್ತು ಮನೆಯಲ್ಲಿ ಕೆಲಸ ಮಾಡುತಿದ್ದವರು ಹೊರಗೆ ಏಣಿಯೊಂದನ್ನು ಇಟ್ಟಿದ್ದು ನನಗೆ ನೆನಪಾಯಿತು. ಯಾರೋ ನನ್ನ ಮನೆಯನ್ನು ಪ್ರವೇಶಿಸಿದ್ದಾರೆ ಎಂದು ನನಗನ್ನಿಸಿತು. ಸುತ್ತಲೂ ಕತ್ತಲು ಆವರಿಸಿದ್ದರೂ ನನಗೆಷ್ಟು ಭಯವಾಗಿತ್ತೆಂದರೆ ನಾನು ಲೈಟ್‌ಗಳನ್ನು ಆನ್ ಮಾಡಲಿಲ್ಲ.

ನಾನು ನನ್ನ ಕೃತಕ ಕಾಲುಗಳನ್ನು ಹಾಕಿಕೊಂಡಿರಲಿಲ್ಲವಾದ್ದರಿಂದ ನಡೆಯುವುದು ನನಗೆ ಕಷ್ಟವಾಗಿತ್ತು. ಆದರೂ ಬಾತ್‌ರೂಮಿನಲ್ಲಿದ್ದವರು ಹೊರಗೆ ಬಂದರೆ ನನ್ನ ಮತ್ತು ರೀವಾಳ ಪ್ರಾಣಕ್ಕೆ ಅಪಾಯವಿತ್ತು. ನಾನು ನನ್ನ ಬೆಡ್‌ರೂಮಿನಲ್ಲಿ ಬಂಧಿ ಆಗಿದ್ದೇನೆ ಎಂದೆನಿಸಿತು.

ಆಗ ನಾನು ನನ್ನ ಗನ್ ಅನ್ನು ಎತ್ತಿಕೊಂಡು ರೀವಾ ಇನ್ನೂ ನಿದ್ರಿಸುತ್ತಿದ್ದಾಳೆಂದು ಭಾವಿಸಿ, ಪೊಲೀಸರಿಗೆ ಫೋನ್ ಮಾಡುವಂತೆ ಆಕೆಗೆ ಜೋರಾಗಿ ಹೇಳುತ್ತಲೇ ಬಾತ್‌ರೂಮಿನತ್ತ ಹೋಗಿ ಮುಚ್ಚಿಕೊಂಡಿದ್ದ ಬಾಗಿಲತ್ತ ಗುಂಡುಗಳನ್ನು ಹಾರಿಸಿದೆ. ಆದರೆ ಮಂಚದ ಮೇಲೆ ಮಲಗಿದ್ದ ರೀವಾಳಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಆಗ ನಾನು ಬೆಡ್‌ರೂಮಿಗೆ ಬಂದು ನೋಡಿದರೆ ರೀವಾ ಅಲ್ಲಿರಲಿಲ್ಲ. ಆಗ ಬಾತ್‌ರೂಮಿನಲ್ಲಿ ಇದ್ದದ್ದು ರೀವಾ ಆಗಿರಬಹುದೇ ಎಂದು ನನಗನ್ನಿಸಿತು. ನಾನು "ರೀವಾ, ರೀವಾ" ಎಂದು ಕರೆಯುತ್ತಾ ಬಾಗಿಲನ್ನು ಬಡಿದೆ. ಬಾಗಿಲನ್ನು ತೆರೆಯಲು ನೋಡಿದೆ. ಅದು ತೆರೆಯಲಿಲ್ಲ. ಬೆಡ್‌ರೂಮಿನ ಬಾಲ್ಕನಿಗೆ ಬಂದು "ಹೆಲ್ಪ್ ಹೆಲ್ಪ್" ಎಂದು ಚೀರಿದೆ. ವಾಪಸ್ ಬಂದು ನನ್ನ ಕೃತಕ ಕಾಲುಗಳನ್ನು ತೊಟ್ಟು, ಕ್ರಿಕೆಟ್ ಬ್ಯಾಟ್ ಹಿಡಿದು ಬಾತ್ ರೂಮಿನ ಬಾಗಿಲನ್ನು ಹೊಡೆದು ಹಾಕಿದೆ. ಬಾತ್ ರೂಮಿನೊಳಗೆ ಕುಸಿದು ಬಿದ್ದಿದ್ದ ರೀವಾಳ ಜೀವ ಇನ್ನೂ ಇತ್ತು. ಆಕೆಯನ್ನು ಹೊರಗೆ ಎತ್ತಿಕೊಂಡು ಬಂದ ನಾನು ನನ್ನ ಮಿತ್ರ ಜಾನ್ ಎಂಬಾತನಿಗೆ ಫೋನ್ ಮಾಡಿ ಸುದ್ದಿ ಇಳಿಸಿದೆ. ಆಂಬುಲೆನ್ಸ್‌ನವರಿಗೂ ಫೋನ್ ಮಾಡಿದೆ. ರೀವಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಆಕೆಯನ್ನು ಎತ್ತಿಕೊಂಡು ಕೆಳಗೆ ಬಂದೆ. ಆದರೆ ರೀವಾ ನನ್ನ ತೋಳಿನಲ್ಲೇ ಕೊನೆಯುಸಿರೆಳೆದಳು.

ನನ್ನ ಪ್ರೀತಿಯ ರೀವಾಳನ್ನು ಕೊಲ್ಲುವ ಉದ್ದೇಶ ನನ್ನದಾಗಿರಲಿಲ್ಲ, ನಿಜವಾಗಲೂ ಬಾತ್‌ರೂಮಿನಲ್ಲಿ ಕಳ್ಳರು ಅವಿತುಕೊಂಡಿದ್ದಾರೆಂದು ಭಾವಿಸಿ ನಮ್ಮಿಬ್ಬರ ರಕ್ಷಣೆಗೆಂದು ಗುಂಡುಗಳನ್ನು ಹಾರಿಸಿದೆ" ಎಂದು ಆಸ್ಕರ್ ನ್ಯಾಯಾಲಯದ ಮುಂದೆ ಕಣ್ಣೀರಿಟ್ಟಿದ್ದಾನೆ.

ಕಾರ್ಬನ್ ಫೈಬರ್‌ನಿಂದ ತಯಾರಿಸಲ್ಪಟ್ಟಿರುವ ಕೃತಕ ಓಟದ ಬ್ಲೇಡ್‌ಗಳನ್ನು ಅಳವಡಿಸಿಕೊಂಡು ಓಡುವುದರಿಂದ ಆಸ್ಕರ್‌ನನ್ನು ಮಾಧ್ಯಮಗಳು 'ಬ್ಲೇಡ್ ರನ್ನರ್' ಎಂದೇ ಕರೆಯುತ್ತವೆ. ಆಸ್ಕರ್ ಕೂಡ ತನ್ನ ಆತ್ಮಕತೆಗೆ 'ಬ್ಲೇಡ್ ರನ್ನರ್' ಎಂದೇ ಹೆಸರಿಟ್ಟಿದ್ದಾನೆ. ಅದರಲ್ಲಿ ಆತ ತನ್ನ ತಾಯಿ ಶೀಲಾ ಬಗ್ಗೆ ಹೀಗೆ ಬರೆದಿದ್ದಾನೆ:

ಕಂಡಹಾಗೆ




editorlankesh@gmail.com • ಗೌರಿ ಲಂಕೇಶ್

"ವೈದ್ಯರು ನನ್ನ ಕಾಲುಗಳನ್ನು ಕತ್ತರಿಸಿ ಹಾಕುವ ಐದು ತಿಂಗಳ ಮುನ್ನವೇ ನನ್ನ ಅಮ್ಮ ನನಗೊಂದು ಪತ್ರ ಬರೆದಿಟ್ಟಿದ್ದರು. ಅದರಲ್ಲಿ ಆಕೆ 'ನಿಜವಾಗಲೂ ಸ್ಪರ್ಧೆಯಲ್ಲಿ ಸೋಲುವವರು ಕೊನೆಯಲ್ಲಿ ಬರುವವರಲ್ಲ, ಬದಲಾಗಿ ಸ್ಪರ್ಧಿಸದೇ ಹೊರಗೆ ಕೂತಿರುವವರು ಸೋಲುತ್ತಾರೆ.' ನಾನು ದೊಡ್ಡವನಾದಾಗ ಆ ಪತ್ರವನ್ನು ಅಮ್ಮ ನನಗೆ ಕೊಟ್ಟಿದ್ದರು."

ಆಸ್ಕರ್ 15 ವರ್ಷದವನಾಗಿದ್ದಾಗ ತನ್ನ ತಾಯಿಯನ್ನು ಕಳೆದುಕೊಂಡ. ಆಕೆಯನ್ನು ಆತ ಅದೆಷ್ಟು ಪ್ರೀತಿಸುತ್ತಿದ್ದನೆಂದರೆ ಆಕೆಯ ಹುಟ್ಟುಹಬ್ಬದ ದಿನಾಂಕ ಮತ್ತು ಆಕೆ ಮರಣ ಹೊಂದಿದ ದಿನಾಂಕಗಳನ್ನು ತನ್ನ ತೋಳಿನ ಮೇಲೆ ಹಚ್ಚೆ ಹೋಯಿಸಿಕೊಂಡಿದ್ದಾನೆ.

ಇಂತಹ ಆಸ್ಕರ್ ಇವತ್ತು ಕೊಲೆ ಆರೋಪದಲ್ಲಿ ಸಿಲುಕಿಕೊಂಡಿದ್ದಾನೆ. ಇಂಗ್ಲಿಷ್‌ನಲ್ಲಿ "There will be a pot of gold at the end of a rainbow" ಎಂಬ ಮಾತಿದೆ. ಅದರ ಅರ್ಥ ಕಾಮನಬಿಲ್ಲಿನ ಅಡಿ ಚಿನ್ನ ತುಂಬಿರುವ ಬಿಂದಿಗೆ ಇರುತ್ತದೆ ಎಂದು.


ಆದರೆ ಆಸ್ಕರ್ ಮತ್ತು ಆತನ ದೇಶವಾದ ದಕ್ಷಿಣ ಆಫ್ರಿಕಾದ ಪಾಲಿಗೆ ಕಾಮನಬಿಲ್ಲಿನ ಅಡಿ ಚಿನ್ನ ತುಂಬಿರುವ ಬಿಂದಿಗೆಯ ಬದಲಾಗಿ ಬಂದೂಕು ಮತ್ತು ಅಪರಾಧಗಳಿವೆ ಎಂದು ಈ ಪ್ರಕರಣದಿಂದ ಸಾಬೀತಾಗಿದೆ.... ●


ನೆಲಕ್ಕುರುಳಿದ ಮಾವಿನ ಮರಗಳು...

ಹೊಸಕೋಟೆಯ ದುರಂತದ ಎರಡು ಪ್ರಕರಣ

ಬಚ್ಚೇಗೌಡರ ಬಿಹಾರದಲ್ಲಿ...!




ರಕ್ಕಸ ಬಚ್ಚೇಗೌಡ

ದೇಶಕ್ಕೊಂದು ಸಂವಿಧಾನವಿದೆ, ನೆಲಕ್ಕೊಂದು ಕಾನೂನಿದೆ, ಸರ್ಕಾರ ಜನರ ಮಾನ-ಪ್ರಾಣ ಕಾಯುತ್ತದೆ. ಅದಕ್ಕೆಂದೇ ಪೊಲೀಸ್ ಇಲಾಖೆಯಿದೆ, ಕೋರ್ಟಿದೆ; ಇತ್ಯಾದಿ ಪ್ರಜಾಪ್ರಭುತ್ವದ ಯಾವುದೇ ಅಸ್ತಿತ್ವದ ಲಕ್ಷಣಗಳ ಬಗ್ಗೆ ಇಲ್ಲಿ ಯಾವ ಭರವಸೆಯೂ ಉಳಿದಿಲ್ಲ!

ಮಂತ್ರಿ ಬಚ್ಚೇಗೌಡರ ಪಾಳೆಯಪಟ್ಟಾದ ಬೆಂಗಳೂರು ಸೆರಗಿನ ಹೊಸಕೋಟೆಯನ್ನು ಪತ್ರಿಕೆಗಳು ಕರ್ನಾಟಕದ ಬಿಹಾರವೆಂದೇ ಬಣ್ಣಿಸುತ್ತ ಬಂದಿವೆ. ವಾಗಟ ಹತ್ಯಾಸರಣಿ, ಕೋಡಳ್ಳಿ ಸೊಣ್ಣಪ್ಪನೆಂಬ ರಕ್ತ ಪಿಪಾಸುವಿನ ಅಟ್ಟಹಾಸ ಮತ್ತು ಇಂಥ ಹಂತಕ ಪಡೆಗಳ ಮೂಲಕ ಹೊಸಕೋಟೆಯನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡೇ ಬಂದ ಬಚ್ಚೇಗೌಡರ ಮಂತ್ರಿಗಿರಿ ಈಗ ತನ್ನ ಪರಮಾವಧಿಯ ಹಂತದಲ್ಲಿದೆ. ಇನ್ನು ಹೊಸಕೋಟೆಯಲ್ಲಿ ರಕ್ತ ಹರಿಯದಿರುತ್ತಾ...?

ಇಡೀ ಹೊಸಕೋಟೆಯ ದೌರ್ಭಾಗ್ಯವನ್ನು ಸಾರಿ ಹೇಳಲು ಈ ಎರಡು ಪ್ರಕರಣಗಳೇ ಸಾಕು.

ಸರಿಸುಮಾರು ಇನ್ನೂರು ಮಂದಿಯ ರೌಡಿ ಪಡೆಯೊಂದು ರಾತ್ರೋರಾತ್ರಿ ಯಾರದೋ ಆಸ್ತಿಯ ಮೇಲೆ ದಾಳಿ ಮಾಡಿ ಅಲ್ಲಿದ್ದ 15 ಎಕರೆ ತೋಟದ



ಬಚ್ಚೇಗೌಡನ ತಮ್ಮ ಗೋಪಾಲಗೌಡ

ಸಾವಿರಾರು ಮಾವಿನಮರಗಳನ್ನು ನೆಲಸಮಗೊಳಿಸುತ್ತದೆ. ಬೆಳೆದು ನಿಂತಿದ್ದ ಅಷ್ಟೂ ಮರಗಳನ್ನು ಟಿಪ್ಪರ್ ಲಾರಿಗಳಲ್ಲಿ ಹೊತ್ತೊಯ್ದು ಸ್ಥಳಕ್ಕೆ ಬಂದ ಪೊಲೀಸರ ಎದುರೇ ಆಸ್ತಿಯ ಮಾಲೀಕರ ಮೇಲೆ ಗುಂಡು ಹಾರಿಸುತ್ತದೆ. ಯಾರದೋ ಆಸ್ತಿಗೆ ಯಾರೋ ರೌಡಿಗಳು ನುಗ್ಗಿ ಅಲ್ಲಿದ್ದವರನ್ನು ಹೊರದಬ್ಬಿ ಇಡೀ ತೋಟವನ್ನು ವಶಪಡಿಸಿಕೊಂಡಾಗಲೂ ಪೊಲೀಸರು ಬಂದು ರಕ್ಷಿಸುವುದು ಒತ್ತಟ್ಟಿಗಿರಲಿ, ಹೊಸಪೇಟೆ ಪೊಲೀಸ್ ಠಾಣೆಯಲ್ಲಿ ಕಾಟಾಚಾರದ ಎಫ್‌ಐಆರ್ ಕೂಡ ದಾಖಲಾಗುವುದಿಲ್ಲ!

ಇದಕ್ಕಿಂತ ಅಟ್ಟಹಾಸವೆಂದರೆ ಮಾರಕಾಸ್ತ್ರಗಳನ್ನು ಹಿಡಿದು ಹಳ್ಳಿಯೊಂದಕ್ಕೇ ನುಗ್ಗಿದ ಬಚ್ಚೇಗೌಡರ ಪಾತಕ ಪಡೆ ಸಿಕ್ಕಸಿಕ್ಕ ಗ್ರಾಮಸ್ಥರನ್ನು ಹಿಡಿದು ಬಡಿಯುತ್ತಿದ್ದರೂ ಅಲ್ಲಿಗೆ ಪೊಲೀಸರು ಬರುವುದಿಲ್ಲ ಮತ್ತು ಬಂದರೂ ಗಾಯಗೊಂಡವರನ್ನೇ ಹಿಡಿದು ಲಾಕಪ್ಪಿಗೆ ದಬ್ಬುತ್ತಾರೆ!

ಕಣ್ಣೂರಹಳ್ಳಿಯ ಬಂದೂಕು ರಾಜ್ಯ

ಇಡೀ ಹೊಸಕೋಟೆಯ ರಕ್ಕಸ ರಾಜ್ಯದ ಪರಿಚಯಕ್ಕೆ ಈ ಎರಡು ಪ್ರಕರಣಗಳಿಗಿಂತ ಬೇರೆ ಉದಾಹರಣೆ ಬೇಕಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ರೇಷ್ಮೆ ಮತ್ತು ಕಾರ್ಮಿಕ ಖಾತೆಗಳ ಮಂತ್ರಿಯಾದ ಹೊಸಕೋಟೆಯ ಬಚ್ಚೇಗೌಡರ ಅಟ್ಟಹಾಸದ ವಿರುದ್ಧ ಈತನಕ ಮೂಕಪ್ರೇಕ್ಷಕರಾಗಿರುತ್ತಿದ್ದ ಪೊಲೀಸರೀಗ ತಾವೇ ಹಂತಕ ಪಡೆಗಳ ಪಾತ್ರ ವಹಿಸುತ್ತಿರುವುದೊಂದೇ ಲೇಟೆಸ್ಟ್ ವ್ಯತ್ಯಾಸ.

ಹೊಸಕೋಟೆ ಕಸಬಾ ಹೋಬಳಿಯ ಕಣ್ಣೂರಹಳ್ಳಿಯ ಹೊರವಲಯದಲ್ಲಿರುವ 42 ಎಕರೆಗಳ ಮಾವಿನತೋಪು ಇದೇ ಹೊಸಕೋಟೆಯ ಹೆಚ್.ಎಂ. ಯಲ್ಲಪ್ಪನವರ ಕುಟುಂಬಕ್ಕೊಳಪಟ್ಟ ಸೊತ್ತು, ಅವರ ಮಕ್ಕಳಾದ ಡಾ. ಹರೀಶ್, ಮೋಹನ್ ಮತ್ತು ಮಂಜುನಾಥ್ ಹತ್ತಾರು ವರ್ಷಗಳಿಂದ ಇಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ. 1200 ಕ್ಕೂ ಅಧಿಕ ಮಾವಿನಮರಗಳು, ಹುಣಿಸೆ ಇತ್ಯಾದಿ ಅಸಂಖ್ಯಾತ ಕಾಡು ಮರಗಳನ್ನೂ ಬೆಳೆಸಿದ್ದಾರೆ. ಮಾಲೂರು ರಸ್ತೆ ದೇವನಗೊಂದಿ ಕ್ರಾಸ್‌ನಲ್ಲಿರುವುದರಿಂದ ಈ ಸೊತ್ತಿನ ಮೇಲೆ ಅನೇಕರಿಗೆ ಕಣ್ಣಿತ್ತು, ಹಾಗಂತ ಯಲ್ಲಪ್ಪನವರ ಮಕ್ಕಳಿಗೆ ಮಾರಲು ಇಷ್ಟವಿಲ್ಲ.

ಒಟ್ಟು 42 ಎಕರೆಗಳ ಈ ತೋಟದಲ್ಲಿ 15 ಎಕರೆಯನ್ನು ಮಾತ್ರ 1965ರಲ್ಲೇ ಕಣ್ಣೂರ ಹಳ್ಳಿಯ ಬಸಪ್ಪನಿಂದ ಯಲ್ಲಪ್ಪ ಖರೀದಿಸಿದ್ದರು. ಆ ಕಾಲಕ್ಕೇ ಈ ಸೊತ್ತಿನ ಮೇಲೆ ಬ್ಯಾಂಕ್‌ನಿಂದ 60 ಸಾವಿರ ರೂಪಾಯಿ ಸಾಲ ಕೂಡ ಪಡೆದಿದ್ದಾರೆ. ಬಚ್ಚೇಗೌಡ ಗೆದ್ದು ಬಿಜೆಪಿಯ ಶಾಸಕರಾಗಿ ಮಂತ್ರಿಯೂ ಆದ ಮೇಲೆ ಈ ಸೊತ್ತಿನ ಮೇಲೆ ಜಬರ್‌ದಸ್ತಿಗೆ ನಿಂತವನು ಬಾಣಸವಾಡಿಯ ಕುಖ್ಯಾತ ಹನ್ಸಿಕಾ ಬಿಲ್ಡರ್ಸ್ ಖದೀಮ ಜಯಶೀಲರೆಡ್ಡಿ!

ಬಲ್ಲ ಮೂಲಗಳ ಪ್ರಕಾರ ಈ ಜಯಶೀಲರೆಡ್ಡಿ ಬಚ್ಚೇಗೌಡರ ತಮ್ಮ ಗೋಪಾಲಗೌಡನ ಸ್ಲೀಪಿಂಗ್ ಪಾರ್ಟನರ್. ಯಲ್ಲಪ್ಪ ಭೂಮಿ ಖರೀದಿಸುವಾಗ ಇನ್ನೂ ಹುಟ್ಟೇ ಇರದಿದ್ದ ಬಸಪ್ಪನ ಮಗ ಮುನಿರಾಜುನ ಹೆಸರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಜಯಶೀಲರೆಡ್ಡಿ ಪದೇ ಪದೇ ಯಲ್ಲಪ್ಪನ ಮಕ್ಕಳನ್ನು ಬೆದರಿಸುತ್ತಲೇ ಇದ್ದ. ಮೊನ್ನೆ ಫೆಬ್ರವರಿ 9ರ ಶನಿವಾರ ರಾತ್ರಿ 8ರ ಹೊತ್ತಿಗೆ ಸರಿಸುಮಾರು 200 ಮಂದಿ ಬಚ್ಚೇಗೌಡರ ಬಂಟರ ಸಮೇತ ಯಲ್ಲಪ್ಪನವರ ತೋಟದ ಮೇಲೆ ದಾಳಿಯಿಟ್ಟಿದ್ದಾನೆ.

ನೆಲಕ್ಕುರುಳಿದ ಮಾವಿನತೋಪು

ಮಚ್ಚು, ದೊಣ್ಣೆ ರಾಡುಗಳಲ್ಲದೆ ನಾಲ್ಕೈದು ಬಂದೂಕುಗಳ ಸಮೇತ ಏಕಾಏಕಿ ತೋಟಕ್ಕೆ ನುಗ್ಗಿದ ಬಚ್ಚೇಗೌಡರ ಬಂಟರಲ್ಲಿ ಪ್ರಮುಖನಾದವನು ಕಣ್ಣೂರಹಳ್ಳಿ ಕೆ.ಬಿ.ಕೃಷ್ಣ ಈತ ಲೋಕಲ್ ಬಿಜೆಪಿ ನಾಯಕ. ಜೊತೆಗೆ ಪೂಜೇನ ಅಗ್ರಹಾರದ ಮತ್ತೊಬ್ಬ ಬಿಜೆಪಿ ನಾಯಕ ಮತ್ತು ಹೊಸಕೋಟೆಯ ರೇಷ್ಮೆ ಕೃಷಿಕರ ಸಂಘದ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಎಂಬ ಬಚ್ಚೇಗೌಡರ ಬಲಗೈ ಬಂಟನೂ ಇದ್ದ. ದೊಡ್ಡ ಬಸಪ್ಪನ ಮಗ ಮಂಜುನಾಥ್ ಎಂಬ ಮತ್ತೊಬ್ಬ ಬಚ್ಚೇಗೌಡರ ಶಿಷ್ಯನೂ ದಾಳಿಕೋರರ ನೇತೃತ್ವ ವಹಿಸಿದ್ದ.

ನುಗ್ಗಿದ ಕೆಲವೇ ಗಳಿಗೆಯಲ್ಲಿ ತೋಟದಲ್ಲಿದ್ದ ಶೆಡ್‌ಗೆ ಬುಲ್ಡೋಜರ್ ನುಗ್ಗಿಸಿದ ದುಷ್ಕರ್ಮಿಗಳು ವಿದ್ಯುತ್‌ಚಾಲಿತ ಹತ್ತಾರು ಗರಗಸಗಳ ಮೂಲಕ ಬೆಳೆದು ನಿಂತ ಮರಗಳನ್ನು ನೆಲಕ್ಕುರುಳಿಸತೊಡಗಿದೆ. ಮತ್ತೊಂದು ಗುಂಪು ತೋಟದಲ್ಲಿದ್ದ ಯಲ್ಲಪ್ಪನವರ ಮಕ್ಕಳಿದ್ದ ಮನೆ ಮೇಲೆ ಗುಂಡು ಹಾರಿಸಲಾರಂಭಿಸಿದೆ.


ಐತಿಹಾಸಿಕ ಬ್ಯಾಂಕಿಗೂ ಕೊಳ್ಳಿಯಿಟ್ಟ ಪಟಾಲಂ



ನೂರು ವರ್ಷಗಳ ಇತಿಹಾಸವುಳ್ಳ ಹೊಸಕೋಟೆ ಟೌನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಸದ್ಯ ಅಧ್ಯಕ್ಷನಾಗಿರುವವನ ಹೆಸರು ಪರೋಡಿ ಶ್ರೀನಿವಾಸ್. ಬಚ್ಚೇಗೌಡರ ಹುಟ್ಟಾ ಚೇಲಾ ಮತ್ತು ಗೂಂಡಾಗಿರಿಯನ್ನೇ ತನ್ನ ಉಪಕಸುಬನ್ನಾಗಿಸಿಕೊಂಡವನು. ಅಧ್ಯಕ್ಷನಾದ ಮೇಲೆ ತನ್ನ ಹೆಸರನ್ನು ಲೆವೆಲ್ಲಿಗೆ ತಕ್ಕಂತೆ ಪಟೇಲ್ ಶ್ರೀನಿವಾಸ್ ಎಂದು ಬದಲಿಸಿಕೊಂಡಿದ್ದಾನೆ. ಅದೇನೆಂದು ಬಚ್ಚೇಗೌಡರು ಈತನನ್ನು ನೂರು ವರ್ಷದ ಇತಿಹಾಸವುಳ್ಳ ಬ್ಯಾಂಕಿನ ಅಧ್ಯಕ್ಷನನ್ನಾಗಿಸಿದರೊ ಗೆದ್ದ ಎರಡೇ ವರ್ಷಕ್ಕೆ ಹೊಸಕೋಟೆ ಟೌನ್ ಕೋ-ಆಪರೇಟಿವ್ ಬ್ಯಾಂಕ್ ದಿವಾಳಿಯೆದ್ದಿದೆ.

13 ಸಾವಿರದಷ್ಟು ಷೇರುದಾರರಿರುವ ಬ್ಯಾಂಕ್ ಪರೋಡಿ ಸೀನನ ಅಧ್ಯಕ್ಷತೆಯಲ್ಲಿ ಎಂಥ ದುರ್ಗತಿಗೆ ಮುಟ್ಟಿದೆಯೆಂದರೆ ಕಳೆದ ಎರಡು ವರ್ಷಗಳಿಂದ ಯಾವ್ವೊಬ್ಬ ಷೇರುದಾರರಿಗೂ ಡಿವಿಡೆಂಟ್ ಕೊಟ್ಟಿಲ್ಲ, ಅದಕ್ಕೆ ಕಾರಣ ಈತನ ಲೂಟಿ. ರಿಸರ್ವ್ ಬ್ಯಾಂಕಿನ ಅನುಮತಿಯನ್ನೇ ಪಡೆಯದೆ ಈತ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸಹಕಾರ ಭವನ ಕಟ್ಟಿಸಿದ್ದು ಕಮೀಷನ್ ಆಸೆಯಿಂದಲೇ ಹೊರತು ಕಾಳಜಿಯಿಂದೇನಲ್ಲ, ಹೀಗೆ ಕಟ್ಟಿಸಿದ ಸಹಕಾರ ಭವನದ ದುರವಸ್ಥೆಗೆ ಬಾಡಿಗೆದಾರರೇ ಬರುತ್ತಿಲ್ಲ, ಇವತ್ತಿಗೂ ಖಾಲಿ ಹೊಡೆಯುತ್ತಿದೆಯೆಂದರೆ ಇನ್ನು ಬಾಡಿಗೆ ಬರುವುದೆಲ್ಲಿಂದ?

ವಿಕಟವೆಂದರೆ ಈ ಸಹಕಾರ ಭವನದ ನಿರ್ವಹಣೆಗೆಂದೇ ತನ್ನ ಚೇಲಾಗಳನ್ನು ನೇಮಿಸಿ ಅವರ ಸಂಬಳ, ಭತ್ಯೆ ಹೆಸರಲ್ಲಿ ಈಗಾಗಲೇ ಏಳೆಂಟು ಲಕ್ಷ ಹುಡಿ ಹಾರಿಸಿದ್ದಾನೆ. ಇನ್ನು ಯಾರೇ ಸಾಲ ಪಡೆಯಬೇಕೆಂದರೂ ಷೇರು ಅಂತ ಸೆಪ ಮಾಡಿ ಲಕ್ಷಕ್ಕೆ ಎರಡೂವರೆ ಸಾವಿರ ರೂಪಾಯಿಗಳ ಕಮೀಷನ್ ಕೀಳುತ್ತಾನೆ. ಹೀಗೆ ಷೇರಿನ ಹೆಸರಲ್ಲಿ ಕಿತ್ತ ಕಮೀಷನ್‌ಗೆ ಈತನಕ ಲೆಕ್ಕ ಕೊಟ್ಟಿಲ್ಲ, ಕೊಟ್ಟ ಸಾಲವಾದರೂ ಯಾರಿಗೆ ಅಂತ ಕೆದಕ ಹೊರಟರೆ ಸಾಲ ಪಡೆದವರೆಲ್ಲ ಈತನ ನೆಂಟರಿಷ್ಟರು, ರಕ್ತ ಸಂಬಂಧಿಗಳೇ.



ಪರೋಡಿ ಶ್ರೀನಿವಾಸ್

ಅಧ್ಯಕ್ಷನಾದವನು ತನ್ನ ಸಂಬಂಧಿಗಳಿಗೆ ಸಾಲ ಕೊಡುವಂತಿಲ್ಲ ಎಂಬ ರಿಸರ್ವ್ ಬ್ಯಾಂಕ್ ನಿಯಮಾವಳಿಯೂ ಈತನಿಗೆ ಲೆಕ್ಕಕ್ಕಿಲ್ಲ, ಆ ಕಾಲದಿಂದಲೂ ವರ್ಷಂಪ್ರತಿ ಡಿವಿಡೆಂಟ್ ಪಡೆದ ಷೇರುದಾರರು ಈತ ಅಧ್ಯಕ್ಷನಾದ ಸೌಭಾಗ್ಯಕ್ಕೆ 'ಕಳೆದೆರಡು ವರ್ಷಗಳಿಂದ ಡಿವಿಡೆಂಡ್ ಕೊಟ್ಟೇ ಇಲ್ಲವಲ್ಲಯ್ಯ..' ಎಂದು ಗಲಾಟೆಗಿಳಿದರೆ ಅಂಥವರ ಮೇಲೆ ಬಚ್ಚೇಗೌಡರ ಗೂಂಡಾಪಡೆ ಕಟ್ಟಿಕೊಂಡು ಹಲ್ಲೆ ನಡೆಸುತ್ತಾನೆ.

ಇದು ಬಚ್ಚೇಗೌಡರ ನೆರಳಲ್ಲಿ ಹೊಸಕೋಟೆ ಟೌನ್ ಕೋ-ಆಪರೇಟಿವ್ ಬ್ಯಾಂಕಿನ ದುರಂತ. ಹೀಗೆ ಪುರಾತನ ಬ್ಯಾಂಕನ್ನು ದೋಚಿದ ಪರೋಡಿ ಸೀನ ಆ ದುಡ್ಡನ್ನೆಲ್ಲಿ ತಂದು ಏನು ಮಾಡುತ್ತಿದ್ದಾನೆಂದು ಕೆದಕಹೊರಟರೆ ಅಲ್ಲಿ ಕೂಡ ರಿಯಲ್ ಎಸ್ಟೇಟ್ ದಂಧೆಯ ವಾಸನೆ ಹೊಡೆಯುತ್ತದೆ. ಹೊಸಕೋಟೆ-ಚಿಂತಾಮಣಿ ರಸ್ತೆಯಲ್ಲಿ ತಲೆ ಎತ್ತಿದ ಪರೋಡಿ ಸೀನನ ಗಾರ್ಡನ್ ಲೇಔಟ್‌ಗೆ ಅಡಿಪಾಯ ಹಾಕಿಕೊಟ್ಟಿದ್ದೇ ಧಣೀ ಬಚ್ಚೇಗೌಡರು!

ಈತನ ದುರಾಡಳಿತ ಮತ್ತು ಹೊಸಕೋಟೆ ಟೌನ್ ಕೋ-ಆಪರೇಟಿವ್ ಬ್ಯಾಂಕಿನ ಲೂಟಿಯ ವಿರುದ್ಧ ಹತ್ತಾರು ಷೇರುದಾರರು - ಈಗಾಗಲೇ ರಿಸರ್ವ್ ಬ್ಯಾಂಕಿಗೆ ದೂರಿತ್ತಾಗಿದೆ. ಅಕ್ರಮಗಳನ್ನು ಸೂಕ್ಷ್ಮವಾಗೇ ಗಮನಿಸಿದ ರಿಸರ್ವ್ ಬ್ಯಾಂಕ್ ಅಧ್ಯಕ್ಷ ಸೀನನಿಗೆ ಐದು ಲಕ್ಷ ರೂಪಾಯಿಗಳ ದಂಡ ವಿಧಿಸಿದೆ. ನೂರು ವರ್ಷಗಳ ಇತಿಹಾಸವುಳ್ಳ 13 ಸಾವಿರ ಷೇರುದಾರರ ಬೆವರಿನ ಫಲವಾದ ಹೊಸಕೋಟೆಯ ಬ್ಯಾಂಕನ್ನೂ ಬಿಡದೆ ದೋಚುವ ಬಚ್ಚೇಗೌಡರ ಪಟಾಲಮ್ ದುರ್ಬುದ್ಧಿಗೆ ಕೊನೆಯುಂಟೆ?


ಇಂಥ ಮನೆಹಾಳು ರಾಜಕಾರಣ ಮಾಡಿ ಬಚ್ಚೇಗೌಡ ಹೊಸಕೋಟೆಯನ್ನು ಮುಂಡಾಮೋಚಬಹುದೇ ಹೊರತು ನಯಾಪೈಸೆಯ ಉದ್ಧಾರವಂತೂ ಕನಸಿನ ಮಾತೆ!

ತಕ್ಷಣವೇ ತಮ್ಮ ಕಾರೆತ್ತಿಕೊಂಡು ಹೊಸಕೋಟೆ ಟೌನ್ ಪೊಲೀಸ್ ಠಾಣೆಗೆ ಧಾವಿಸಿ ಬಂದ ಯಲ್ಲಪ್ಪನವರ ಮಗ ಡಾ. ಹರೀಶ್ ಪೊಲೀಸರೆದುರು ಎದೆ ಬಡಿದುಕೊಂಡು ಗೋಳಿಟ್ಟರೆ ಇನ್ಸ್‌ಪೆಕ್ಟರ್ ಕಾಶಿಯಾಗಲಿ, ಎಸ್‌ಐ ಶಿವರಾಜ್ ಆಗಲಿ- ಯಾರು ಪತ್ತೆಯಿಲ್ಲ. ಠಾಣೆಯಲ್ಲಿದ್ದವರ್‍ಯಾರೂ ದೂರು ದಾಖಲಿಸಿಕೊಳ್ಳಲಿಲ್ಲ. ಅಂತೂ ಇಂತೂ ಗುಂಜಾಡಿದ ಪೊಲೀಸ್ ಅಧಿಕಾರಿಯೊಬ್ಬ ಕೊನೆಗೆ ಇಬ್ಬರು ಪೊಲೀಸ್ ಪೇದೆಗಳನ್ನು ಹರೀಶ್ ಜೊತೆ ಕಳಿಸಿಕೊಟ್ಟರೆ ಆ ಅಮಾವಾಸ್ಯೆಯ ಕತ್ತಲಲ್ಲೂ ಬೆಳೆದು ನಿಂತಿದ್ದ ಸಾವಿರಾರು ಮರಗಳನ್ನು ಒಂದೊಂದಾಗಿ ನೆಲಸಮಗೊಳಿಸಲಾಗುತ್ತಿತ್ತು.

ಬಂದ ಪೊಲೀಸರನ್ನೂ ಲೆಕ್ಕಿಸದೇ ದುಷ್ಕರ್ಮಿಗಳು ಗುಂಡು ಹಾರಿಸುತ್ತಿದ್ದರೆ ಅದನ್ನು ನೋಡಿದ ಪೊಲೀಸರು ಯಾರೋ ಪಟಾಕಿ ಹೊಡೀತಿದ್ದಾರೆ ಕಣ್ರೀ...! ಎಂದು ಯಲ್ಲಪ್ಪನವರ ಮಕ್ಕಳನ್ನೇ ಬೆಪ್ಪಾಗಿಸುತ್ತಿದ್ದರು. ಮಾರನೇ ದಿನ ಮಧ್ಯಾಹ್ನದ ಹೊತ್ತಿಗೆ ಜೀಪಿನಲ್ಲಿ ಕ್ರೈಂ ಎಸ್.ಐ ಒಬ್ಬರು ಸ್ಥಳಕ್ಕೆ ಬಂದು ಕಾಟಾಚಾರಕ್ಕೆಂಬಂತೆ ಮೂವರನ್ನು ಬಂಧಿಸಿದರಾದರೂ ಅದರ ಮರುದಿನವೇ ಅವರನ್ನು ಪೊಲೀಸರು ಬಿಟ್ಟು ಕಳಿಸಿದರು.

ನಿಷ್ಕ್ರಿಯ ಪೊಲೀಸರು

ಸತತ ಎರಡು ದಿನಗಳ ಕಾಲ ಇಡೀ ತೋಟವನ್ನು ಆಕ್ರಮಿಸಿಕೊಂಡು ದಾಳಿಗೆಂದು ಬಂದಿದ್ದ ಇನ್ನೂರಕ್ಕೂ ಅಧಿಕ ಮಂದಿ ದುಷ್ಕರ್ಮಿಗಳಿಗೆ ಅಲ್ಲೇ ಮಾಂಸದ ಅಡುಗೆ ಮಾಡಲಾಯ್ತು. ಬಂದವರಿಗೆಲ್ಲರಿಗೂ ವಿಸ್ಕಿ ಬ್ರಾಂದಿಗಳ ಬಾಟಲುಗಳ ರಾಶಿಯನ್ನೇ ಹಾಕಲಾಗಿತ್ತು. ಹಾಡುಹಗಲಲ್ಲೇ ಕಡಿದ ಮರಗಳನ್ನು ಸಾಗಿಸಲಾಯ್ತು. ಇಷ್ಟಾಗ್ಯೂ ಹೊಸಕೋಟೆ ಟೌನ್ ಇನ್ಸ್‌ಪೆಕ್ಟರ್ ಕಾಶಿ . ಕಾಟಾಚಾರಕ್ಕೂ ಎಫ್‌ಐಆರ್ ದಾಖಲಿಸಲಿಲ್ಲ. ಡಿವೈಎಸ್‌ಪಿ ಕುಮಾರಸ್ವಾಮಿಯದ್ದೂ ಅದೇ ಅಸಹಾಯಕತೆ. ಕೊನೆಗೆ ಬೆಂಗಳೂರು ಗ್ರಾಮಾಂತರ ಎಸ್ಪಿ ಪ್ರಕಾಶರನ್ನು ಕಂಡು ಇಡೀ ಪ್ರಕರಣದ ವೀಡಿಯೋ ತೋರಿಸಿದ ನಂತರವೇ ಎಸ್ಪಿ ಪ್ರಕಾಶ್ ತಮ್ಮ ಕಚೇರಿಯಿಂದ ಎಫ್‌ಐಆರ್ ದಾಖಲಿಸಿದರೇ ಹೊರತು ಈತನಕ ಹೊಸಕೋಟೆಯ ಪೊಲೀಸರು ಮಾತ್ರ ದಾಳಿಗೀಡಾದ ಕಣ್ಣೂರಹಳ್ಳಿಯತ್ತ ತಲೆಹಾಕಲೇ ಇಲ್ಲ.


ಸತೀಶ್ ಗೌಡ

ಹನ್ಸಿಕಾ ಬಿಲ್ಡರ್ಸ್ ಧಣಿ ಜಯಶೀಲರೆಡ್ಡಿ ಮತ್ತು ಬಚ್ಚೇಗೌಡರ ತಮ್ಮನ ಜಂಟಿ ರಿಯಲ್ ಎಸ್ಟೇಟ್ ದಂಧೆಯ ಫಲವಾಗಿ ಇಡೀ ತೋಪಿನ ಸಾವಿರಾರು ಮರಗಳು ನೆಲಸಮಗೊಂಡು ಬಂದೂಕುಗಳಿಂದ ಹಾರಿದ ಗುಂಡುಗಳು ಇಡೀ ತೋಟದುದ್ದ ಚೆಟ್ಟಾಡುತ್ತಿದ್ದರೂ ಹೊಸಕೋಟೆ ಪೊಲೀಸ್ ಠಾಣೆಯಲ್ಲೊಂದು ಎಫ್‌ಐಆರ್ ಕೂಡ ದಾಖಲಾಗುವುದಿಲ್ಲ, ಅಷ್ಟೇ ಏಕೆ, ಮಾರಕಾಸ್ತ್ರ ಸಮೇತ ಹಿಡಿದು ತಂದವರನ್ನೇ ಪೊಲೀಸರು ಬಿಟ್ಟು ಕಳಿಸುತ್ತಾರೆಂದರೆ ಹೊಸಕೋಟೆಯಲ್ಲಿ ಯಾವ ಸರ್ಕಾರ, ಯಾವ ಕಾನೂನು, ಯಾವ ವ್ಯವಸ್ಥೆ ತಾನೇ ಅಸ್ತಿತ್ವದಲ್ಲಿರಲು ಸಾಧ್ಯ?

ಬಚ್ಚೇಗೌಡರ ರಾಕ್ಷಸ ರಾಜಕೀಯಕ್ಕೆ ಇದು ಒಂದು ನಿದರ್ಶನವಷ್ಟೆ. ತಮ್ಮ ಆಸ್ತಿ ಉಳಿಸಿಕೊಳ್ಳಲು ಕಂಡಕಂಡ ಪೊಲೀಸ್ ಅಧಿಕಾರಿಗಳನ್ನು ಕಂಡು ಇವತ್ತಿಗೂ ಕಣ್ಣೀರಿಡುತ್ತಿರುವ ಯಲ್ಲಪ್ಪನವರ ಮಕ್ಕಳ ಪಾಡು ನಿಜಕ್ಕೂ ನಾಯಿಪಾಡು!

ಇದಕ್ಕಿಂತಲೂ ದೊಡ್ಡ ಅನಾಹುತ ನಡೆದದ್ದು ಇದೇ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿಯ ಅರಸನಹಳ್ಳಿಯಲ್ಲಿ. ಮೊನ್ನೆ ಫೆಬ್ರವರಿ 7ರ ಬೆಳಗ್ಗೆ ಆರೂವರೆಗೆ ಇದ್ದಕ್ಕಿದ್ದಂತೆ ಮೂವತ್ತರಿಂದ 40 ಮಂದಿಯಿದ್ದ ಬಚ್ಚೇಗೌಡರ ಬೆಂಬಲಿಗರು ಮಾರಕಾಸ್ತ್ರಗಳನ್ನು ಹಿಡಿದು ಅರಸನಹಳ್ಳಿಯ ರೈತರ ಮೇಲೆ ದಾಳಿ ಮಾಡುತ್ತಾರೆ. ದೊಣ್ಣೆ, ಮಚ್ಚು, ಹಾರೆ, ರಾಡುಗಳನ್ನು ಹಿಡಿದಿದ್ದ ದಾಳಿಕೋರರು ತಮ್ಮ ಎದುರಾಳಿ ಗುಂಪಿನ ಸಿಕ್ಕಸಿಕ್ಕವರನ್ನು ಹಿಡಿದು ಬಡಿದಿದ್ದಾರೆ. ದಾಳಿಗೆ ಸಿಲುಕಿದ ಲಾಯರ್ ಮುನಿರಾಜು ತಲೆ ಸೀಳಿದ ಫಲವಾಗಿ ಒಂದೆಡೆ 14 ಹೊಲಿಗೆ ಮತ್ತೊಂದೆಡೆ 9 ಹೊಲಿಗೆ ಹಾಕಬೇಕಾಯ್ತು, ಇವರ ಅಣ್ಣ ದೇವರಾಜು ಎಂಬುವವರ ...ನ್ನುಮೂಳೆಯೇ ಮುರಿದುಹೋಯ್ತು, ರಾಜಬಾಬು


ಮುನಿನಾರಾಯಣ ಮತ್ತು ಮುನೇಗೌಡ ಎಂಬ ರೈತರಿಬ್ಬರಿಗೆ ಕೈ ಮೂಳೆ ಮುರಿದಿತ್ತು. ಈ ರೀತಿ ಬಚ್ಚೇಗೌಡರ ಬಂಟರ ಏಕಾಏಕಿ ದಾಳಿಗೀಡಾಗಿ ಗಾಯಗೊಂಡ ಅರಸನಹಳ್ಳಿಯ ಒಟ್ಟು ಗ್ರಾಮಸ್ಥರ ಸಂಖ್ಯೆ ಬರೋಬ್ಬರಿ ಎರಡು ಡಜನ್ನು.

ನಸುಕಿನ ದಾಳಿ

ಬೆಳ್ಳಂಬೆಳಗ್ಗೆ ಏಕಾಏಕಿ ನಡೆದ ದಾಳಿಯಲ್ಲಿ ಪೆಟ್ಟು ಬಿದ್ದು ಆಸ್ಪತ್ರೆ ಸೇರಿದವರೆಲ್ಲರೂ ಕಾಂಗ್ರೆಸ್ ಮತ್ತು ರೈತಸಂಘದ ಬೆಂಬಲಿಗರಾದರೆ ದಾಳಿಗೆ ಬಂದವರೆಲ್ಲರೂ ಬಿಜೆಪಿ ಕಾರ್ಯಕರ್ತರು ಮತ್ತು ಬಚ್ಚೇಗೌಡರ ಬಂಟರು. ಮೇಲುನೋಟಕ್ಕಿದು ಸಂಕ್ರಾಂತಿ ಹಬ್ಬದ ಆಚರಣೆ ಪ್ರಯುಕ್ತ ನಡೆದ ಮಾರಾಮಾರಿಯಂತೆ ಕಂಡರೂ ಅದು ಬಚ್ಚೇಗೌಡರ ಅಟ್ಟಹಾಸದ ವಿರುದ್ಧದ ಅರಸನಹಳ್ಳಿಯ ರೈತಾಪಿಗಳ ಹೆಣಗಾಟದ ಕತೆಯೇ.

ಅರಸನಹಳ್ಳಿಯ 160 ಮನೆಗಳ ಪೈಕಿ ಬಹುತೇಕ ಕುಟುಂಬಗಳು ಒಂದಾನೊಂದು ಕಾಲಕ್ಕೆ ಬಚ್ಚೇಗೌಡರ ಬಂಟ ಮೆಂಬರ್ ಶಿವಪ್ಪನನ್ನೇ ಬೆಂಬಲಿಸುತ್ತಿದ್ದರು. 1995 ರಲ್ಲಿ ಪಂಚಾಯ್ತಿ ಅಧ್ಯಕ್ಷನಾಗಿದ್ದ ಶಿವಪ್ಪ ಬಚ್ಚೇಗೌಡರ ತಮ್ಮ ಗೋಪಾಲಗೌಡನ ಶಿಷ್ಯ. ಬಚ್ಚೇಗೌಡರ ಖಾಸಾ ಅಣ್ಣ ವೆಂಕಟರಮಣಗೌಡನ ಮಕ್ಕಳ ಪೈಕಿ 'ನಂದಗುಡಿ ತಾಲ್ಲೂಕು ಪಂಚಾಯ್ತಿ ಸದಸ್ಯ ಶೇಖರ್ ಮತ್ತು SFCS ಬ್ಯಾಂಕ್ ಅಂದರೆ ರೇಷ್ಮೆ ಕೃಷಿಕರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಸತೀಶ್ ಗೌಡ ಇಬ್ಬರೂ ಈ ಮೆಂಬರ್ ಶಿವಪ್ಪನ ಪಾಲಿಗೆ ಗಾಡ್‌ಫಾದರ್‌ಗಳಿದ್ದಂತೆ.

ಅರಸನಹಳ್ಳಿಗೆ ಹೊಂದಿಕೊಂಡಂತೆ ಬತ್ತಿಗಾನಹಳ್ಳಿ ಎಂಬ ಬೇಚರ್ ಗ್ರಾಮವಿದೆ. ಅದರ ಗೋಮಾಳದ ಸ.ನಂ. 63ರಲ್ಲಿ 70 ಎಕರೆ ಸರ್ಕಾರಿ ಜಮೀನಿತ್ತು. ಶುರುವಿನಲ್ಲಿ ಈ ಗೋಮಾಳದಲ್ಲಿದ್ದ ನೀಲಗಿರಿ ತೋಪನ್ನು ಮುಂಡಾ ಮೋಚಿದ ಶಿವಪ್ಪ, ಆಗ ಬಚ್ಚೇಗೌಡರೇ ಜೆಡಿಎಸ್ ಶಾಸಕರಾಗಿದ್ದುದರಿಂದ ಅದೇ ಗೋಮಾಳದ 12 ಎಕರೆ ಭೂಮಿಯನ್ನು ಊರಿನ ಜನರಿಗೆ ಸೈಟುಗಳನ್ನಾಗಿ ಮಾಡಿ ಹಂಚುತ್ತಾನೆಂದು ಪ್ರತಿ ಮನೆಯಿಂದ ದುಡ್ಡು ವಸೂಲಿ ಮಾಡಿದ್ದ. ಅದರಂತೆ ಅರಸನಹಳ್ಳಿಯ 160 ಮನೆಗೂ ಸರ್ಕಾರ ಸೈಟು ಹಂಚಿಕೆ ಮಾಡಿತ್ತಾದರೂ ಹಕ್ಕುಪತ್ರಗಳನ್ನೆಲ್ಲ ತಾನೇ ಬಚ್ಚಿಟ್ಟುಕೊಂಡ ಶಿವಪ್ಪ ಈ ಪೈಕಿ ತಲಾ 75 ಸೈಟುಗಳಂತೆ ಬಚ್ಚೇಗೌಡರ ತಮ್ಮ ಗೋಪಾಲಗೌಡ, ಸೂಲಿಬೆಲೆ ಪಂಚಾಯ್ತಿ ಮೆಂಬರ್ ಜನಾರ್ದನರೆಡ್ಡಿ ಮತ್ತು ಚಿಕ್ಕ ಅರಳಗೆರೆ ಬಿಜೆಪಿ ಲೀಡರ್


ತೋಟದ ಮಾಲೀಕರು ಮಂಜುನಾಥ್ ಮತ್ತು ಮೋಹನ್

ವೆಂಕಟೇಗೌಡರಿಗೆ ಹಂಚಿಬಿಟ್ಟ. ಅಲ್ಲಿಗೆ ಅರಸನಹಳ್ಳಿಯ ಗ್ರಾಮಸ್ಥರಿಗೆಂದು ಉಳಿದದ್ದು ಬರೇ 72 ಸೈಟುಗಳು ಮಾತ್ರ.

ಆದರೆ ಈ ಸೈಟುಗಳ ಹಕ್ಕುಪತ್ರಗಳನ್ನೂ ತಾನೇ ಇಟ್ಟುಕೊಂಡ ಶಿವಪ್ಪ, 2008ರ ಹೊತ್ತಿಗೆ ದೇವನಹಳ್ಳಿ ಏರ್‌ಪೋರ್ಟ್‌ನಿಂದ ನಂದಗುಡಿ ಹೈಟೆಕ್ ಪಾರ್ಕಿಗೆ ಬೈಪಾಸ್ ರಸ್ತೆ ಈ ಸೈಟುಗಳ ಪಕ್ಕಕ್ಕೆ ಹಾದುಹೋದದ್ದನ್ನು ಕಾಯ್ದು ಒಂದೊಂದೇ ಸೈಟುಗಳನ್ನು ಕದ್ದು ಮುಚ್ಚಿ ಮಾರಿಕೊಳ್ಳತೊಡಗಿದ. ಗೋಮಾಳದ ಉಳಿಕೆ ಜಾಗವನ್ನೂ ತನ್ನದೇ


ಆಸ್ಪತ್ರೆಗೆ ದಾಖಲಾದ ಅರಸನಹಳ್ಳಿಯ ರೈತರು

ಸಂಬಂಧಿಕರ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಆಕ್ರಮಿಸಿಕೊಂಡ. ಇದನ್ನು ಪ್ರತಿಭಟಿಸಿದ ತಾಲ್ಲೂಕು ಪಂಚಾಯ್ತಿ ಸದಸ್ಯ ಚನ್ನಪ್ಪ, ಕಾಂಗ್ರೆಸ್ ಮುಖಂಡ ನಾರಾಯಣಸ್ವಾಮಿ ಮತ್ತು ರೈತಸಂಘದ ಚಾಂದ್‌ಪಾಷಾ ಕೋರ್ಟಿನಿಂದ ತಡೆಯಾಜ್ಞೆ ತಂದರು.

ಪೊಲೀಸರ ದೌರ್ಜನ್ಯ

ಆದರೆ ಶಿವಪ್ಪನ ಭೂಕಬಳಿಕೆಗೆ ಸೂಲಿಬೆಲೆ ಪೊಲೀಸರೇ ಬೆಂಗಾವಲಾಗಿ ನಿಂತುಬಿಟ್ಟರು. ಇದೇ ಹೊತ್ತಿಗೆ ಅರಸನಹಳ್ಳಿಯ ಹಾಲು ಉತ್ಪಾದಕರ ಸಂಘದ ಚುನಾವಣೆ ಬಂತು. ಆತನಕ ಮಿಲ್ಕ್ ಸೊಸೈಟಿಯನ್ನು ಲೂಟಿ ಮಾಡಿಕೊಂಡೇ ಬಂದ ಅಧ್ಯಕ್ಷ ರಾಮಪ್ಪ ಮತ್ತು ಕಾರ್ಯದರ್ಶಿ ಜಯಚಂದ್ರ ಇಬ್ಬರೂ ಬಚ್ಚೇಗೌಡ ಬಂಟರೆ. ಚುನಾವಣೆ ನಡೆದರೆ ಎಲ್ಲಿ ಬಚ್ಚೇಗೌಡರ ಬಂಟರಿಗೆ ಸೋಲಾಗುತ್ತೋ ಎಂದು ಕಳೆದ 10 ವರ್ಷದಿಂದ ಚುನಾವಣೆ ನಡೆಯದ ಹಾಗೇ ಬಚ್ಚೇಗೌಡರು ನೋಡಿಕೊಂಡಿದ್ದಾರೆ. ಈ ಬಾರಿಯ ಚುನಾವಣೆಯನ್ನೂ ಗಂಡಾಗುಂಡಿ ಮಾಡಿಯೇ ಮುಂದೂಡಿದ್ದಕ್ಕೆ ಜನವರಿ 31ರಂದು ಎರಡೂ ಬಣಗಳ ಮಧ್ಯೆ ಘರ್ಷಣೆಯಾಗಿತ್ತು.

ಇದಲ್ಲದೆ ಸಂಕ್ರಾಂತಿ ಹಬ್ಬದ ಆಚರಣೆಯಲ್ಲೂ ಬಚ್ಚೇಗೌಡರ ಬಣಕ್ಕೇ ಹಿನ್ನಡೆಯಾಯ್ತು. ಮೆಂಬರ್ ಶಿವಪ್ಪನ ಗ್ಯಾಂಗ್ ಫೆಬ್ರವರಿ 18ರಂದು ಹಬ್ಬ ಆಚರಿಸ ಹೊರಟರೆ ಅದಕ್ಕೆ ಕೇವಲ 30 ಕುಟುಂಬಗಳಷ್ಟೆ ಕೈ ಜೋಡಿಸಿದ್ದರು. ಆದರೆ ಕಾಂಗ್ರೆಸ್ ಬೆಂಬಲಿತ ಗುಂಪಿಗೆ 110 ಮನೆಯವರು ಬೆಂಬಲಿಸಿದ್ದರಿಂದಾಗಿ ಬಚ್ಚೇಗೌಡರ ಬಣದ ಹಬ್ಬಕ್ಕೆ ಅರ್ಥವೇ ಇಲ್ಲದಂತಾಯ್ತು. ಅಲ್ಲಿಗೆ ಬಚ್ಚೇಗೌಡರ ದೌರ್ಜನ್ಯ ಮತ್ತು ಅಟ್ಟಹಾಸದ ವಿರುದ್ಧ ಜನ ತಿರುಗಿಬಿದ್ದದ್ದು ಸ್ಪಷ್ಟವಾಗಿತ್ತು. ಇದರಿಂದ ಹತಾಶರಾದ ಮೆಂಬರ್ ಶಿವಪ್ಪನ ಗ್ಯಾಂಗ್ ಫೆಬ್ರವರಿ 7ರ ಗುರುವಾರ ಬೆಳ್ಳಂಬೆಳಗ್ಗೆಯೇ ತಮ್ಮ ಎದುರಾಳಿ ತಂಡದ ಮೇಲೆ ಮಾರಕ ದಾಳಿ ನಡೆಸಿತ್ತು.

ಒಂದೆಡೆ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಿ ಮತ್ತೊಂದೆಡೆ ಸೂಲಿಬೆಲೆ ಪೊಲೀಸ್ ಠಾಣೆಗೆ ಬಂದು ದೂರುಕೊಟ್ಟರೆ ಪೊಲೀಸರು ದೂರು ಪಡೆಯುವ ಬದಲು ಕಾಂಗ್ರೆಸ್ ಮುಖಂಡ ನಾರಾಯಣಸ್ವಾಮಿಯನ್ನೇ ವಾಚಾಮಗೋಚರ ಬಯ್ಯತೊಡಗಿದರು. ಸ್ಥಳಕ್ಕೆ ಬಂದಿದ್ದ ಎಸ್‌ಐ ರಾಜಣ್ಣ ನಿಮ್ಮನ್ನೇ ಎತ್ತಿ ಲಾಕಪ್ಪಿಗೆ ಹಾಕ್ತೀನಿ ಎಂದು ಗದರಿಸಿದ್ದೇ ಪೆಟ್ಟು ತಿಂದವರ ಮೇಲೆಯೇ ಪೊಲೀಸರ ಮೇಲೆ ಕೈ ಮಾಡಿದರೆಂದು ಖೊಟ್ಟಿ ಮೊಕದ್ದಮೆ ದಾಖಲು ಮಾಡಿಬಿಟ್ಟ.

ದಾಳಿ ಮಾಡಿದವರನ್ನು ಬಿಟ್ಟು ದಾಳಿಗೀಡಾದವರನ್ನೇ ಹಿಡಿದು ಪೊಲೀಸರು ಕೇಸು ಹಾಕಿದ್ದರ ವಿರುದ್ಧ ಊರಿನ ಜನರೇ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಹಾಗಂತ ಪೊಲೀಸರು ಬಿಡಬೇಕಲ್ಲ, ಎರಡು ದಿನ ಸುಮ್ಮನಿದ್ದು ಫೆಬ್ರವರಿ 10 ಭಾನುವಾರ ತಾಲ್ಲೂಕು ಪಂಚಾಯ್ತಿ ಸದಸ್ಯ ಚನ್ನಪ್ಪ ಮತ್ತು ಕಾಂಗ್ರೆಸ್ ಮುಖಂಡ ನಾರಾಯಣಸ್ವಾಮಿ ಸಮೇತ ಹನ್ನೊಂದು ಗ್ರಾಮಸ್ಥರನ್ನು ಬಂಧಿಸಿ ಹೊಸಕೋಟೆ ಠಾಣೆಗೆ ತಂದಿದ್ದಾರೆ. ಅಲ್ಲಿಂದ ಅವರನ್ನು ಚಿಕಿತ್ಸೆ ನೆಪದಲ್ಲಿ ಯಾವ್ಯಾವುದೋ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪೊಲೀಸರ ಈ ದೌರ್ಜನ್ಯದ ವಿರುದ್ಧ ಮಾಜಿ ಶಾಸಕ ಎಂಟಿಬಿ ನಾಗರಾಜ್ ಸೇರಿದಂತೆ ಮೂರು ಸಾವಿರಕ್ಕೂ ಅಧಿಕ ಮಂದಿ ಹೊಸಕೋಟೆಯ ಎಂವಿಜೆ ಆಸ್ಪತ್ರೆಗೆ ಮುತ್ತಿಗೆ ಹಾಕಿದ್ದಾರೆ.

ಗಾಯಗೊಂಡವರೇ ಜೈಲಿಗೆ

ವಿಚಿತ್ರವೆಂದರೆ ಮಾಜಿ ಶಾಸಕ ಎಂಟಿಬಿ ನಾಗರಾಜ್ ಆಸ್ಪತ್ರೆಗೆ ಬಂದು ಪೊಲೀಸರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದದ್ದನ್ನೇ ಪೊಲೀಸ್ ಪೇದೆಯೊಬ್ಬ ತನ್ನ ಮೊಬೈಲಿನ ಮೂಲಕ ಬಚ್ಚೇಗೌಡರಿಗೆ ಫೋನಾಯಿಸಿ ಕೇಳಿಸುತ್ತಿದ್ದ!

ಈ ರೀತಿ ಫೋನ್ ಮೂಲಕ ಬಿಜೆಪಿಯವರಿಗೆ ಸುದ್ದಿ ಮುಟ್ಟಿಸುತ್ತಿದ್ದದ್ದನ್ನು ಪ್ರಶ್ನಿಸಿದ ಕಾಂಗ್ರೆಸ್ ಕಾರ್ಯಕರ್ತರ ಮೇಲೆಯೇ ಮತ್ತೊಂದು ಕ್ರಿಮಿನಲ್ ಕೇಸು ದಾಖಲಿಸಲಾಯ್ತು. ಅಲ್ಲಿಗೆ ಪೆಟ್ಟು ತಿಂದು ಗಾಯಗೊಂಡವರ ಮೇಲೆ ಒಂದಲ್ಲ ಎರಡು ಕ್ರಿಮಿನಲ್ ಕೇಸುಗಳನ್ನು ಹೊಸಕೋಟೆ ಪೊಲೀಸರು ದಾಖಲಿಸಿದ್ದರೆ, ದಾಳಿ ನಡೆಸಿದ್ದ ಬಚ್ಚೇಗೌಡರ ಪಟಾಲಮ್ಮಿನ ಮೇಲೆ ಕಾಟಾಚಾರದ ಕೇಸು ದಾಖಲಿಸಿ ರಾಜಮರ್ಯಾದೆಯಿಂದ ಬಿಡುಗಡೆ ಮಾಡಿದ್ದರು!


ಸದ್ಯ ಪೆಟ್ಟು ತಿಂದ ಅಷ್ಟೂ ಮಂದಿಗೆ ಕೋರ್ಟು ಜಾಮೀನು ನೀಡಿದೆ ನಿಜ. ಆದರೆ ದಾಳಿ ನಡೆಸಿದವರಿಗೇನು ಶಿಕ್ಷೆ?

ಮಾರಕ ದಾಳಿ ನಡೆಸಿ ರಕ್ತ ಹರಿಸಿದವರ ವಿರುದ್ಧ ದೂರು ನೀಡಿದವರ ವಿರುದ್ಧವೇ ಪೊಲೀಸರು ಖೊಟ್ಟಿ ದೂರು ದಾಖಲಿಸುತ್ತಾರೆಂದರೆ, ರಕ್ತ ಹರಿಸಿದವರ ಬದಲು ಗಾಯಗೊಂಡವರೇ ಜೈಲು ಪಾಲಾಗುತ್ತಾರೆಂದರೆ, ಹೊಸಕೋಟೆಯಲ್ಲಿ ಪೊಲೀಸರಿಗೂ ಪಾತಕಿಗಳಿಗೂ ಏನು ವ್ಯತ್ಯಾಸ ಬಂತು?


ಬಿಜೆಪಿ ಸರ್ಕಾರದಲ್ಲಿ ಬಚ್ಚೇಗೌಡರು ಮಂತ್ರಿಯಾದ ಮೇಲೆ ಹೊಸಕೋಟೆಯ ಉದ್ದಗಲಕ್ಕೂ ನಡೆಯುತ್ತಿರುವ ಪೊಲೀಸ್-ರೌಡಿಗಳ ಜಂಟಿ ಅಟ್ಟಹಾಸದಲ್ಲಿ ಇಂಥ ದೌರ್ಜನ್ಯಗಳು ಅದೆಷ್ಟೋ!

ಹೊರಪ್ರಪಂಚಕ್ಕೆಲ್ಲೂ ಗೊತ್ತೇ ಆಗದಂತೆ ಮುಚ್ಚಿಹೋಗುವ ಇಂಥ ದಬ್ಬಾಳಿಕೆಗೆ ಕೊನೆಯೇ ಇಲ್ಲವೆ?

● ರಾ.ಸೋಮನಾಥ್




ಪೌರ ಸಂಸ್ಥೆ ಸೆಣಸಾಟ




ಕಾಗೇರಿ-ಅಸ್ನೋಟಿಕರ್ ಅಸ್ತಿತ್ವಕ್ಕಾಗಿ ತಿಣುಕಾಟ!

ಉತ್ತರ ಕನ್ನಡದಲ್ಲಿರುವುದು ಮೂರೇ ಮೂರು ನಗರಸಭೆ. ಶಿರಸಿ, ಕಾರವಾರ ಮತ್ತು ದಾಂಡೇಲಿ ನಗರಸಭೆ ಬಿಟ್ಟರೆ ಉಳಿದದ್ದೆಲ್ಲ ಪುಟ್ಟ-ಪುಟ್ಟ ಪಟ್ಟಣ ಪಂಚಾಯತ್ ಮತ್ತು ಪುರಸಭೆಗಳು. ಈ ಭರ್ಜರಿ ವ್ಯವಹಾರದ ಮೂರು ನಗರಸಭೆಗಳಲ್ಲಿ ನೂರು ನಮೂನೆಯ ನಿರ್ಲಜ್ಜ ರಾಜಕಾರಣ, ಅಕ್ರಮ -ಅವ್ಯವಹಾರ-ಅವಾಂತರ ಈ ಐದು ವರ್ಷದಲ್ಲಿ ನಿರಂತರ-ನಿರಾತಂಕವಾಗಿ ನಡೆದುಹೋಗಿದೆ. ಮಾಜಿ ಶಾಸಕ ಆರ್.ವಿ. ದೇಶಪಾಂಡೆ ಮತ್ತು ಹಾಲಿ ಶಾಸಕ ಸುನಿಲ್ ಹೆಗಡೆಯ ರಣಾಂಗಣದಲ್ಲಿರುವ ದಾಂಡೇಲಿ ನಗರಸಭೆಯಲ್ಲಿ ಸದಾ ಗೌಜಿ-ಗದ್ದಲ-ಗುದ್ದಾಟವೇ. ಆದರೂ ಹೇತ್ಲಾಂಡಿ ಮಂತ್ರಿದ್ವಯರಾದ ಕಾಗೇರಿ ವಿಶ್ವೇಶ್ವರ ಮತ್ತು ಅಸ್ನೋಟಿಕರ್ ಆನಂದನ ಹೆಡ್‌ಕ್ವಾಟರ್ಸ್‌ಗಳಾದ ಶಿರಸಿ ಹಾಗು ಕಾರವಾರ ಮುನ್ಸಿಪಾಲ್ಟಿಯಲ್ಲಿನ ಮಸಲತ್ತು ಇಡೀ ಜಿಲ್ಲೆಯಲ್ಲಿ ಒಂಥರಾ ಕುತೂಹಲ ಕೆರಳಿಸುತ್ತಿರುತ್ತದೆ.



ಅನಂತಕುಮಾರ್ ಹೆಗ್ಡೆ



ಸತೀಶ್ ಸೈಲ್




ಭೀಮಣ್ಣ ನಾಯ್ಕ



ಪ್ರಸಾದ್ ಕಾರ್‌ವಾರ್ಕರ್



ಗಣಪತಿ ಉಳ್ವೇಕರ್



ಶಾಂತಾರಾಂ ಹೆಗ್ಡೆ

ಕರಾವಳಿಯ ಕಾರವಾರ ಮತ್ತು ಮಲೆನಾಡಿನ ಶಿರಸಿ ಜಿಲ್ಲೆಯ ಎರಡು ಪ್ರತಿಷ್ಠೆಯ ವಾಣಿಜ್ಯ-ರಾಜಕಾರಣದ ನಗರಗಳು. ಈಗ ಹಠಾತ್ ವಕ್ಕರಿಸಿರುವ ನಗರಸಭೆ ಎಲೆಕ್ಷನ್ ಈ ಎರಡು ನಗರದ ಮಾಂಡಲೀಕರಾದ ಮಂತ್ರಿ ಕಾಗೇರಿ ಹಾಗು ಸಚಿವ ಅಸ್ನೋಟಿಕರ್‌ನ ಅಸ್ತಿತ್ವಕ್ಕೆ ಸವಾಲು ಹಾಕಿ ನಿಂತಿದೆ! ಈ ಇಬ್ಬರು ತಿಕ್ಕಲು ಪುಢಾರಿಗಳು ತಂತಮ್ಮ ನಗರದಲ್ಲಿ ನೆಲೆ-ಬೆಲೆ ಕಳಕೊಂಡು ಎದುಸಿರುಬಿಡುತ್ತಿದ್ದಾರೆ. ಮುನ್ಸಿಪಾಲ್ಟಿ ಸಂಡಾಸು-ಗಜಾರ ಉದ್ಘಾಟನೆಗೂ ಮದುಮಗನಂತೆ ಸಿಂಗರಿಸಿಕೊಂಡು ಹೋಗುತ್ತಿದ್ದ ಕಾಗೇರಿ-ಅಸ್ನೋಟಿಕರ್ ಮುಖ ಕಂಡರೆ ನಗರವಾಸಿಗಳು ಮೂಗು ಮುರಿಯುತ್ತಾರೆ. ಆದರೂ ಈ ಬುರ್ನಾಸ್ ಭೂಪರು ನಗರದ ಕಿಂಗ್‌ಮೇಕರ್ ಆಗುವ ಅವಸರಕ್ಕೆ ಬಿದ್ದು ಮಳ್ಳಾಟ ನಡೆಸಿರುವುದು ಮೋಜಾಗಿದೆ...

ಕಾಗೇರಿ ಕಂಗಾಲು

ಶಿರಸಿ ನಗರದಲ್ಲಿ ಕಾಗೇರಿಯ ಜಾತಿಬಂಧುಗಳಾದ ಹೈಗರಿಗಿಂತ ದಲಿತರು-ಮುಸ್ಲಿಮರು- ಇತರ ಹಿಂದುಳಿದ ವರ್ಗದವರೇ ಜಾಸ್ತಿ. ಈ ಶೋಷಿತರನ್ನು ತನ್ನ ಪಲ್ಲಕ್ಕಿ ಹೊರಲಷ್ಟೇ ಬಳಸಿಕೊಂಡ ಕಾಗೇರಿ ಗೂಟದ ಕಾರುಗಳ ನಿಗಮ-ಮಂಡಳಿಯ, ಸರ್ಕಾರಿ ಗುತ್ತಿಗೆ-ಸವಲತ್ತುಗಳ ಫಲಾನುಭವಿಗಳಾಗಿಸಿದ್ದು ಮಾತ್ರ ರಕ್ತ ಬಂಧು ಬ್ರಾಹ್ಮಣರನ್ನು ಮಾತ್ರ. ಇದು ಬಿಜೆಪಿ ಮತ್ತು ಕಾಗೇರಿಯನ್ನು ಇಷ್ಟು ದಿನ ಬೆಂಬಲಿಸಿದ್ದ ದಲಿತರಿಗೆ-ಹಿಂದುಳಿದವರಿಗೆ ಪಾಠ ಕಲಿಸಿದೆ. ಈಗ ಈ ಅಬ್ರಾಹ್ಮಣರು ಕುಟಿಲ ತಂತ್ರಗಾರ ಕಾಗೇರಿಗೆ ಬುದ್ಧಿಕಲಿಸಲು ಸಿದ್ಧರಾಗಿ ಮತದಾನದ ದಿನಕ್ಕಾಗಿ ಕಾಯುತ್ತಿದ್ದಾರೆ.

ಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿ ಹುರಿಯಾಳಾಗಲಿರುವ ಕಾಗೇರಿ ಮಾಣಿಗಿದು ಸೆಮಿಫೈನಲ್ ಸೆಣಸಾಟ.

ಒಂದಿಷ್ಟು ನಿಷ್ಠಾವಂತರನ್ನು ಪುರಪಿತೃಗಳಾಗಿಸಿಕೊಂಡರೆ ವಿಧಾನಸಭೆ ಯುದ್ಧಕ್ಕೆ ಶೂದ್ರರ ಕಾಲ್ದಳಕ್ಕೆ ಸೇನಾಧಿಪತಿಗಳಾಗಿಸಬಹುದೆಂಬ ದೂ(ದು)ರಾಲೋಚನೆ ಧೂರ್ತ ಕಾಗೇರಿಯದು! ಆದರೆ ಜನರನ್ನು ಎದುರಿಸಲಾಗದ ಸ್ವಯಂ ಕೃತಾಪರಾಧದಲ್ಲಿ ಬಿದ್ದು ಒದ್ದಾಡುತ್ತಿರುವ ಕಾಗೇರಿಗೆ ಮತ್ತೊಂದೆಡೆ ಸ್ವ-ಪಕ್ಷ, ಸ್ವ-ಜಾತಿ ಎಂಪಿ ಅನಂತ್ಮಾಣಿ ಕೈತೊಳೆದು ಬೆನ್ನತ್ತಿದ್ದಾನೆ. ತನ್ನ ಚೇಲಾಗಳಿಗೇ ಹೆಚ್ಚು ಬಿಜೆಪಿ ಟಿಕೆಟ್ ಕೊಡಿಸಿ ನಗರಸಭೆ ಕಬ್ಜಾ ಮಾಡಿಕೊಳ್ಳುವ ಹಠ ಈ ಅನಂತ್ಮಾಣಿಗೆ.

ಒಂದು ಕಾಲದಲ್ಲಿ ಈ ಕಾಗೇರಿ-ಅನಂತ್ ಮಾಣಿಗಳು ಒಂದಾಗಿ ಬಿಜೆಪಿಯೊಳಗಿನ ಶೂದ್ರರ ಮೇಲೆ ಮುರಕೊಂಡು ಬೀಳುತ್ತಿದ್ದರು. ಆದರೆ ಈ ಜನಿವಾರಗಳ ಕಿರುಕುಳ ತಾಳಲಾಗದೆ ಮಾಜಿ ಮಂತ್ರಿ ಶಿವಾನಂದ ನಾಯ್ಕನಂಥ ಹಿಂದುಳಿದವರ ನೇತಾರ ಬಿಜೆಪಿ ಬಿಟ್ಟುಹೋಗಿರುವುದರಿಂದ ಮಾಣಿಗಳೇ ಬಡಿದಾಡುವಂತಾಗಿದೆ. ಕಾಗೇರಿ-ಅನಂತ್ ಬಣಗಳಾಗಿ ಬಿಜೆಪಿ ಈಗ ಇಡೀ ಜಿಲ್ಲೆಯಲ್ಲಿ ಎರಡು ಹೋಳಾಗಿಹೋಗಿದೆ! ಕಾಗೇರಿಯನ್ನು ಹೇಗಾದರೂ ಮಾಡಿ ಮಾಜಿ ಶಾಸಕ ಮಾಡಬೇಕೆಂದು ಜಿದ್ದಿಗೆ ಬಿದ್ದಿರುವ ಅನಂತ್ಮಾಣಿ ಪೌರಾಡಳಿತ ಸಂಸ್ಥೆಯ ಚುನಾವಣೆಯನ್ನು ಬಳಸಿಕೊಳ್ಳುವ ಸ್ಕೆಚ್ ಹಾಕಿಕೊಂಡಿದ್ದಾನೆ. ಕಮ್ಯುನಲ್ ಬೆಂಕಿ ನವಾಬನಾದ ಅನಂತ್ಮಾಣಿಯ ಕೇಂದ್ರ ಸ್ಥಾನವೂ ಶಿರಸಿ. ಹೀಗಾಗಿ ಶಿರಸಿ ನಗರಸಭಾ ಚುನಾವಣೆಗೆ ಕಾಗೇರಿ-ಅನಂತ್ಮಾಣಿ ಕಾಲೆಳೆವ ಕಸರತ್ತು ಕುತೂಹಲಕರ ರಂಗು-ಗುಂಗೇರಿಸಿ ಬಿಟ್ಟಿದೆ!

ಕಳೆದ ಬಾರಿ ಬಿಜೆಪಿ ಶಿರಸಿ ನಗರಸಭೆಯ ಒಟ್ಟು 31 ಸ್ಥಾನಗಳ ಪೈಕಿ 16 ಗೆದ್ದು ಅಧಿಕಾರಕ್ಕೇರಿತ್ತು. ಶಿರಸಿ ನಗರಸಭೆ ಇತಿಹಾಸದಲ್ಲಿ ಬಿಜೆಪಿಯ ಮೊದಲ ಜಯವಿದು. ಕಾಂಗ್ರೆಸ್ 8 ಸ್ಥಾನ ಗೆದ್ದಿದ್ದರೆ, 'ಬಂ'ರ ಸಮಾಜವಾದಿ ಪಾರ್ಟಿಯ 7 ಜನ ಕೌನ್ಸಿಲರ್ ಆಗಿದ್ದರು. ಕ್ರಮೇಣ ಈ 7 ಸದಸ್ಯರು 'ಬಂ' ಕಾಂಗ್ರೆಸ್ ಸೇರಿದಾಗ ಕಾಂಗ್ರೆಸಿಗರಾಗಿ ಹೋಗಿದ್ದರು. ಒಂದೇ ಒಂದು ಸದಸ್ಯನನ್ನು ಹೆಚ್ಚು ಹೊಂದಿದ್ದ ಬಿಜೆಪಿ ಎಮ್ಮೆಲ್ಲೆ ಕಾಗೇರಿ ಓಟಿನ ಬಲದಿಂದ ನಗರಸಭೆಯಲ್ಲಿ ಮಾಡಿದ ಅವ್ಯವಹಾರ-ಅವಾಂತರ ಒಂದೆರಡಲ್ಲ. ಮೊದಲ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷನಾಗಿದ್ದ ರಮೇಶ್ ಆಚಾರಿ ಮತ್ತು ಅರುಣ ಕೋಡ್ಕಣಿ ಎಂಬ ಜೋಡಿ ನಗರಸಭೆಯನ್ನು ಅವ್ಯವಹಾರ ಅಡ್ಡೆಯನ್ನಾಗಿ ಮಾಡಿಕೊಂಡಿದ್ದರು.

ಆ ಬಳಿಕ ಪೀಠಕ್ಕೇರಿದ್ದು ರವಿ ಚಂದಾವರ್ (ಅಧ್ಯಕ್ಷ) ಮತ್ತು ಸಂಧ್ಯಾ ಕುರ್ಡೇಕರ್ (ಉಪಾಧ್ಯಕ್ಷೆ) ಎಂಬ ಸಂಸದ ಅನಂತ್ಮಾಣಿಯ ಗುಲಾಮರು. ಇವರ ಕಾಲಕೀರ್ದಿ ಬಿಜೆಪಿಯ ಇಬ್ಬಣಗಳ ಬಡಿದಾಟ ಜೋರಾಗಿ ನಗರಾಡಳಿತ ಎಂಬುದು ಹಳ್ಳ ಹಿಡಿದುಹೋಯ್ತು. ಸಭೆಗಳಲ್ಲಿ ಅನಂತ್-ಕಾಗೇರಿ ಗ್ಯಾಂಗ್‌ನ ವಾರ್ ಸಾಮಾನ್ಯವಾಗಿ ಹೋಯ್ತು. ಪಾಲಿಗೆ ಪೈಪೋಟಿ ನಿತ್ಯವೂ ನಡೆಯಿತು. ಜನವಿರೋಧಿ ತೀರ್ಮಾನಗಳು ನಗರಸಭೆಯಲ್ಲಿ ಆಗಲಾರಂಭಿಸಿತು! ನಗರ ಪಿತೃಗಳು ತಂತಮ್ಮ ವಾರ್ಡಿನ ಕಾಮಗಾರಿಯಲ್ಲಿ ಕಿಕ್‌ಬ್ಯಾಕ್-ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡು ಕೊಬ್ಬಿ ಹೋದರು. ವಿಪಕ್ಷದ ಕಾಂಗ್ರೆಸ್ ಸದಸ್ಯರೂ ಹುಚ್ಚ ಮದ್ವೇಲಿ ಉಂಡೋನೇ ಜಾಣ ಎಂಬಂತೆ ತಂತಮ್ಮ ಪಾಲಿಗೆ ಬಂದಿದ್ದೇ ಪಂಚಾಮೃತ ಎಂದು ಭಾವಿಸಿ ಬಾಯಿ ಬಂದ್ ಮಾಡಿಕೊಂಡು ಬಿಜೆಪಿಯವರ ಭ್ರಷ್ಟ ಆಡಳಿತಕ್ಕೆ ಸಾಥ್ ನೀಡಿದರು.

ಹಿಂದಿನ ಮೀಸಲಾತಿ ಪ್ರಕಾರವೇ ಎಲೆಕ್ಷನ್ ನಡೆಯಲಿರುವುದರಿಂದ ಹಳೆ ಕಳ್ಳರೇ ಹಲ್ಲು ಮಸೆಯಲಾರಂಭಿಸಿದ್ದಾರೆ. ಬಿಜೆಪಿಯೊಳಗಿನ ಹೊಸ ಉಮೇದುದಾರರು 'ತಮಗೆ ಟಿಕೆಟ್ ಕೊಡಿ... ಇಲ್ಲದಿದ್ರೆ ಕೆಜೆಪಿ, ಬಿಎಸ್‌ಆರ್ ಕಡೆ ಹೋಗ್ತೇವೆ...' ಎಂದು ಯಜಮಾನರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಮೊದ್ಲೇ ಕಾಗೇರಿಯ ಭ್ರಷ್ಟಾಚಾರ-ಭಂಡಾಟ-ಜಾತಿಯತೆಯಿಂದ ಬಣ್ಣಗೆಟ್ಟಿರುವ ಬಿಜೆಪಿ ಬಣ ಬಡಿದಾಟದಿಂದ ಇನ್ನಷ್ಟು ಹೈರಾಣಾಗಿಹೋಗಿದೆ. ಬಿಜೆಪಿಯ ಈ ದೌರ್ಬಲ್ಯ ಬಳಸಿಕೊಂಡು ಗೆಲ್ಲಲು ಸ್ಟ್ರೇಟಜಿ ಹೆಣೆಯಬೇಕಿದ್ದ ಕಾಂಗ್ರೆಸ್‌ನಲ್ಲಿ ಒಬ್ಬರ ಮುಖ ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಶಿರಸಿಯಿಂದ ಅಸೆಂಬ್ಲಿಗೆ ಕಾಂಗ್ರೆಸ್ ಹುರಿಯಾಳಾಗುವ ಗಡಿಬಿಡಿಯಲ್ಲಿರುವ ಡಿಸಿಸಿ ಮಾಜಿ ಅಧ್ಯಕ್ಷ ಗೋಲ್‌ಮಾಲ್ ಶಾಂತಾರಾಮ ಹೆಗಡೆ ಮತ್ತು ಹಾಲಿ ಅಧ್ಯಕ್ಷ ಅಬ್ಬೇಪಾರಿ ಭೀಮಣ್ಣ ನಾಯ್ಕ ಹಿಂಬಾಲಕರಿಗೆ ಟಿಕೆಟ್ ಕೊಡಿಸುವ ಕರಾಮತ್ತಿನಲ್ಲಿ ಪಾರ್ಟಿಗೆ ಡ್ಯಾಮೇಜ್ ಮಾಡುತ್ತಿದ್ದಾರೆ.

ಈ ಭೀಮಣ್ಣ 'ಬಂ'ರ ಭಾಮೈದ. ಅರ್ಥಾತ್ ಸಮಾಜವಾದಿ ಪಾರ್ಟಿ ಮೂಲದವ. ಈತನ 7 ಬೆಂಬಲಿಗರು ಹಿಂದಿನ ಎಲೆಕ್ಷನ್‌ನಲ್ಲಿ ಕೌನ್ಸಿಲರ್ ಆಗಿದ್ದರು. ಇವರು ವಲಸಿಗರು. ಇವರಿಗೆ ಟಿಕೆಟ್ ಬೇಡ ಎಂಬುದು ಶಾಂತಣ್ಣಗೆ ಕೋಳಿಯ ತರಲೆ. ಹಾಗೆ ನೋಡಿದರೆ ಶಾಂತಣ್ಣ-ಭೀಮಣ್ಣರಿಗೂ ಮುನ್ಸಿಪಾಲ್ಟಿ ಎಲೆಕ್ಷನ್ ಉಪಾಂತ್ಯವೇ. ಒಂದು ರೌಂಡು ಶಿರಸಿನಗರದಲ್ಲಿ ಹಾಕಿದರೆ, ನಿರ್ಗಮಿತ ಬಿಜೆಪಿ ಕೌನ್ಸಿಲರ್‌ಗಳಲ್ಲಿ ಬಹುತೇಕರು ಬಕಾಸುರರೆಂಬ ಬೇಸರ ಮತದಾರರಲ್ಲಿರುವುದು ಗೊತ್ತಾಗುತ್ತದೆ; ಬಿಜೆಪಿಗಿಂತ ಕಾಂಗ್ರೆಸ್ಸೇ ಬೆಟರ್ ಎಂಬ ಭಾವನೆ ಜನರಲ್ಲಿರುವುದು ಗೋಚರಿಸುತ್ತದೆ.

ಈ ಬಿಜೆಪಿ V/s ಕಾಂಗ್ರೆಸ್ ನೇರಾನೇರ ಹಣಾಹಣಿಯಲ್ಲಿ ಜೆಡಿಎಸ್-ಬಿಎಸ್‌ಆರ್‌ಸಿ-ಕೆಜೆಪಿ ಲೆಕ್ಕಕ್ಕೇ ಇಲ್ಲಂತೆ ಕಾಣಿಸುತ್ತದೆ. ಆದರೆ ಜೆಡಿಎಸ್ ಶಿರಸಿ ನ.ಸ.ದಲ್ಲಿ ಖಾತೆ ತೆಗೆವ ಛಾನ್ಸ್ ಇದೆ. ಇದಕ್ಕೆ ಕಾರಣ ಮಾಜಿ ಮಂತ್ರಿ ಜೈವಂತ್, ಮಾಜಿ ಶಾಸಕ ವೈದ್ಯ ಮತ್ತು ಅನಂತ್ಮಾಣಿ 'ಪಿಎ' ಆಗಿದ್ದ ದಲಿತ ಮುಖಂಡ ಸುಭಾಷ್ ಮಂಡೂರ್ ಬಿಜೆಪಿ ಬಿಟ್ಟ ಜೆಡಿಎಸ್ ಸೇರಿರುವುದು. ಈ ಮೂವರಿಗೂ ನಗರದಲ್ಲಿ ಅವರದೇ ವರ್ಚಸ್ಸು ಇದೆ. ಒಂದಂತೂ ಖರೆ. ಕಾಗೇರಿಗೆ ಅದೆಷ್ಟೇ ಕಳ್ಳ ಕಾಸಿನ ಬಲವಿದ್ದರೂ ಆತ ಕಂಗಾಲಾಗಿದ್ದಾರೆ. ಆತನ ವಿರೋಧಿಗಳು ಶಕ್ತಿಶಾಲಿಗಳಾಗುತ್ತಿದ್ದಾರೆ.

ಕಮಲದ ಕೆಸರಲ್ಲಿ ಅಸ್ನೋಟಿಕರ್

ಬಂದರು ನಗರಿ ಕಾರವಾರದ ನಗರಸಭೆ ಚುನಾವಣೆ ಅಧಿಕ ಪ್ರಸಂಗಿ ಮಂತ್ರಿ ಆನಂದ ಅಸ್ನೋಟಿಕರ್‌ನ ಅಸ್ತಿತ್ವದ ತಿಣುಕಾಟಕ್ಕೆ ವಿಲಕ್ಷಣ ತಿರುವು ನೀಡಿಬಿಟ್ಟಿದೆ. ಬಿಜೆಪಿಯಲ್ಲಿ ಇರಲಾಗದೆ, ಕಾಂಗ್ರೆಸ್ ಸೇರಲಾಗದೆ ಶೋಚನೀಯ ಸ್ಥಿತಿ ತಲುಪಿರುವ ಅಸ್ನೋಟಿಕರ್‌ಗೆ ಈಗ ಅಪ್ಪನ ಅಭಿಮಾನಿ ಸಂಘದ ಬ್ಯಾನರ್ ಅಡಿಯಲ್ಲಿ ಕ್ಯಾಂಡಿಡೇಟ್ ಹಾಕಿ ಗೆಲ್ಲಿಸುವ ಶಕ್ತಿಯೂ ಇಲ್ಲವಾಗಿದೆ! ಒಂಥರಾ ಕಾಸ್ಮಾಪಾಲಿಟನ್ ನಗರದಂತಿರುವ ಕಾರವಾರದ ಜನರಿಗೆ ಅಸ್ನೋಟಿಕರ್‌ನ ಹಣ-ಅಧಿಕಾರ-ರಸಿಕತೆಯ ಕರ್ಮಕಾಂಡ ವಾಕರಿಕೆ ಮೂಡಿಸಿ ಅದ್ಯಾವುದೋ ಕಾಲವಾಗಿಹೋಗಿದೆ!

ಸರ್ಕಾರಿ ಮೆಡಿಕಲ್ ಕಾಲೇಜಿಗೆ 'ಕಲ್ಲು' ಹಾಕಿ ತನ್ನ ಯಜಮಾನಿಕೆಯ ಖಾಸಗಿ ಮೆಡಿಕಲ್ ದಂಧೆಗೆ ಅಸ್ನೋಟಿಕರ್ ಕರಾಮತ್ತು ಮಾಡಿದಾಗಲೇ ಕಾರವಾರ ನಗರವಾಸಿಗಳಿಗೆ ಆತ ಅದೆಂಥ ಜನದ್ರೋಹಿ ಎಂಬುದು ಸಾಬೀತಾಗಿ ಹೋಗಿದೆ. ಅಸ್ನೋಟಿಕರ್‌ನ ಹಿಂಬಾಲಕರಾದ ಕೌನ್ಸಿಲರ್‌ಗಳು ಮಾಡಿರುವ ಹಾವಳಿಯಂತೂ ಹೇಳತೀರದಾಗಿದೆ. ಸತತ ಐದು ವರ್ಷ ನಗರಸಭೆ ಅಧ್ಯಕ್ಷ ಕುರ್ಚಿಗೆ ಫೆವಿಕಾಲ್ ಹಾಕಿಕೊಂಡು ಕುಳಿತ ಗಣಪತಿ ದುಮ್ಮಾ ಉಳ್ವೇಕರ್‌ನನ್ನು ಅಸ್ನೋಟಿಕರ್ ಪಳಗಿಸಿಕೊಂಡು ನ.ಸ.ದಲ್ಲಿ ಮಾಡಿದ ಅವಾಂತರ-ಅಕ್ರಮ-ಅನ್ಯಾಯ ಇಡೀ ನಗರದಲ್ಲಿ ಜನಜನಿತ!

ಕಳೆದ ನ.ಸ. ಎಲೆಕ್ಷನ್ ಹೊತ್ತಲ್ಲಿ ಅಸ್ನೋಟಿಕರ್ ಕಾಂಗ್ರೆಸ್‌ನಲ್ಲಿದ್ದ. ದೇಶಪಾಂಡೆ ಸಾಹೇಬರ ನೀಲಿಗಣ್ಣಿನ ಹುಡುಗನಾಗಿದ್ದ. ಆಗ ಕಾಂಗ್ರೆಸ್ ಪ್ರಚಂಡ ಜಯಭೇರಿ ಬಾರಿಸಿತ್ತು. ಮುಂದೆ ಕಾಂಗ್ರೆಸ್ ಶಾಸಕನೂ ಆದ ಅಸ್ನೋಟಿಕರ್ 'ಬ್ರೈನ್ ಆಪರೇಷನ್' ಮಾಡಿಸಿಕೊಂಡು ಬಿಜೆಪಿ ಸೇರಿದ್ದ. ಆಗ ರಾತ್ರೋರಾತ್ರಿ ಕಾಂಗ್ರೆಸ್‌ನ 12 ಕೌನ್ಸಿಲರ್‌ಗಳು ಬಿಜೆಪಿ ಪಾಲಾಗಿದ್ದರು. ಈ 'ಹನ್ನೆರಡು ಮಂದಿ ಹರಾಮಿ'ಗಳನ್ನು ಸದಸ್ಯತ್ವದಿಂದ ಅನರ್ಹಗೊಳಿಸುವಂತೆ ಚುನಾವಣಾ ಆಯೋಗಕ್ಕೆ ದೂರು ಹೋಗಿತ್ತು. ಅದು ಹಾಗೇ ನ್ಯಾಯಾಲಯದ ಕಟ್ಟೆಯೇರಿತು. ಅದರ ತೀರ್ಪು ಇಂದೋ ನಾಳೆಯೋ ಬರುವ ಹಂತದಲ್ಲಿದೆ. ಅಕಸ್ಮಾತ್ ಈ 12 ಹರಾಮಿಗಳ ಮೆಂಬರಿಕೆ ಅನೂರ್ಜಿತವಾದರೆ ಅವರಿಗೆ 6 ವರ್ಷ ಎಲೆಕ್ಷನ್‌ಗೆ ನಿಲ್ಲುವ ಅರ್ಹತೆಯೇ ಇರುವುದಿಲ್ಲ.

ವಿಷಯ ಅದಲ್ಲ; ಈ 12 ಜನರಲ್ಲಿ ಬಿಜೆಪಿ ಟಿಕೆಟ್ ಕೊಡಿಸಲು ಅಸ್ನೋಟಿಕರ್ ಅಡ್ಡಾಟ ನಡೆಸಿದ್ದಾನೆ. ಅಕಸ್ಮಾತ್ ಈ ಅನರ್ಹತೆ ನ.ಸ. ಎಲೆಕ್ಷನ್‌ನ ನಾಮಪತ್ರ ಪರಿಶೀಲನೆ ಒಳಗೆ ಬಂದರೆ ಅಸ್ನೋಟಿಕರ್ ಪಟಾಲಮ್‌ಗೆ ದೊಡ್ಡ ಹೊಡೆತ ಬೀಳುತ್ತದೆ. ಇಂಥದೊಂದು ಭೀತಿಯಲ್ಲಿರುವ ಅಸ್ನೋಟಿಕರ್ ಸದ್ಯಕ್ಕೆ ಬಿಜೆಪಿಯಲ್ಲೇ ಗತಿಯಿಲ್ಲದೆ ಉಳಿಯ

ಬೇಕಾಗಿ ಬಂದಿದೆ. ಪಾಪ! ದೇಶಪಾಂಡೆಯ ಪ್ರಬಲ ವಿರೋಧದಿಂದ ಅಸ್ನೋಟಿಕರ್‌ಗೆ ಕಾಂಗ್ರೆಸ್ ಕದ ತೆರೆದುಕೊಳ್ಳುತ್ತಿಲ್ಲ, ಮಾರ್ಗರೆಟ್ ಆಳ್ವ ಅದೆಷ್ಟೇ ಪ್ರಯತ್ನ ಮಾಡಿದರೂ ನಂಬಿಕೆಗೆ ಅನರ್ಹನಾದ ಅಸ್ನೋಟಿಕರ್‌ನನ್ನು ಪಾರ್ಟಿಗೆ ಸೇರಿಸಿಕೊಳ್ಳಲು ದಿಲ್ಲಿ ದೊರೆಗಳು ಸಿದ್ಧರಾಗುತ್ತಿಲ್ಲ, ಇತ್ತ ಅಸ್ನೋಟಿಕರ್‌ನನ್ನು ಬಿಜೆಪಿಯಲ್ಲಿ ಇಟ್ಟುಕೊಳ್ಳಲು ಸ್ಥಳೀಯ ಮೂಲ ಬಿಜೆಪಿಗರಿಗೆ ಮನಸಿಲ್ಲ.

ಜಿಲ್ಲಾ ಬಿಜೆಪಿ ಅಧ್ಯಕ್ಷ ಪ್ರಸಾದ್ ಕಾರವಾರಕರ್, ಕ್ಷೇತ್ರಾಧ್ಯಕ್ಷ ಅರುಣ ನಾಡಕರ್ಣಿಯಂಥವರನ್ನೆಲ್ಲ ತುಚ್ಛವಾಗಿ ಕಾಣುತ್ತ ಮೂಲ ಬಿಜೆಪಿಗಳ ಮೂದಿಸುತ್ತ ನಾಲ್ಕೂವರೆ ವರ್ಷ ಕಳೆದ ಅಸ್ನೋಟಿಕರ್‌ಗೆ ಈಗ ಅವರದೇ ಕಾಲು ಹಿಡಿದು ಬಿಜೆಪಿಯಲ್ಲಿರ್ತೇನೆ ಎಂದು ಅಳುವ ಪರಿಸ್ಥಿತಿ ಬಂದಿದೆ. ಎಂದೂ ಬಿಜೆಪಿ ಕಾರ್ಯಾಲಯಕ್ಕೆ ಕಾಲಿಡದ ಅಸ್ನೋಟಿಕರ್ ಪರ್ಯಾಯ 'ಪಕ್ಷಾಂತರಿ ಬಿಜೆಪಿ' ಘೋಷಿಸಿಕೊಂಡು ಬಂದಿದ್ದ. ಇಂಥ ಅಸ್ನೋಟಿಕರ್ ಮೊನ್ನೆ ನ.ಸ. ಅಭ್ಯರ್ಥಿಗಳ ಆಯ್ಕೆಗೆ ಕರೆದ ಬಿಜೆಪಿ ಸಭೆಗೆ ಅನಿವಾರ್ಯವಾಗಿ ಹೋಗಿದ್ದಾನೆ. ಅಲ್ಲಿ ತನ್ನವರಿಗೆಲ್ಲ ಬಿಜೆಪಿ ಟಿಕೆಟ್‌ಕೊಡಿಸಲು ಶತಯಾಗತಾಯ ತಿಪ್ಪರಲಾಗ ಹಾಕಿದ್ದಾನೆ.

ಆದರೆ ಹಳೆ ಬಿಜೆಪಿಗರು ಅಸ್ನೋಟಿಕರ್‌ನ ಅಪ್ಪೂ ಚೇಲಾಗಳಿಗೆ ಟಿಕೆಟ್ ಕೊಡಲು ರೆಡಿಯಿಲ್ಲ. ಈ ಪುಂಡನ ಮುಂದಿಟ್ಟುಕೊಂಡು ಎಲೆಕ್ಷನ್‌ಗೆ ಇಳಿಯಲು ಪ್ರಸಾದ್-ಅರುಣ್ ವಗೈರೆಗಳಿಗೆ ಮನಸ್ಸಿಲ್ಲ. ಇದಕ್ಕೆ ಸಮಾನಾಂತರವಾಗಿ ಅಸ್ನೋಟಿಕರ್ ತನ್ನ ಒಂದಿಷ್ಟು ನಂಬಿಗಸ್ಥ ಬಂಟರನ್ನು ಕಾಂಗ್ರೆಸ್‌ನೊಳಗೆ ಬಿಟ್ಟು ಟಿಕೆಟ್ ತರಲು ಪ್ರೇರೇಪಿಸುತ್ತಿದ್ದಾನೆ. ನಾಳೆ ಕಾಂಗ್ರೆಸ್‌ನಲ್ಲಿ ಪ್ರವೇಶ ಸಿಕ್ಕರೆ, ಆ ಪಾರ್ಟಿಯ ಮೇಲೆ ಹಿಡಿತ ಸಾಧಿಸುವ ಹಿಕಮತ್ತು ಕಂತ್ರಿ ಅಸ್ನೋಟಿಕರನದು. ಇಂಥ ಅತಿರೇಕದ ಕುತಂತ್ರಗಳೇ ಇವತ್ತು ಅಸ್ನೋಟಿಕರ್‌ನನ್ನು ಅತಂತ್ರವಾಗಿಸಿದೆ.

ಮೀಸಲಾತಿ ಬದಲಾಗದಿರುವುದರಿಂದ ಹಾಲಿ ಕೌನ್ಸಿಲರ್‌ಗಳೇ ಮತ್ತೆ ನಗರಾಧಿಪತಿಗಳಾಗುವ ಆಸೆಯಲ್ಲಿದ್ದಾರೆ. ಆದರೆ ಈ ಆಡಳಿತಗಾರರು ಮಾಡಿರುವ ಜನ ವಿರೋಧಿ ನಿರ್ಣಯಗಳು, ಮಾಡಿರುವ ಸ್ವಾಹಾ, ಅಸ್ನೋಟಿಕರ್‌ನ ಪಾತಕಕ್ಕೆಲ್ಲ ಒತ್ತಾಸೆಯಾಗಿ ನಿಂತಿದ್ದು ಜನರನ್ನು ಕೆರಳಿಸಿದೆ. ಹಾಲಿ ಅಧ್ಯಕ್ಷೆ ಉಳ್ವೇಕರ್ ತಾನೆಷ್ಟೇ ಸಾಚಾ ಎಂದರೂ ಮಂತ್ರಿ ಅಸ್ನೋಟಿಕರ್‌ನ ಒತ್ತಡಕ್ಕೆ-ಆತನೊಂದಿಗಿನ ಹಿಂದಿನ ಬಂದರು ಮಾಫಿಯಾ ಬಿಸಿನೆಸ್ ನಂಟಿನ ಬಿಡೆಗೆ ಒಳಗಾಗಿ ಹಾದಿ ತಪ್ಪಿದ್ದೇ ಹೆಚ್ಚು! ಇದು ನಗರಕ್ಕೆ ಅನೇಕ ಬಾರಿ ಮಾರಕವಾಗಿ ಪರಿಣಮಿಸಿದೆ. ತುಂಬ ನಾಜೂಕಾಗಿ ನ.ಸ.ದಲ್ಲಿ ಅವ್ಯವಹಾರಗಳು ನಡೆದುಹೋಗಿದೆ. ಪಾರ್ಕಿಂಗ್ ಪ್ರಾಬ್ಲಮ್, ಒಳಚರಂಡಿ ವ್ಯವಹಾರದ ಗೋಲ್‌ಮಾಲ್, ಅನಧಿಕೃತ ಕಟ್ಟಡ ಸಕ್ರಮಗೊಳಿಸಿ ಬಿಲ್ಡರ್ ಡಾನ್‌ಗಳಿಗೆ ಸಹಕರಿಸಿದ್ದು... ಇಂಥ ಹಲವು ಕರ್ಮಕಾಂಡ ನ.ಸ.ದಲ್ಲಿ ಆಗಿಹೋಗಿದೆ. ಅಸ್ನೋಟಿಕರ್‌ನ ಒಂದು ಕಾಲದ ರಾಜಕೀಯ-ವ್ಯಾವಹಾರಿಕ 'ಗುರು'ನಂತಿದ್ದ ನ.ಸ. ಅಧ್ಯಕ್ಷ ಗಣಪತಿ ಉಳ್ವೇಕರ್‌ಗೂ ಅಸ್ನೋಟಿಕರ್ ಸಹವಾಸ ಸಾಕಾಗಿದೆ. ಆದರೆ ಆತನ ದೌರ್ಬಲ್ಯ ಗೊತ್ತಿರುವ ಅಸ್ನೋಟಿಕರ್ ಗುರುವನ್ನೇ ಗುಲಾಮ ಮಾಡಿಕೊಂಡಿದ್ದಾನೆ.

ಈ ಬಾರಿಯ ಹಳಸಿದ ಗುರು-ಶಿಷ್ಯ ಸಂಬಂಧವೂ ಕಾರವಾರ ನ.ಸ. ಎಲೆಕ್ಷನ್ ಮೇಲೆ ಒಳಪರಿಣಾಮ ಬೀರುವ ಸಾಧ್ಯತೆಯಿದೆ. ಗಣಪತಿ ಉಳ್ವೇಕರ್ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತನ್ನ ವಿರುದ್ಧ ಪಕ್ಷೇತರನಾಗಿ ಸ್ಪರ್ಧಿಸಿದ್ದ ಸೇಡನ್ನೂ ಅಸ್ನೋಟಿಕರ್ ಬಿಟ್ಟಿಲ್ಲ! ಹಾಗಂತ ಉಳ್ವೇಕರ್‌ನ ನೇರಾನೇರ ಎದುರು ಹಾಕಿಕೊಳ್ಳುವ ಧೈರ್ಯವೂ ಅಸ್ನೋಟಿಕರ್‌ಗೆ ಇಲ್ಲ. ಅಸ್ನೋಟಿಕರ್‌ನ ಮಂತ್ರಿಗಿರಿ ಪರ್ವದಲ್ಲಿ ಕಾಸು ಮಾಡಿಕೊಂಡಿರುವ ಕೌನ್ಸಿಲರ್‌ಗಳೇ ಮತ್ತೆ ನ.ಸ.ಗೆ ಶನಿಯಂತೆ ಗಂಟು ಬೀಳುವ ಭಯ ಕಾರವಾರಿಗರನ್ನು ಕಾಡುತ್ತಿದೆ.

ಇದಕ್ಕೆ ಕಾರಣ ಕಾಂಗ್ರೆಸ್‌ನ ದೌರ್ಬಲ್ಯ! ಕಾರವಾರದಲ್ಲಿ ಕಾಂಗ್ರೆಸ್ ಕಟ್ಟಲು ಹಣ-ಬೆವರು ಹರಿಸಿದ ಅದಿರು ಉದ್ಯಮಿ ಸತೀಶ್ ಸೈಲ್ ಏಕೋ ಈಗೀಗ ಉತ್ಸಾಹ ಕಳೆದುಕೊಂಡಿದ್ದಾರೆ. ಸುತ್ತ ಬಳಸಿ ಅಸ್ನೋಟಿಕರ್ ಕಾಂಗ್ರೆಸ್ ಸೇರಬಹುದೆಂಬ ಭಯ ಆತನನ್ನು ಕಾಡುತ್ತಿದೆ. ಆತನ ಸಲಹೆಗಾರರೂ ದಂಡಪಿಂಡಗಳೇ. ಇಂಥ ಜನಪರ ತಿಳಿವಳಿಕೆ ಇಲ್ಲದವರನ್ನು ನಂಬಿಯೇ ಸೈಲ್ ದಾರಿ ತಪ್ಪಿಬಿಟ್ಟರು. ಹಾಗೆಯೇ ಕಾಂಗ್ರೆಸ್‌ನ ಗುಂಪುಗಾರಿಕೆ ದಗಲುಬಾಜಿ ಅಸ್ನೋಟಿಕರ್‌ಗೆ ವರವಾಗಿದೆ. ಹಾಗೊಮ್ಮೆ ಸತೀಶ್ ಸೈಲ್ ಅಖಾಡಕ್ಕೆ ಧುಮುಕಿದರೆ ನ.ಸ. ಚುನಾವಣೆಗೆ ಭರ್ಜರಿ ರಂಗೇರುವುದು ಗ್ಯಾರಂಟಿ. ಹಣದ ಹಣಾಹಣಿ ನಡೆಯಲಿದೆ.

ಭೀಕರ ಕಾಳಗ ಆಗಬೇಕೆಂದಿದ್ದರೆ ಕಾಂಗ್ರೆಸ್‌ನ ಹಿರಿಯರು ಸತೀಶ್ ಸೈಲ್‌ಗೆ 'ನೀನೇ ಕಾಂಗ್ರೆಸ್‌ನ ಅಸೆಂಬ್ಲಿ ಕ್ಯಾಂಡಿಡೇಟ್... ಅಸ್ನೋಟಿಕರ್‌ಗೆ ಕಾಂಗ್ರೆಸ್‌ನಲ್ಲಿ ಪ್ರವೇಶವಿಲ್ಲ...' ಎಂದು ಹುರಿದುಂಬಿಸಬೇಕಷ್ಟೇ. ಕಾರವಾರದಲ್ಲಿ ಇರುವುದು ಕಾಂಗ್ರೆಸ್ ಮತ್ತು ಅಸ್ನೋಟಿಕರ್ ಟೀಮ್ ಅಷ್ಟೇ! ಬಿಜೆಪಿ-ಜೆಡಿಎಸ್ ಹೆಸರಿಗಷ್ಟೇ. ಸದ್ಯದ ಪರಿಸ್ಥಿತಿಯಲ್ಲಿ ನ.ಸ. ಎಲೆಕ್ಷನ್ ರಣಾಂಗಣದಲ್ಲಿ ಕಾಂಗ್ರೆಸ್ V/s ಬಿಜೆಪಿ (ಅಸ್ನೋಟಿಕರ್) ಸಮರ ಸಮಬಲದಲ್ಲಿದೆ!

● ನಹುಷ

ವಸತಿ ಶಿಕ್ಷಣ ಸಂಸ್ಥೆ ಶಾಂತಪ್ಪ ಗ್ಯಾಂಗ್ ಲೂಟಿ

ಅವಕಾಶವಂಚಿತ ದಲಿತರು ಮತ್ತು ಬಡವರ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕೆಂಬ ಉದ್ದೇಶದಿಂದ ಕಾಗೋಡು ತಿಮ್ಮಪ್ಪ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಹುಟ್ಟುಹಾಕಿದ **Karnataka Residential Education Society (KREIS)**ಯನ್ನು ಕೆ. ಶಾಂತಪ್ಪ ಎಂಬ ಧೂರ್ತ ಅಧಿಕಾರಿ ಗಂಗಪ್ಪಗೌಡ, ನಾಗರಾಜ್‌ರಂತಹ ನಿವೃತ್ತ ಶಿಷ್ಯ ಪಟಾಲಂ ಅನ್ನು ಕಟ್ಟಿಕೊಂಡು ಯಾವ ಪ್ರಮಾಣದಲ್ಲಿ ರಾಡಿ ಎಬ್ಬಿಸಿದ್ದಾರೆಂದರೆ ಅದನ್ನು ತೊಳೆಯಲು ಪಂಚವಾರ್ಷಿಕ ಯೋಜನೆಯೇ ಬೇಕು.

ಬಾಯಿಮಾತಿಗಾದರೂ ತಾನು ಕೋರ್ಟ್ ಆದೇಶಕ್ಕೆ ತಲೆಬಾಗುತ್ತೇನೆ ಎಂದು ಯಡಿಯೂರಪ್ಪ ಹೇಳುತ್ತಿದ್ದರೆ ಈ ಶಾಂತಪ್ಪ ಬಹಿರಂಗವಾಗಿಯೇ ತಾನು ಕೋರ್ಟ್ ಹೇಳಿದ್ದನ್ನು ಮಾಡುವುದಿಲ್ಲ ಎನ್ನುತ್ತಾನೆ ಮತ್ತು ಕೋರ್ಟ್ ಆದೇಶವನ್ನು ಧಿಕ್ಕರಿಸಿ ನೇಮಕಾತಿ ನಡೆಸುತ್ತಾನೆಂದರೆ ಈತ ಯಾವ ಮಟ್ಟದ ಮರಹುಂಕಾರಿ ಎಂದು ಊಹಿಸಬಹುದು.

ಕೆ.ಎನ್. ಚಂದ್ರಶೇಖರ್ ಎಂಬ ಎಫಿಷಿಯಂಟ್ ಅಧಿಕಾರಿಯನ್ನು ಎತ್ತಂಗಡಿ ಮಾಡಿಸಿ **KREIS** ಎಕ್ಸಿಕ್ಯೂಟಿವ್ ಡೈರೆಕ್ಟರ್ (ಇಡಿ) ಆಗಿ ಬಂದು ಕೂತವನೇ ಶಾಂತಪ್ಪ. ಈತ ಬರುವ ಕಾಲಕ್ಕೆ 10 ವರ್ಷಗಳಿಂದ ಮೊರಾರ್ಜಿ ದೇಸಾಯಿ ವಸತಿಶಾಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ



ಕೆಲಸ ಮಾಡುತ್ತಿದ್ದ ಶಿಕ್ಷಕರು ಮತ್ತು ಪ್ರಾಂಶುಪಾಲರನ್ನು ಕಾಯಂ ಮಾಡಲಾಗಿತ್ತು. ಹೊಸ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿತ್ತು. ಆಗ ಈ ಶಾಲೆಗಳಲ್ಲಿ ಹೊರಗುತ್ತಿಗೆಯಲ್ಲಿ ನೇಮಕಗೊಂಡು ಕೆಲಸ ಮಾಡುತ್ತಿದ್ದ ಶಿಕ್ಷಕರು ತಮಗೆ ನೇಮಕಾತಿಯಲ್ಲಿ ಕೃಪಾಂಕಗಳಲ್ಲಿ ನೀಡಬೇಕೆಂದು ಕೇಳಿ ಹೈಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ಇಂಟರಿಮ್ ಆರ್ಡರ್‌ನಲ್ಲಿ ಪರೀಕ್ಷಾ ಪ್ರಕ್ರಿಯೆ ಮುಂದುವರಿಸಬಹುದು; ಆದರೆ ಪರೀಕ್ಷಾ ಫಲಿತಾಂಶವು ಕೋರ್ಟ್ ತೀರ್ಪಿಗೆ ಬದ್ಧವಾಗಿರುತ್ತದೆ ಎಂದಿತು. ಚಂದ್ರಶೇಖರ್ ಅವರು ಪ್ರಾವಿಷನ್ ಸೆಲೆಕ್ಷನ್ ಲಿಸ್ಟ್ ಪ್ರಕಟಿಸಿದರು. ಆಗ ವಕ್ಕರಿಸಿಕೊಂಡವನೇ ಶಾಂತಪ್ಪ. ಅಂಕಗಳ ಪರಿಶೀಲನೆಯ ಬಳಿಕ ಕಟ್ ಆಫ್ ಪರ್ಸಂಟೇಜ್ ಸ್ವಲ್ಪ ಕೆಳಕ್ಕೆ ನಿಂತು ಅಂತಿಮಪಟ್ಟಿ ಪ್ರಕಟವಾಗುವುದು ವಾಡಿಕೆ. ಆದರೆ ಶಾಂತಪ್ಪ ಪ್ರಕಟಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಕಟ್ ಆಫ್ ಪರ್ಸಂಟೇಜ್ ಮೇಲಕ್ಕೆ ನಿಲ್ಲುತ್ತದೆ! ಅಂದರೆ ಈತ ತನ್ನ ಕಿಸೆಯಿಂದ ಮಾರ್ಕುಗಳನ್ನು ಯಾರಿಗೋ ಕೊಟ್ಟಿರಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ರಾತ್ರೋರಾತ್ರಿ ಮೊಬೈಲ್ ಮೆಸೇಜ್ ಕಳಿಸಿ ಭಾರತ ಬಂದ್‌ನ ದಿನವೂ ರಾತ್ರೋರಾತ್ರಿ ಕೌನ್ಸಿಲಿಂಗ್ ಮಾಡಿ ಮುಗಿಸಿದ ಪರಿಯನ್ನು ನೋಡಿದರೆ, ನೇಮಕಾತಿ ಮಾಡಲು ಕೋರ್ಟ್ ಅನುಮತಿಯನ್ನೇ ನೀಡಿರದಿದ್ದರೂ ನೇಮಕಾತಿ ಮಾಡಿದ ಕ್ರಮವನ್ನು ಅರ್ಥಮಾಡಿಕೊಂಡರೆ, ಹೊರಗುತ್ತಿಗೆಯಲ್ಲಿರುವವರನ್ನೇ ಮುಂದುವರಿಸಿ ಎಂದು ಕೋರ್ಟ್ ರಿಟ್ ಆಫ್ ಮ್ಯಾಂಡಮಸ್ ಅನ್ನು ಸ್ಯಾಂಕ್ಷನ್ ಮಾಡಿದ್ದರೂ ಅದೇ ಹುದ್ದೆಗೆ ಇನ್ನೊಂದು ನೇಮಕಾತಿ ಮಾಡಿದ ಶೈಲಿಯನ್ನು ಗುರುತಿಸಿದರೆ ಭ್ರಷ್ಟಾಚಾರದ ವಾಸನೆ ಕೋಟ್ಯಂತರದ್ದೇ ಇರಬಹುದೆಂಬ ಗುಲ್ಲುಗಳು ಸತ್ಯವೆಂದೇ ತೋರುತ್ತದೆ. ಈ ದಟ್ಟ ಅನುಮಾನವನ್ನು ಸಮರ್ಥಿಸುವ ಇನ್ನಷ್ಟು ಅಂಶಗಳು ಹೀಗಿವೆ.


* ಏಕಸದಸ್ಯ ನ್ಯಾಯಪೀಠವು 31-07-2012ರಂದು ಹೊರಗುತ್ತಿಗೆ ಶಿಕ್ಷಕರಿಗೆ ಕೃಪಾಂಕ ನೀಡಿ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಲು ಆದೇಶಿಸುತ್ತದೆ. ಶಾಂತಪ್ಪ ಅದನ್ನು ಮಾಡುವುದಿಲ್ಲ. ಮೇಲ್ಮನವಿ ಹಾಕಿ ತಡೆ ಆಜ್ಞೆ ತೆಗೆದುಕೊಳ್ಳುವ ಮೊದಲೇ 16-7-2012, 19-7-2012ಕ್ಕಲ್ಲ ಹೊಸ ನೇಮಕಾತಿ ಆದೇಶ ಕೊಟ್ಟುಬಿಡುತ್ತಾನೆ. ನಂತರ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಹೋಗುತ್ತದೆ.

* ದ್ವಿ ಸದಸ್ಯ ಪೀಠದಲ್ಲಿ ಹಿಯರಿಂಗ್ ಆಗುತ್ತಿರುವಾಗಲೇ ಕಾಯ್ದಿರಿಸಿದ ಆಯ್ಕೆ ಪಟ್ಟಿಯ ನೇಮಕಾತಿಗೆ ಸಿದ್ಧನಾಗುತ್ತಾನೆ. ಆದರೆ ನ್ಯಾಯಪೀಠ ಮೊದಲನೆ ಪಟ್ಟಿಯನ್ನು ಪ್ರಕಟಿಸಲು ಅನುಮತಿ ನೀಡಿದ್ದು ಯಾರು ಎಂದು ಗರ್ಜಿಸಿದಾಗ ಬಾಲ ಮುದುರಿಕೊಳ್ಳುತ್ತಾನೆ.

* ಕೋರ್ಟ್ ಅನುಮತಿ ಕೊಡದಿದ್ದರೂ ಹೊಸದಾಗಿ ನೇಮಕ ಮಾಡಿದ ಸುಮಾರು 4500 ಶಿಕ್ಷಕರಿಗೆ ಸರಾಸರಿ ತಿಂಗಳಿಗೆ 20 ಸಾವಿರದಂತೆ ಲೆಕ್ಕ ಹಾಕಿದರೆ 1 ವರ್ಷಕ್ಕೆ ಆಗಬಹುದಾದ 300-400 ಕೋಟಿ ರೂಪಾಯಿಗಳನ್ನು ಸರಕಾರದ ಬೊಕ್ಕಸಕ್ಕೆ ನಷ್ಟ ಮಾಡುತ್ತಾನೆ.


* ದ್ವಿಸದಸ್ಯ ಪೀಠದಲ್ಲಿ ಕೂಡ ತೀರ್ಪು ತನ್ನ ಪರವಾಗಿ ಬಾರದಿರುವ ಲಕ್ಷಣ ಕಾಣಿಸುತ್ತಿದ್ದಂತೆ ತರಬೇತಿಯ ನೆಪದಲ್ಲಿ ಹೊಸದಾಗಿ ನೇಮಕಗೊಂಡ ಶಿಕ್ಷಕರನ್ನು ಕರೆಸಿಕೊಂಡು "ರಿಡು ದ ಲಿಸ್ಟ್' ಆದೇಶ ಬಂದರೆ ನೀವು ಕೇಸ್ ಹಾಕಿ. ನಾವು ನಿಮ್ಮೊಂದಿಗಿದ್ದೇವೆ. ಹೊರಗುತ್ತಿಗೆಯವರನ್ನು ಮನೆಗೆ ಕಳಿಸುತ್ತೇನೆ. ಕೋರ್ಟ್ ಹೇಳಿದ್ದನ್ನೆಲ್ಲ ಮಾಡಲು ಆಗುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಸಂಘಟನೆ ಮಾಡಿ ಹೊರಗುತ್ತಿಗೆಯವರನ್ನು ಕೇರ್ ಮಾಡಬೇಡಿ" ಎಂದೆಲ್ಲ ದುರ್ಬೋಧನೆ ಮಾಡಿ ಸಹಿ ಹಾಕಿಸಿಕೊಳ್ಳುತ್ತಾನೆ.

ಒಬ್ಬ ಅಧಿಕಾರಿಯ ಈ ಎಲ್ಲ ನಡವಳಿಕೆಗಳು ಯಾವುದೋ ಲಾಭ ಇಲ್ಲದೆ; ಸ್ವಾಭಾವಿಕವಾಗಿ ಮಾಡುವ ವರ್ತನೆಗಳಲ್ಲ. ಅಲ್ಲದೆ ಹೊರಗುತ್ತಿಗೆ ನೌಕರರಿಗೆ 11 ತಿಂಗಳಿನಿಂದ ಈತ ಕೊಡಬೇಕಾದ ಜುಜುಬಿ ವೇತನ 6400 ರೂಪಾಯಿಯನ್ನು ಕೊಟ್ಟಿಲ್ಲ. ಕಾಯಂ ನೌಕರರಿಗೆ 4-5 ತಿಂಗಳುಗಳಿಂದ ವೇತನ ಕೊಟ್ಟಿಲ್ಲ. ಆದರೆ ಖರೀದಿಗಳು ಮಾತ್ರ ಹೆಚ್ಚು ಹೆಚ್ಚುನಡೆಯುತ್ತಿವೆ! ಓಪನ್ ಮಾರ್ಕೆಟ್‌ನಲ್ಲಿ ಸಿಗುವುದಕ್ಕಿಂತ ಹೆಚ್ಚಿದ ಬೆಲೆಗೆ ಧವಸ ಧಾನ್ಯ ಖರೀದಿಗೆ ಈತ ಟೆಂಡರ್ ಆದೇಶ ನೀಡುತ್ತಾನೆ. ಆಶ್ಚರ್ಯವೆಂದರೆ ಸಮಾಜ ಕಲ್ಯಾಣ ಇಲಾಖೆ, ಬಿಸಿಎಂ ಇಲಾಖೆಗಳೂ ಕೂಡ ಒಂದು ಸೊಸೈಟಿಯಾಗಿರುವ **KREIS** ನ ಆದೇಶವನ್ನು ಸ್ವೀಕರಿಸುತ್ತವೆ! ಹೊರಗುತ್ತಿಗೆ ಶಿಕ್ಷಕರಿಗೆ ವೇತನ ನೀಡುವ ಖಾಸಗಿ ಏಜೆನ್ಸಿಗಳಿಗೆ ಪ್ರತಿ ಶಿಕ್ಷಕರಿಗೆ 7904 ರೂ.ನಂತೆ ಬಿಡುಗಡೆ ಆಗುತ್ತದೆ. ಶಿಕ್ಷಕರಿಗೆ 6400 ಪಾವತಿಯಾಗುತ್ತದೆ. ಹಾಗಾದರೆ ಉಳಿದ ಹಣದ ಪಾಲುಗಳೆಲ್ಲ ಯಾರಿಗೆ? 2004ರಲ್ಲಿ ಒಮ್ಮೆ **KREIS** ರದ್ದಾಗಿತ್ತು. ಆಗ ಪಂಚಾಯತ್ ರಾಜ್ ಇಲಾಖೆಯು ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರವನ್ನು **KREIS** ಚಲಾಯಿಸುವಂತಿಲ್ಲ ಎಂದಿತ್ತು. 2010ರಲ್ಲಿ **KREIS** ಅನ್ನು ಮರುಸ್ಥಾಪಿಸಿದ ಯಡ್ಡಿ ಸರ್ಕಾರ ಅದಕ್ಕೆ ಪೂರ್ಣಾಧಿಕಾರ ನೀಡಿತ್ತು. ಆಡಳಿತ ವಿಕೇಂದ್ರಿಕರಣದ ತತ್ವವನ್ನು ಮುರಿದು ಇಡೀ ರಾಜ್ಯದ ಶಾಲೆಗಳಿಗೆ **KREIS** ಮಾತ್ರವೇ ಖರೀದಿಗಳನ್ನು ನಡೆಸುವಂತೆ ಮಾಡಿದ್ದೇ ಶಾಂತಪ್ಪ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಖರೀದಿ ನಡೆಸುವಾಗ ಮಕ್ಕಳಿಗೆ ಪುಸ್ತಕ, ನೋಟ್‌ಬುಕ್, ಶೂ,



ಯೂನಿಫಾರ್ಮ್‌ಗಳು ಜುಲೈ-ಆಗಸ್ಟ್‌ನಲ್ಲಾದರೂ ಸಿಗುತ್ತಿತ್ತು. ಈಗ ಮಾರ್ಚ್-ಏಪ್ರಿಲ್‌ಗೆ ಸಿಗುವಂತಾಗಿದೆ. **KREIS**ನಲ್ಲಿ ನಾಗರಾಜ್, ಗಂಗಪ್ಪಗೌಡ ಎಂಬ ನಿವೃತ್ತರು ಇದ್ದಾರೆ. ಈ ಶಿಷ್ಯಂದಿರನ್ನು ಕಟ್ಟಿಕೊಂಡು ಪುಂಡಾಟಿಕೆ ನಡೆಸುತ್ತಿರುವ ಶಾಂತಪ್ಪ ಎಂಬ ತಿಮಿಂಗಿಲವನ್ನು ನಿಯಂತ್ರಿಸಲು ಸಮಾಜ ಕಲ್ಯಾಣ ಕಾರ್ಯದರ್ಶಿ, ಸಮಾಜ ಕಲ್ಯಾಣ ಆಯುಕ್ತರು, ಸರಕಾರದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಸಚಿವರು ಮುಂದಾಗುತ್ತಿಲ್ಲವೆಂದರೆ ನಡೆಯುತ್ತಿರಬಹುದಾದ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ದೊಡ್ಡ ದೊಡ್ಡ ಕುಳಗಳೇ ಇರುವಂತಿದೆ. ಆದ್ದರಿಂದ ಇದಕ್ಕೆ ಸಿ.ಬಿ.ಐ. ತನಿಖೆಯೇ ಸೂಕ್ತ.

KREIS ಆಡಳಿತ ಮಂಡಳಿಗೆ ಸಮಾಜ ಕಲ್ಯಾಣ ಸಚಿವರು ಅಧ್ಯಕ್ಷ. ಕಾರ್ಯದರ್ಶಿ ಉಪಾಧ್ಯಕ್ಷ. ಶಿಕ್ಷಣ ಇಲಾಖೆ ಕಾರ್ಯದರ್ಶಿ, ಮಹಿಳಾ ಕಲ್ಯಾಣ ಇಲಾಖೆ



ಕಾರ್ಯದರ್ಶಿಗಳೆಲ್ಲ ಸದಸ್ಯರು. ಅಧಿಕಾರಿಗಳೇ ಸೇರಿಕೊಂಡು ಒಂದು ಸೊಸೈಟಿಯನ್ನು ಮಾಡಲು ಆಗುತ್ತದಾ? ಅಂದರೆ ಸರಕಾರದಿಂದ ಹಣ ಬಿಡುಗಡೆ ಮಾಡಿಸಿ ಹೇಗೆ ಬೇಕಾದರೂ ಉಪಯೋಗಿಸಲು ಸರಕಾರದಲ್ಲಿರುವವರಿಗೆ ಅವಕಾಶ ಕಲ್ಪಿಸಿಕೊಡುವ ವ್ಯವಸ್ಥೆಯೇ **KREIS**. ಇಲ್ಲಿನ ಶೋಷಣೆ ಯಾವ ಪ್ರಮಾಣದಲ್ಲಿದೆಯೆಂದರೆ ನಿಯಮಾನುಸಾರ ಕಾಯಂ ಶಿಕ್ಷಕರಿಗೆ ಏಪ್ರಿಲ್ 2012ರಿಂದ 6ನೇ ವೇತನ ಶ್ರೇಣಿ ನೀಡಬೇಕು. ಆದರೆ **KREIS** ಆಗಸ್ಟ್‌ನಿಂದ 6ನೇ ವೇತನ ಶ್ರೇಣಿ ನೀಡುತ್ತದೆ. ಡಿ.ಎ. ಇಲ್ಲ ಸೇವಾ ದಾಖಲಾತಿ ಇಲ್ಲ, ಪೆನ್ಷನ್ ಸ್ಕೀಂ ಇಲ್ಲ. 24 ಗಂಟೆಯೂ ಅವರು ಶಾಲೆಯಲ್ಲೇ ಇದ್ದು ಕೆಲಸ ಮಾಡಬೇಕು. ಕಮಕ್‌ಕಿಮಕ್ ಎಂದರೆ ಶಾಂತಪ್ಪನ ಅವಾಚ್ಯ ನಿಂದನೆಗಳಿಗೆ ಒಳಗಾಗಬೇಕು ಅಥವಾ ಗಂಗಪ್ಪಗೌಡನ ದಾಂಧಲೆಗೆ ತುತ್ತಾಗಬೇಕು. ಹೊರಗುತ್ತಿಗೆ ಶಿಕ್ಷಕರಿಗೆ 6 ಸಾವಿರ ಚಿಲ್ಲರೆ ವೇತನ ಕೊಡುವ **KREIS** ಅದೇ ರೀತಿ ಗುತ್ತಿಗೆ ನೌಕರನಾಗಿರುವ ಗಂಗಪ್ಪಗೌಡ ಎಂಬ ಮಾಜಿ ಶಿಕ್ಷಣ ಇಲಾಖೆ ಅಧಿಕಾರಿಗೆ 30-35 ಸಾವಿರ ವೇತನ ಕೊಡುತ್ತದೆ. ತನ್ನದೇ ಕಚೇರಿಯಲ್ಲಿ ಕೆಲಸ ಮಾಡುವ ಎಫ್.ಡಿ.ಎ.ಗಳು 12 ವರ್ಷಗಳಿಂದ ಇದ್ದರೂ ಅವರನ್ನು ಕಾಯಂಗೊಳಿಸಬೇಕೆಂಬ ಯೋಚನೆಯಾಗಲಿ, ಅವರ ವೇತನವನ್ನು ಏರಿಸೋಣವೆಂಬ ಪ್ರಜ್ಞೆಯಾಗಲಿ ಶಾಂತಪ್ಪನ ಶಿಷ್ಯ ಪಟಾಲಂಗೆ ಇಲ್ಲ. ಇವರ ವಿಚಾರ ಬಿಡಿ; ಈ ಶಿಷ್ಯ ಪಟಾಲಂ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಎಲ್ಲ ಸಹಾಯ ಪಡೆದು ಅವರಿಗೇ ಧಮಕಿ ಹಾಕುತ್ತದೆ. ಶಾಲೆಗಳಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ನೌಕರರನ್ನು ಕೆಂಗಣ್ಣಿನಿಂದ ನೋಡಿ 'ಗೆಟ್‌ಔಟ್' ಎಂದು ಆದೇಶಿಸುತ್ತದೆ. ಡಿ.ಸಿ.ಗೇ ಆದೇಶವನ್ನು ಮಾಡುತ್ತದೆ!


ಶಾಂತಪ್ಪನ ಕಿರಾತಕ ಪಟಾಲಂ ಹೊಸದಾಗಿ ನೇಮಕಗೊಂಡಿರುವ ಶಿಕ್ಷಕರನ್ನು ಸುಪ್ರೀಂಕೋರ್ಟಿಗೆ ಹೋಗಲು ಪುಸಲಾಯಿಸುತ್ತದೆ. ಸುಪ್ರೀಂಕೋರ್ಟ್‌ನಲ್ಲಿ ಈತನ C&R ರೂಲ್ ನಿಲ್ಲುತ್ತದಾ? ಬಿ.ಎಡ್. ಪದವಿ ಪಡೆಯದೆ ಇರುವ ಕಂಪ್ಯೂಟರ್ ಸಹಾಯಕರನ್ನು ಕಂಪ್ಯೂಟರ್ ಶಿಕ್ಷಕರೆಂದು ನಮೂದಿಸಿ ಬಿ.ಎಡ್. ಮಾಡಿದವರಿಗೆ ಸಮಾನವಾದ ವೇತನವನ್ನು C&Rನಲ್ಲಿ ಹೇಳಲಾಗಿದೆ. ಎಕ್ಸಿಕ್ಯೂಟಿವ್ ಡೈರೆಕ್ಟರ್ ಮತ್ತು ಆತನ ಪಟಾಲಂ ಬೇರೆ ಇಲಾಖೆಯಿಂದ ಬಂದವರೆಂದು ಹೇಳುವ C&R ರೂಲ್ ಅವರ ವೇತನವನ್ನು ನಿಗದಿಪಡಿಸುತ್ತದೆ! ಬೇರೆ ಇಲಾಖೆಯವರಿಗೆ ಇಲ್ಲಿ ವೇತನವನ್ನು ನಿಗದಿಪಡಿಸಲು ಹೇಗೆ ಸಾಧ್ಯ. ತನ್ನ ಪರವಾಗಿ ವಾದ ಮಾಡುವಂತೆ ಅಡ್ವೋಕೇಟ್ ಜನರಲ್ ಅವರನ್ನು **KREIS** ಕೇಳಿಕೊಂಡಾಗ ಅಡ್ವೋಕೇಟ್ ಜನರಲ್ C&R ರೂಲ್ ಅನ್ನು ಎತ್ತಿ ಎಸೆದರಂತೆ ಎಂಬ ಮಾತುಗಳು ಬಾರ್ ಕೌನ್ಸಿಲ್‌ನಲ್ಲಿ ಕೇಳಿಬರುತ್ತಿದೆ! ನಂತರ **KREIS** ಗೊತ್ತು ಮಾಡಿದ್ದೇ ಮಧುಸೂದನ ಎಂಬ ಲಾಯರನ್ನು. ಹೊರಗುತ್ತಿಗೆ ಶಿಕ್ಷಕರ ಲಾಯರ್ ಎಂ. ನಾರಾಯಣಭಟ್ ಶಿಕ್ಷಕರ ಕೈಯಿಂದ ತೆಗೆದುಕೊಂಡ ಶುಲ್ಕ ಕೇವಲ ಎರಡು ಸಾವಿರ ರೂಪಾಯಿ. ಅದನ್ನೂ ಅವರು ಯಾವುದೋ ಶಾಲೆಗಳಿಗೆ ಕೊಟ್ಟುಬಿಟ್ಟಿದ್ದಾರೆಂದು ಹೇಳಲಾಗಿದೆ. ಬೇರಾವ ಶುಲ್ಕವನ್ನೂ ಕೇಳದೆ ಸಂಬಳ ಆಗದೆ ಇರುವ ಶಿಕ್ಷಕರಿಗೆ ತಾನೇ ಹಣ ಕೊಟ್ಟುಕೊಂಡು, ಕೇಸ್ ನಡೆಸುತ್ತಿರುವ ನಾರಾಯಣಭಟ್ಟರನ್ನು ಕೋಟಿ ಕೊಟ್ಟರೂ ಖರೀದಿಸಲು ಆಗುವುದಿಲ್ಲವೆಂದು ಗೊತ್ತಾಗುತ್ತಲೇ ಶಾಂತಪ್ಪನ ಪಟಾಲಂ ಅಶೋಕ ಹಾರ್ನಳ್ಳಿಗೆ ಜೋತು ಬಿದ್ದಿದ್ದಾರೆ. ಶಾಂತಪ್ಪನ ಈ ಪಟಾಲಂ **KREIS** ಅನ್ನು ಸಮಾಧಿ ಮಾಡುವುದಂತೂ ಖಚಿತ. ಆದರೆ ಆ ಸಮಾಧಿಯ ಅಡಿಯಲ್ಲಿ ದಲಿತರು, ಬಡವರು ಮತ್ತು ನಿರ್ಗತಿಕರ ಮಕ್ಕಳು ಹೂತು ಹೋಗಿರುತ್ತಾರೆ.

● ವರದಿಗಾರ

ಆಧಾರ್ ಬಂದಿದೆ ಹುಷಾರ್!

"ನೀವು ಆಧಾರ್ ಕಾರ್ಡ್ ಮಾಡಿಸಿದ್ದೀರಾ?" "ಆಧಾರ್ ಕಾರ್ಡ್ ಅಂದರೆ ಏನು?", "ನಮ್ಮ ಬಳಿ ಓಟರ್ ಐಡಿ, ರೇಷನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್ ಎಲ್ಲಾ ಇದೆ. ಆದರೂ ಮತ್ತೆ ಆಧಾರ್ ಕಾರ್ಡ್ ಮಾಡಿಸಬೇಕಾ?", "ಈ ಆಧಾರ್‌ನಿಂದ ಏನು ಪ್ರಯೋಜನ?" ಇಂಥಾ ಹತ್ತಾರು ಪ್ರಶ್ನೆಗಳು ಜನಸಾಮಾನ್ಯರಲ್ಲಿ ಇತ್ತೀಚೆಗೆ ಹುಟ್ಟಿಕೊಂಡಿವೆ. ಇದಕ್ಕೆ ಉತ್ತರ ಕಂಡುಕೊಳ್ಳಲು ತಮ್ಮ ಹಿತೈಷಿಗಳ ಜೊತೆ ಅಥವಾ ನೆರೆಹೊರೆಯವರ ಜೊತೆ ಚರ್ಚಿಸುತ್ತಿದ್ದಾರೆ. ಆದರೆ ಎಲ್ಲಿಯೂ ಸಮರ್ಪಕವಾದ ಉತ್ತರವಿಲ್ಲ. ಆದರೆ ಎಲ್ಲದಕ್ಕೂ ಆಧಾರ್ ಬೇಕೇಬೇಕಂತೆ ಎಂಬ ರೂಮರ್ ಮಾತ್ರ ಊರ ತುಂಬಾ ಹರಡಿಬಿಟ್ಟಿದೆ.

ತೀರಾ ಇತ್ತೀಚೆಗೆ, ಸಬ್ಸಿಡಿ ದರದಲ್ಲಿ ಎಲ್‌ಪಿಜಿ ಗ್ಯಾಸ್ ಪಡೆದುಕೊಳ್ಳಲು ಆಧಾರ್ ಕಾರ್ಡ್ ಬೇಕೇಬೇಕು ಎಂಬ ಸುದ್ದಿ ಹರಡಿ ಜನರು ಗಲಿಬಿಲಿಗೊಂಡಿದ್ದಾರೆ. ಸರ್ಕಾರದ



ಕೆಲವು ಇಲಾಖೆಗಳು ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಕೇಳುತ್ತಿವೆ. ಅದರ ಜೊತೆಜೊತೆಗೆ, ಆಧಾರ್ ಪಡೆದುಕೊಂಡರೆ ನಿಮ್ಮ ಅದೃಷ್ಟದ ಬಾಗಿಲು ತೆರೆಯುತ್ತದೆ ಎಂಬಂಥ ಸರ್ಕಾರಿ ಜಾಹಿರಾತುಗಳು ಬೇರೆ. ಅಷ್ಟೂ ಸಾಲದೆಂಬಂತೆ ಇದರ ಅರ್ಜಿಯನ್ನು ನಿಮ್ಮ ಮನೆಬಾಗಿಲಿಗೆ ಪೋಸ್ಟ್‌ಮ್ಯಾನ್ ಮೂಲಕ ತಲುಪಿಸುವ ವ್ಯವಸ್ಥೆಯನ್ನೂ ಮಾಡುವುದಾಗಿ ಘೋಷಿಸಿ ಸರ್ಕಾರ ಪುಣ್ಯ ಕಟ್ಟಿಕೊಂಡಿದೆ. ಹೀಗಾಗಿ ಆಧಾರ್‌ಗೆ ಬೇಡಿಕೆ ಹೆಚ್ಚಾಗಿಬಿಟ್ಟಿದೆ.

ಈ ಹಿನ್ನೆಲೆಯಲ್ಲಿ ಏನಿದು ಆಧಾರ್? ಇದ್ದಕ್ಕಿದ್ದಂತೆ ಈ ಸ್ಕೀಮ್ ಎಲ್ಲಿಂದ ಬಂತು? ಇದಕ್ಕೆ ಇಷ್ಟೊಂದು ಆತುರ ವ್ಯಕ್ತವಾಗುತ್ತಿರುವುದಾದರೂ ಯಾತಕ್ಕೆ? ಎಂಬ ವಿಷಯಗಳನ್ನು ಕೆದಕಿದರೆ ಕೆಲವು ಘನಘೋರ ವಿಷಯಗಳು ಬೆಳಕಿಗೆ ಬರುತ್ತಿವೆ. ಆದರೆ ಇಂಥಾ ತೀರಾ ಸಾರ್ವಜನಿಕವಾದ ಯೋಜನೆಯ ಬಗ್ಗೆ ಎಂಥಾ ನಿಗೂಢತೆಯಿದೆ ಎಂದರೆ ಪಂಡಿತನಿಂದ ಹಿಡಿದು ಪಾಮರನವರೆಗೆ ಯಾರಿಗೂ ಈ ವಿವರಗಳು ಲಭ್ಯವಿಲ್ಲ. ಆದರೆ ಈ ಇಡೀ ಯೋಜನೆಯೇ ನಾನಾ ಅಕ್ರಮಗಳು, ಕಾನೂನುಬಾಹಿರ ಕೃತ್ಯಗಳ ಕಂತೆಯಾಗಿರುವುದರಿಂದ ಅದನ್ನು ರದ್ದುಗೊಳಿಸುವಂತೆ ಕೋರಿ ವಿವಿಧ ನ್ಯಾಯಾಲಯಗಳಲ್ಲಿ ಕೇಸುಗಳು ದಾಖಲಾಗಿವೆ. ಹೀಗೆ ಕೇಸು ದಾಖಲಿಸಿರುವವರಲ್ಲಿ ರಾಷ್ಟ್ರಪತಿ ಪದಕ ಗಳಿಸಿದ ಕ್ಷಿಪಣಿ ವಿಜ್ಞಾನಿ ಮ್ಯಾಥ್ಯೂ ಥಾಮಸ್, ಕರ್ನಾಟಕ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಕೆ.ಎಸ್.ಪುಟ್ಟಸ್ವಾಮಿ ಮುಂತಾದ ಗಣ್ಯರಿದ್ದಾರೆ. ಸುಪ್ರೀಂ ಕೋರ್ಟ್ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನೋಟೀಸ್ ಜಾರಿ ಮಾಡಿದೆ.

ಈ ಆಧಾರ್ ಯೋಜನೆಯನ್ನು ವಿರೋಧಿಸುತ್ತಿರುವವರ ಸಂಖ್ಯೆಯೂ ಬಹಳ ದೊಡ್ಡದಿದೆ. ಮಾಹಿತಿ ಹಕ್ಕು ಹೋರಾಟಗಾರರು, ಮಾನವ ಹಕ್ಕು ಸಂಘಟನೆಗಳು ಮಾತ್ರವಲ್ಲದೆ ಹಲವು ಕ್ಷೇತ್ರಗಳ ಗಣ್ಯರು ಇದು ಕಾನೂನುಬಾಹಿರ ಯೋಜನೆಯೆಂದು ಘೋಷಿಸಿದ್ದಾರೆ. ಜಸ್ಟೀಸ್ ವಿ.ಆರ್.ಕೃಷ್ಣ ಅಯ್ಯರ್ ಅವರು ಆಧಾರ್ ಯೋಜನೆಯ ವಿರುದ್ಧ ಒಂದು ಪುಸ್ತಕವನ್ನೇ ಬಿಡುಗಡೆ ಮಾಡಿದ್ದಾರೆ. ಭಾರತ ಒಕ್ಕೂಟದ ಹಲವಾರು ರಾಜ್ಯಗಳು ಈ ಯೋಜನೆಯನ್ನು ತಿರಸ್ಕರಿಸಿವೆ. ಆದರೂ ಈ ಯೋಜನೆ ದಿನೇದಿನೇ ವೇಗ ಪಡೆದುಕೊಳ್ಳುತ್ತಿದೆ.

ಆ ವಿಷಯಗಳಿಗೆ ನಂತರ ಬರೋಣ. ಮೊದಲಿಗೆ ಈ ಅಕ್ರಮ ಕಾರ್ಡ್ ಪಡೆದುಕೊಳ್ಳಲು ಜನರು ಎಂಥಾ ಪಡಿಪಾಟಲು ಅನುಭವಿಸುತ್ತಿದ್ದಾರೆ ಎಂಬುದನ್ನು ನೋಡೋಣ.

ಆಧಾರ್ ಅನಿವಾರ್ಯ ಎಂಬ ತುರ್ತುಸ್ಥಿತಿಯನ್ನು ಈಗಾಗಲೇ ಸರ್ಕಾರ ನಿರ್ಮಿಸಿದೆ. ಪರಿಣಾಮವಾಗಿ ಅಲ್ಲಲ್ಲಿ ತಲೆಯೆತ್ತಿರುವ ಆಧಾರ್ ನೋಂದಣಿ ಕೇಂದ್ರಗಳ ಬಳಿ ಜನ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸುತ್ತಿದ್ದಾರೆ. ಇನ್ನೂ ತಾಯಿಯ ತೆಕ್ಕೆಯಲ್ಲೇ ಇರುವ ಕೂಸುಗಳಿಂದ ಹಿಡಿದು ತೀರಾ ವಯಸ್ಸಾದ ಹಣ್ಣು ಹಣ್ಣು ಮುದುಕರವರೆಗೆ ಎಲ್ಲರೂ ಕ್ಯೂನಲ್ಲಿ ನಿಲ್ಲುತ್ತಿದ್ದಾರೆ. ಹೀಗೆ ವಾರಗಟ್ಟಲೆ ಕ್ಯೂನಲ್ಲಿ ನಿಂತರೂ ತಮ್ಮ ಸರದಿ ಬಾರದ ಜನರು ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ.

ಸರ್ಕಾರದಿಂದ ಅಧಿಕೃತವಾಗಿ ನಿಯಮಿಸಲ್ಪಟ್ಟ ಏಜೆನ್ಸಿಗಳು ಅಕ್ರಮವಾಗಿ ಹಲವಾರು ಸಬ್ ಏಜೆಂಟ್‌ಗಳನ್ನು ನೇಮಿಸಿಕೊಂಡಿದ್ದಾರೆ. ಆ ಸಬ್ ಏಜೆಂಟ್‌ಗಳು ಮತ್ತಷ್ಟು ಮರಿ ಏಜೆಂಟ್‌ಗಳನ್ನು, ಫ್ರಾಂಚೈಸಿಗಳನ್ನು ನೇಮಿಸಿಕೊಂಡಿದ್ದಾರೆ. ಈ ಏಜೆನ್ಸಿ ನೆಟ್‌ವರ್ಕ್‌ನ ಪ್ರತಿನಿಧಿಗಳು ಎಲ್ಲೋ ಹೋಗಿ ಒಂದು ಸಮುದಾಯ ಭವನವನ್ನೋ ಅಥವಾ ಯಾವುದೋ ಪಾಳುಮನೆಯನ್ನೋ ಬಾಡಿಗೆಗೆ ಹಿಡಿದು, ಆಧಾರ್ ನೋಂದಣಿ ಮಾಡಿಸಿ ಎಂದು ಪ್ರಚಾರ ಮಾಡುತ್ತಾರೆ. ಇನ್ನು ಕೆಲವು ಬಡಾವಣೆಗಳಲ್ಲಿ ಸ್ಥಳೀಯ ನಾಗರಿಕರೇ ಮುಂದಾಗಿ ಇಂಥಾ ವ್ಯವಸ್ಥೆ ಮಾಡುತ್ತಿದ್ದಾರೆ.

ಇಂಥಾ ಒಂದು ರೂಮಿನಲ್ಲಿ ಐದಾರು ಮಂದಿ ಯಾವುದೇ ತರಬೇತಿಯಿಲ್ಲದ, ಉನ್ನತ ತಂತ್ರಜ್ಞಾನ ಎಂದರೇನೆಂದೇ ತಿಳಿಯದ ಅನ್‌ಸ್ಕಿಲ್ಡ್ ಮಂದಿ ಕೂತಿರುತ್ತಾರೆ. ಅವರೊಂದಿಗೆ ಒಂದೆರಡು ಲ್ಯಾಪ್‌ಟಾಪ್‌ಗಳು, ಸ್ಕ್ಯಾನರ್‌ಗಳು, ಕಣ್ಣಿನ ಐರಿಸ್‌ನ ಚಿತ್ರ ತೆಗೆಯಲು ಬೇಕಾದ ವಿಶಿಷ್ಟ ಕ್ಯಾಮರಾ ಮುಂತಾದ ಪರಿಕರಗಳಿರುತ್ತವೆ.

ಒಬ್ಬ ವ್ಯಕ್ತಿಯ ದಾಖಲೆ ಪರಿಶೀಲನೆ, ಬೆರಳಚ್ಚು ಸ್ಕ್ಯಾನಿಂಗ್, ಕಣ್ಣಿನ ಫೋಟೋ ಇತ್ಯಾದಿಗಳನ್ನೊಳಗೊಂಡ ಪ್ರಕ್ರಿಯೆ ಮುಗಿಸಲು ಏನಿಲ್ಲವೆಂದರೂ 20 ರಿಂದ 30 ನಿಮಿಷ ಹಿಡಿಯುತ್ತದೆ. ಹೀಗೆ ಒಂದು ದಿನಕ್ಕೆ ಒಂದು ಕೇಂದ್ರದಲ್ಲಿ ನೋಂದಣಿ ಸಾಮರ್ಥ್ಯ 60-70ನ್ನು ಮೀರುವುದಿಲ್ಲ. ಆದರೆ ಹೊರಗಡೆ ಬಿಸಿಲಿನಲ್ಲಿ ನಿಂತ ಮಂದಿಯ ನೂಕುನುಗ್ಗಲು ಹೆಚ್ಚುತ್ತಲೇ ಇರುತ್ತದೆ. ಕುಡಿಯುವ ನೀರು, ಶೌಚಾಲಯದಂಥ ವ್ಯವಸ್ಥೆಗಳು ಹಾಳಾಗಲಿ, ಸರಿಯಾಗಿ ಕಂಪ್ಯೂಟರ್ ಆಪರೇಟ್ ಮಾಡುವವರೂ ಅಲ್ಲಿರುವುದಿಲ್ಲ. ಈ ಯೋಜನೆಯ ಪರವಾಗಿ ವಾದಿಸಲೇಬೇಕೆಂದು ಎಷ್ಟೇ ದೃಢ ತೀರ್ಮಾನ ಮಾಡಿದ್ದವರಿಗೂ ನೋಂದಣಿ ಕೇಂದ್ರದ ಸನ್ನಿವೇಶ ಬಾಯಿಕಟ್ಟಿಸಿಬಿಡುತ್ತದೆ.

ಈ ಯೋಜನೆಯ ಬಗ್ಗೆ ಇರುವ ಸಾರ್ವಜನಿಕರ ದೂರುಗಳನ್ನು ಯಾವ ಇಲಾಖೆಗೆ ಅಥವ ಯಾವ ಅಧಿಕಾರಿಗೆ ನೀಡಬೇಕು ಎಂಬುದು ಕೂಡ ಬಹಳ ನಿಗೂಢ. ಯಾಕೆಂದರೆ ಇಲ್ಲಿ ಯಾವ ಇಲಾಖೆಯ ಪಾತ್ರವೂ ಇಲ್ಲ. ಎಲ್ಲಾ ಖಾಸಗಿ ಏಜೆಂಟ್, ಮರಿ ಏಜೆಂಟ್‌ಗಳದ್ದೇ ಪಾರುಪತ್ಯ. ತನ್ನ ಅವ್ಯವಸ್ಥೆಯನ್ನು ಮುಚ್ಚಿಕೊಂಡು ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ವಿಶಿಷ್ಟ ಗುರುತಿನ ಪ್ರಾಧಿಕಾರ ಆಗಾಗ್ಗೆ ದಿನಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟು ಕೈತೊಳೆದುಕೊಳ್ಳುತ್ತಿದೆ.

ಇದರ ಜೊತೆಗ ಆಧಾರ್ ನೋಂದಣಿ ಪ್ರಕ್ರಿಯೆ - ಪರಿಶೀಲಕರ ಕೈಪಿಡಿ ಎಂಬ ಬ್ಯಾಂಕ್ ಪಾಸ್‌ಬುಕ್ಕನ್ನು ಹೋಲುವ ಒಂದು ಕಿರು ಕೈಪಿಡಿಯನ್ನು ಸರ್ಕಾರದ ಇ-ಆಡಳಿತ ಇಲಾಖೆ ಪ್ರಕಟಿಸಿ ಪುಣ್ಯ ಕಟ್ಟಿಕೊಂಡಿದೆ. ಅದರ ಒಂದು ಪುಟದಲ್ಲಿ "ಯಾವುದೇ ಆಮಿಷಗಳಿಗೆ ಮತ್ತು ಲಂಚ ಪ್ರಕರಣಗಳಿಗೆ ಪರಿಶೀಲಕರು ಎಡೆ ಮಾಡಿಕೊಡಬಾರದು" ಎಂಬ ಮೂರು ಕಾಸಿಗೂ ಕಿಮ್ಮತ್ತಿಲ್ಲದ ಎಚ್ಚರಿಕೆಯೊಂದನ್ನು ಪ್ರಕಟಿಸಿರುವುದನ್ನು ಬಿಟ್ಟರೆ ಈ ಪ್ರಕ್ರಿಯೆಯನ್ನು ನಿಯಂತ್ರಿಸಲು ಸರ್ಕಾರದ ಬಳಿ ಯಾವುದೇ ವ್ಯವಸ್ಥೆಯಿಲ್ಲ.

ಈ ಪರಿಶೀಲಕರೆಂದರೆ ಯಾರೋ ಮೇಲಧಿಕಾರಿಯಿರಬೇಕು ಎಂದು ನಾವು ಭಾವಿಸಿದರೆ ನಮಗಿಂತಾ ಮೂರ್ಖರು ಯಾರೂ ಇಲ್ಲ. ಪರಿಶೀಲಕರು ಎಂದರೆ ಅದೇ ಅನನುಭವಿ, ಅಕುಶಲ ವ್ಯಕ್ತಿಯೇ ಆಗಿದ್ದಾನೆ. ಅವರಿಗೆ ಕೆಲಸ ಕಳೆದುಕೊಳ್ಳುವ ಭೀತಿಯೂ ಇಲ್ಲ; ಯಾಕೆಂದರೆ ಇದು ಹೇಳಿಕೇಳಿ ಅಲ್ಪಾವಧಿ ಉದ್ಯೋಗ. ಸಿಕ್ಕಿದ್ದಷ್ಟು ದಿನ ಸಿಕ್ಕಿದ್ದಷ್ಟು ಕಾಸು. ಭಾರತ ಪುಣ್ಯಭೂಮಿಯಲ್ಲಿ ಇಂಥಾ ಸದವಕಾಶ ಸಿಕ್ಕರೆ ಪರಿಸ್ಥಿತಿ ಏನಾಗಬಹುದೋ ಅದೇ ನಡೆಯುತ್ತಿದೆ. ಭ್ರಷ್ಟಾಚಾರ ನಡೆಯಲಿಲ್ಲವೆಂದಿಟ್ಟುಕೊಳ್ಳಿ. ಆದರೆ ಬೇಜವಾಬ್ದಾರಿಯಾಗಿ ಕೆಲಸ ಮಾಡಲಿಕ್ಕೆ ಯಾರ ಅಭ್ಯಂತರವೂ ಇಲ್ಲ. ಇಲ್ಲಿನ ವ್ಯವಸ್ಥೆಗಿಂತ ಪಿಡಬ್ಲ್ಯೂಡಿಯವರು, ಬಿಬಿಎಂಪಿಯವರು ಒಂದೇ ರಸ್ತೆ ಅಥವಾ ಒಂದೇ ಮೋರಿಗೆ ಹಲವು ಬಾರಿ ಬಿಲ್ ಮಾಡಿ ನುಂಗುವ ವ್ಯವಸ್ಥೆ ಹತ್ತು ಪಟ್ಟು ಉತ್ತಮ. ಯಾಕೆಂದರೆ ಅಲ್ಲಿನ ಅವ್ಯವಸ್ಥೆಯ ಬಗ್ಗೆ ಯಾವುದೇ ಸಂದರ್ಭದಲ್ಲಿ ತನಿಖೆ ನಡೆಸುವ ಅಧಿಕಾರ ಸರ್ಕಾರಕ್ಕಿರುತ್ತದೆ. ಆದರೆ ಈ ಸ್ಕೀಮಿನಲ್ಲಿ ಅಕೌಂಟಬಲಿಟಿ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಅಕೌಂಟಬಲಿಟಿಯ ವಿಚಾರ ಬಂದಾಗ ಬಹಳ ಪ್ರಮುಖವಾದ ವಿಷಯವೊಂದಿದೆ. ಏನೆಂದರೆ ಇದು ಕೇವಲ ಅನ್‌ಸ್ಕಿಲ್ಡ್ ಖಾಸಗಿ ಏಜೆಂಟ್‌ಗಳ ವಿಷಯಕ್ಕೆ ಮಾತ್ರ ಸೀಮಿತವಾದುದಲ್ಲ. ಈ ಪ್ರಾಧಿಕಾರದ ತುತ್ತತುದಿಯಲ್ಲಿ ಕುಳಿತಿರುವ ನಂದನ್ ಮನೋಹರ ನಿಲೇಕಣಿ ಎಂಬ ಆಸಾಮಿಯನ್ನೂ ಒಳಗೊಂಡು ಈ ಇಡೀ ಯೋಜನೆಗೆ ಯಾವುದೇ ಅಕೌಂಟಬಲಿಟಿ ಇಲ್ಲ. ಅಷ್ಟು ಮಾತ್ರವಲ್ಲ ಈ ಯೋಜನೆಗೆ ಯಾವುದೇ ಕಾನೂನುಬದ್ಧ ಮಾನ್ಯತೆಯೂ ಇಲ್ಲ. ಇಡೀ ಯೋಜನೆಯೇ ಸಂವಿಧಾನಬಾಹಿರ ವಿಧಾನಗಳಲ್ಲಿ ಹಿಂಬಾಗಿಲಿನ ಡೀಲಿಂಗ್‌ಗಳ ಮೂಲಕ ಜಾರಿಯಾಗುತ್ತಿದೆ ಎಂಬುದು ಆಶ್ಚರ್ಯವೆನಿಸಿದರೂ ಕಟು ಸತ್ಯ.

ಈ ಯೋಜನೆಗಾಗಿ ವೆಚ್ಚ ಮಾಡುತ್ತಿರುವ ಹಣವೂ ಭಾರೀ ದುಬಾರಿ. ಈಗ ಅಂದಾಜಿಸಿರುವ ಮೊತ್ತವೇ 72,000 ಕೋಟಿಗಳು. ಆದರೆ ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು ಒಂದೂವರೆ ಲಕ್ಷ ಕೋಟಿ ರೂಪಾಯಿಗಳಷ್ಟು ವೆಚ್ಚವಾಗಬಹುದೆಂದು ಕೆಲವು ತಜ್ಞರು ಭವಿಷ್ಯ ನುಡಿದಿದ್ದಾರೆ. ಇದುವರೆಗೆ ಫೇಸ್-1 ಮತ್ತು ಫೇಸ್-2 ಗಳಲ್ಲಿ ತಲಾ 10 ಕೋಟಿ ಮಂದಿಯ ಡಾಟಾ ಸಂಗ್ರಹಕ್ಕಾಗಿಯೇ ಸುಮಾರು 15,000 ಕೋಟಿಗಳಷ್ಟು ಹಣ ಹರಿದಿದೆಯೆಂದು ಒಂದು ಅಂದಾಜು. ದೇಶದ ಒಟ್ಟು 121 ಕೋಟಿ ಜನರ ದಾಖಲೆ ಸಂಗ್ರಹಿಸಿ 121 ಕೋಟಿ ನಂಬರ್‌ಗಳಿಗೂ ಕಾರ್ಡ್ ವಿತರಿಸಬೇಕೆಂದರೆ ಎಷ್ಟು ವೆಚ್ಚವೆಂಬುದನ್ನು ಅಂದಾಜಿಸಿ. ಕೇಂದ್ರ ಮಹಾಲೆಕ್ಕ ಪರಿಶೋಧಕರು ಇತ್ತಕಡೆ ಗಮನ ಹರಿಸಿ ತುರ್ತಾಗಿ ತನಿಖೆ ನಡೆಸುವ ಅಗತ್ಯವಿದೆ.

ಹಣಕಾಸು ಸಚಿವಾಲಯದ ಪಾರ್ಲಿಮೆಂಟರಿ ಸ್ಟ್ಯಾಂಡಿಂಗ್ ಕಮಿಟಿ ಈ ಯೋಜನೆಯನ್ನು ಖಂಡತುಂಡವಾಗಿ ವಿರೋಧಿಸಿದೆ. ಪಾರ್ಲಿಮೆಂಟಿನಲ್ಲಿ ಚರ್ಚಿಸಿ ಅನುಮೋದನೆ ಪಡೆಯದೆ ಹಿಂಬಾಗಿಲಿನಿಂದ, ತರಾತುರಿಯಲ್ಲಿ ಜಾರಿಗೆ ತರುತ್ತಿರುವ ವಿಧಾನದ ಬಗ್ಗೆ ಕಮಿಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಷ್ಟು ಮಾತ್ರವಲ್ಲದೆ ಆರ್ಥಿಕ ಸಮಿತಿಯು "ಈ ಯೋಜನೆ ಉದ್ದೇಶದ ಬಗ್ಗೆಯೇ ಸರ್ಕಾರಕ್ಕೆ ಸ್ಪಷ್ಟತೆಯಿಲ್ಲ" ಎಂದು ಕಟುಮಾತುಗಳಲ್ಲಿ ಟೀಕಿಸಿದೆ. ಮತ್ತೊಂದು ಗಮನಾರ್ಹವಾದ ಸಂಗತಿಯೇನೆಂದರೆ ಈ ಯೋಜನೆಯ ಬಗ್ಗೆ ಗೃಹ ಸಚಿವಾಲಯವೇ ಆಕ್ಷೇಪಣೆ ಎತ್ತಿರುವುದು. ಈ ಯೋಜನೆಯಲ್ಲಿ ಗಂಭೀರವಾದ ಹಾಗೂ ಸರಿಪಡಿಸಲಾಗದ ಭದ್ರತಾ ಲೋಪಗಳಿರುವುದರಿಂದ ರಾಷ್ಟ್ರೀಯ ಭದ್ರತೆಗೆ ತೀವ್ರ ಅಪಾಯವಿದೆಯೆಂದು ಎಚ್ಚರಿಕೆ ನೀಡಿದೆ.

ವಾಸ್ತವ ಸಂಗತಿಗಳು ಹೀಗಿರುವಾಗ ಈ ಯೋಜನೆಯನ್ನು ಅಷ್ಟು ಒತ್ತಾಯ ಪೂರ್ವಕವಾಗಿ ಕಾನೂನುಬಾಹಿರ ವಿಧಾನಗಳಲ್ಲಿ ಅಷ್ಟೊಂದು ತರಾತುರಿಯಲ್ಲಿ ತರುತ್ತಿರುವ ಉದ್ದೇಶವಾದರೂ ಏನು? ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಒಟ್ಟಾರೆ ದೇಶದಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಆರ್ಥಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಈ ಆಧಾರ್ ಯೋಜನೆಯನ್ನು ವಿಶ್ಲೇಷಿಸುವುದಾದರೆ ನಮಗೆ ಇದರ ಒಳಸುಳಿಗಳು ಕಾಣಸಿಗುತ್ತವೆ.

ನಮ್ಮ ಬದುಕಿನ ಎಲ್ಲಾ ಕ್ಷೇತ್ರಗಳನ್ನೂ ಕಾರ್ಪೋರೇಟ್ ಕಂಪನಿಗಳು ಆವರಿಸುತ್ತಿರುವ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ಸಾಮಾಜಿಕ ಕ್ಷೋಭೆ ಹೆಚ್ಚಾಗುತ್ತದೆಂಬ ಸತ್ಯ ಕಾರ್ಪೋರೇಟ್ ಜಗತ್ತಿನ ದೊರೆಗಳಿಗೆ ಚೆನ್ನಾಗಿ ಗೊತ್ತಿರುವ ಸಂಗತಿ. ಹಾಗಾಗಿ ದೇಶವನ್ನು ಒಂದು ಪೋಲೀಸ್ ರಾಜ್ಯವನ್ನಾಗಿ ಮಾರ್ಪಡಿಸುವ ಒಳಸಂಚಿನ ಭಾಗವಾಗಿಯೇ ಈ ವಿಶಿಷ್ಟ ಯೋಜನೆ ಚಾಲ್ತಿಗೆ ಬಂದಿದೆಯೆಂಬ ಕೂಗು ದೇಶಾದ್ಯಂತ ಕೇಳಿಬರುತ್ತಿದೆ. ಜೊತೆಗೆ ವಿಶಾಲ ಮಾರುಕಟ್ಟೆ ಮತ್ತು ಸಂಪನ್ಮೂಲಗಳನ್ನು ಹೊಂದಿರುವ ಭಾರತದ ಜೊತೆಗೆ ವ್ಯೂಹಾತ್ಮಕ ಸಂಬಂಧ ಹೊಂದಿರುವ ಕಾರ್ಪೋರೇಟ್ ಸಾಮ್ರಾಟ ಅಮೆರಿಕ ಕಂಪನಿಗಳು ಈ ಯೋಜನೆಯಲ್ಲಿ ಸಕ್ರಿಯವಾಗಿರುವುದನ್ನು ನಾವು ಗಂಭೀರವಾಗಿ ಪರಿಗಣಿಸಲೇಬೇಕು.

ಈ ಅಂಶಗಳಲ್ಲದೆ ಈ ಬೃಹತ್ ಯೋಜನೆಯಲ್ಲಿ ಆರ್ಥಿಕ ಲಾಭದ ಲೆಕ್ಕಾಚಾರವೂ ಇದೆ. ವಿಪ್ರೋ, ಕೊಮ್ಯಾಟ್ ಟೆಕ್ನಾಲಜೀಸ್, ಅಲಂಕಿಟ್ ಮತ್ತು ವಿಗ್ರೋ ಸಾಫ್ಟ್‌ಟೆಕ್ ಮುಂತಾದ ಕಂಪನಿಗಳು 12 ಸಂಖ್ಯೆಯ ನಂಬರನ್ನು ನೀಡುವ ಅಧಿಕೃತ ಏಜೆಂಟ್‌ಗಳಾಗಿ ಗುತ್ತಿಗೆ ಗಿಟ್ಟಿಸಿ ಸಾವಿರಾರು ಕೋಟಿಗಳನ್ನು ಬಾಚುವ ಲೆಕ್ಕಾಚಾರದಲ್ಲಿವೆ. ಅವರೆಲ್ಲರ ನಾಯಕನಾಗಿ ನಿಲೇಕಣಿ ಆಸೀನನಾಗಿದ್ದಾನೆ.

ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಜನರಿಗೆ ಚೆಕ್ಕೆ ತೋರಿಸಿ, ಸುಣ್ಣ ನುಂಗಿಸುವ ಕಾರ್ಯದಲ್ಲಿ ಅಧಿಕಾರಸ್ಥರು ಮತ್ತು ಅವರ ಹಿಂದಿನ ಕಾರ್ಪೋರೇಟ್ ಲಾಬಿ ತುರುಸಿನಲ್ಲಿ ಕೆಲಸ ಮಾಡುತ್ತಿದೆ. ಅದಕ್ಕಾಗಿ "ಏನೇ ಬರಲಿ, ಆಧಾರ್ ಇರಲಿ", "ಆಧಾರ್-ಶ್ರೀಸಾಮಾನ್ಯನ ಅಧಿಕಾರ" ಎಂಬ

ಜನಾಕರ್ಷಕ ಘೋಷಣೆಗಳನ್ನು ಹರಿಯಬಿಡಲಾಗಿದೆ. ಯಾರದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ನಡೆಯುತ್ತಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಆಧಾರವಿಲ್ಲದ ತಂತ್ರಜ್ಞಾನ

ಏನೋ ಹೊಸ ತಂತ್ರಜ್ಞಾನವನ್ನು ಅಳವಡಿಸಿ, ಹೊಸದಾಗಿ ಅದೇನೋ ಕಡಿದುಬಿಡುತ್ತೇವೆಂದು ಹೇಳುತ್ತಿರುವುದೆಲ್ಲ ಕೇವಲ ಬೊಗಳೆ ಎಂಬುದು ಆದಷ್ಟು ಬೇಗ ಸಾಬೀತಾಗಲಿದೆ. ಯಾಕೆಂದರೆ ಇಂಥಾ ಯೋಜನೆ ಯಶಸ್ವಿಯಾಗಿರುವುದಕ್ಕೆ ಜಗತ್ತಿನಲ್ಲೆಲ್ಲೂ ಉದಾಹರಣೆಯೂ ಸಿಗುವುದಿಲ್ಲ. ಈ ತಂತ್ರಜ್ಞಾನದ ಫಲಿತಾಂಶಗಳೇನೆಂಬುದು ಇನ್ನೂ ನಿಗೂಢ; ಕೇವಲ ಊಹಾಪೋಹಗಳಷ್ಟನ್ನೇ ಆಧರಿಸಿ ಇಂಥದ್ದೊಂದು ಯೋಜನೆಗೆ ಜನರ ಹಣ ಹರಿದುಹೋಗುತ್ತಿದೆ.

ಸದರಿ ಯೋಜನೆಯಡಿ ಬೆರಳಚ್ಚು ಸಂಗ್ರಹದಲ್ಲಿ ಈಗಾಗಲೇ ಭಾರೀ ಪ್ರಮಾಣದ ದೋಷಗಳು ಕಂಡುಬಂದಿವೆಯೆಂದು ಬಯೋಮೆಟ್ರಿಕ್ಸ್ ಸ್ಟ್ಯಾಂಡಿಂಗ್ ಕಮಿಟಿ ಎಚ್ಚರಿಕೆ ನೀಡಿದೆ. ಕೇವಲ 15-20? ಕೆಲಸದಲ್ಲೇ ಇಷ್ಟೊಂದು ಗೊಂದಲಗಳಾದರೆ ಇನ್ನು 121 ಕೋಟಿ ಜನರ ದಾಖಲೆಗಳು ಒಟ್ಟಿಗೆ ಸೇರಿದರೆ ಇನ್ನಷ್ಟು ಕಲಸುಮೇಲೋಗರವಾಗುವುದರಲ್ಲಿ ಸಂಶಯವೇ ಇಲ್ಲ.

ಇನ್ನು ಕಲೆಹಾಕಲಾದ ಎಲ್ಲಾ ಮಾಹಿತಿಗಳು ಸುರಕ್ಷಿತವಾಗಿರುತ್ತವೆ ಎಂಬುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಸಮಾಜಘಾತುಕ ಶಕ್ತಿಗಳು ಮತ್ತು ಅಮೆರಿಕ ಚೀನಾದಂಥ ಪ್ರಬಲ ದೇಶಗಳು ಈ ಮಾಹಿತಿ ಆಗರಕ್ಕೆ ಕನ್ನ ಹಾಕುವ ಸಾಧ್ಯತೆ ಹೇರಳವಾಗಿದೆ.. ಈ ಯೋಜನೆಯ ತಾಂತ್ರಿಕ ನೆರವಿನ ಗುತ್ತಿಗೆ ಹಿಡಿದಿರುವ ಅಕ್ಸೆಂಚರ್ ಎಂಬ ಸಾಫ್ಟ್‌ವೇರ್ ಕಂಪನಿ ಅಮೆರಿಕಾದ್ದು. ಅಮೆರಿಕದ ಕುಖ್ಯಾತ ಸಿಐಎನ ಅಧಿಕಾರಿಗಳು ಅಕ್ಸೆಂಚರ್ ಕಂಪನಿಯ ಆಡಳಿತ ಮಂಡಳಿಯಲ್ಲಿದ್ದಾರೆ. ಎಲ್-1 ಐಡೆಂಟಿಟಿ ಸಲ್ಯೂಷನ್ಸ್ ಎಂಬ ಮತ್ತೊಂದು ಅಮೆರಿಕನ್ ಕಂಪನಿ ಆಧಾರ್‌ಗೆ ಬೇಕಾದ ತಂತ್ರಜ್ಞಾನವನ್ನು ಒದಗಿಸಲಿದೆಯಂತೆ. ಅಮೆರಿಕದ ಕಾನೂನಿನ ಪ್ರಕಾರವೇ ಸದರಿ ಕಂಪನಿಗಳ ಬಳಿಯಿರುವ ಎಲ್ಲಾ ಮಾಹಿತಿಗಳನ್ನು ವಶಪಡಿಸಿಕೊಳ್ಳುವ ಹಕ್ಕು ಆ ದೇಶಕ್ಕಿದೆ. ಹೀಗೆ ಇದು ಮುಂಬರುವ ದಿನಗಳಲ್ಲಿ ಭಾರತದ ಸಾರ್ವಭೌಮತೆಗೆ ದಕ್ಕೆ ತರುವ ದೊಡ್ಡ ಅಪಾಯ ಕಾದಿದೆ.

ಮತ್ತೊಂದು ರೀತಿಯ ಉದಾಹರಣೆ ನೋಡಿ. ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಆಧಾರ್ ಜೊತೆ ಲಿಂಕ್ ಮಾಡುವುದರಿಂದ ಸೈಬರ್ ಹ್ಯಾಕರ್‌ಗಳಿಗೆ ಅದು ಸುಲಭ ತುತ್ತಾಗುತ್ತದೆ. ಒಂದುವೇಳೆ ನಿಮ್ಮ ಅಕೌಂಟ್‌ನಲ್ಲಿ ಯಥೇಚ್ಛ ಹಣವಿದ್ದ ಪಕ್ಷದಲ್ಲಿ ಸಮಾಜಘಾತುಕ ಶಕ್ತಿಗಳು ಅದಕ್ಕೆ ಪಂಗನಾಮ ಎಳೆಯುವುದು ಗ್ಯಾರಂಟಿ. ಇನ್ನೊಂದು ವಿಷಯ ನೆನಪಿಡಿ. ಅವರು ನಮ್ಮ ದೇಶದವರೇ ಆಗಬೇಕೆಂದೇನಿಲ್ಲ; ಅಮೆರಿಕದವರೋ, ಚೀನಾದವರೋ, ಪಾಕಿಸ್ತಾನದವರೋ ಯಾರು ಬೇಕಾದರೂ ಆಗಿರಬಹುದು. ಚೀನಾ ಮತ್ತು ಅಮೆರಿಕದಂಥ ದೇಶಗಳ ಸೈಬರ್ ಹ್ಯಾಕರ್‌ಗಳು ಭಾರತದ ಪ್ರಧಾನಿ ಕಾರ್ಯಾಲಯದ ಕಂಪ್ಯೂಟರ್ ದಾಖಲೆಗಳನ್ನು ಕದ್ದಿರುವ ಉದಾಹರಣೆ ನಮ್ಮ ಕಣ್ಣ ಮುಂದೆಯೇ ಇದೆ.

ಪ್ರಧಾನಿ ಕಾರ್ಯಾಲಯಕ್ಕೇ ಈ ಗತಿಯಾದಾಗ ಇನ್ನು ಜನಸಾಮಾನ್ಯರ ಪ್ರಾಣ ಮತ್ತು ಆಸ್ತಿಪಾಸ್ತಿಗಳ ಸುರಕ್ಷತೆಗೆ ಯಾವ ಗ್ಯಾರಂಟಿ?

ಆಧಾರ್ ಅವಾಂತರಗಳು

ಭಾರೀ ತಂತ್ರಜ್ಞಾನ, ಯಾರಿಂದಲೂ ಬೇಧಿಸಲು ಸಾಧ್ಯವಿಲ್ಲ ಎಂದು ಬಡಾಯಿ ಕೊಚ್ಚುವ ನಿಲೇಕಣಿ ಯೋಜನೆಯ ನಿಜಬಣ್ಣ ತಿಳಿಯಲು ಈ ಕೆಳಗಿನ ಕೆಲವು ತಮಾಷೆ ಸಂಗತಿಗಳನ್ನು ಓದಿ. ಮೈಸೂರಿನ ಆಧಾರ್ ಕೇಂದ್ರದಲ್ಲಿ ನಂದನ್ ನಿಲೇಕಣಿಯವರ ಫೋಟೋ ಅಂಟಿಸಿ ಒಂದು ಆಧಾರ್ ಕಾರ್ಡ್ ಪಡೆದುಕೊಂಡ ಒಬ್ಬ ಪತ್ರಕರ್ತ ಈ ಯೋಜನೆಯ ಪೊಳ್ಳುತನವನ್ನು ಬಯಲಿಗೆಳೆದಿದ್ದ. ಹಾಗೇ ಒಬ್ಬನೇ ವ್ಯಕ್ತಿ ಎರಡು ಭಿನ್ನ ಹೆಸರು, ವಿಳಾಸ ನೀಡಿ ಎರಡು ಕಾರ್ಡ್ ಪಡೆದುಕೊಂಡು ನಿಲೇಕಣಿಯ ಮುಖಕ್ಕೆ ಮಂಗಳಾರತಿ ಎತ್ತಿದ್ದ. ಆಧಾರ್ ವಿತರಣಾ ಏಜೆಂಟರ ಕೈ ಬಿಸಿ ಮಾಡಿದರೆ, ಯಾರಿಗೆ ಎಂಥಾ ಕಾರ್ಡ್ ಬೇಕಾದರೂ ಮಾಡಿಸಬಹುದೆಂದು ಟಿವಿ9ನವರು ಕುಟುಕು ಕಾರ್ಯಾಚರಣೆಯಲ್ಲಿ ಬಯಲಿಗೆಳೆದಿದ್ದರು.

ಮತ್ತೊಂದು ತಮಾಷೆ ನೋಡಿ. ಆಧಾರ್ ಕಾರ್ಡ್ ನಂ.4991 1866 5246, ಈ ಕಾರ್ಡ್ ಹೋಲ್ಡರ್‌ನ ಹೆಸರು - ಕೊತ್ತಂಬರಿ, ತಂದೆ - ಪಲಾವ್, ಊರು - ಮಾವಿನಕಾಯಿ (ಮಾವಿನಕಾಯಿ), ಇಂಥಾ ವಿಳಾಸವಿರುವ ಆಧಾರ್ ಕಾರ್ಡು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಜಂಬಲದಿನ್ನಿ ಎಂಬ ಕೇಂದ್ರದಿಂದ ಮಂಜೂರಾಗಿ ಭಾರೀ ಸುದ್ದಿ ಮಾಡಿದೆ. ಇದಕ್ಕೆ ಅಂಟಿಸಿರುವ ಫೋಟೋ ಕೂಡ ಒಂದು ಮೊಬೈಲ್‌ನ ಚಿತ್ರ!! ಇದು ಹೈಟೆಕ್ ನಾಲಜಿಯೋ? ಕಟ್ ನಾಲೇಜೋ ನೀವೇ ತೀರ್ಮಾನಿಸಿ.

ಮರಣದಂಡನೆ: ನ್ಯಾಯಾಂಗದ ಪಾತ್ರ

ಜೀವಾವಧಿ ಶಿಕ್ಷೆಗೊಳಗಾಗಿರುವ ಕೈದಿಯೊಬ್ಬ ಮರಣದಂಡನೆ ಕುರಿತಂತೆ ಬರೆದಿರುವ ಲೇಖನ ಇದು. ವೀರಪ್ಪನ್‌ನ ನಾಲ್ವರು ಸಹಚರರಿಗೆ ನೇಣು ಶಿಕ್ಷೆ ಜಾರಿ ಮಾಡುವ ಸಂದರ್ಭದಲ್ಲಿ ಈಗ ಪುನಃ 'ಮರಣದಂಡನೆ ಶಿಕ್ಷೆ' ಸರಿಯೋ-ತಪ್ಪೋ, ನಾಗರಿಕವೋ ಅಲ್ಲವೋ ಎಂಬ ವಾಗ್ವಾದವೂ ನಡೆಯುತ್ತಿದೆ. ಆ ಚರ್ಚೆಗೆ ಪೂರಕವಾಗಿ ಈ ಲೇಖನವನ್ನು ಪ್ರಕಟಿಸಲಾಗಿದೆ.

ಸ್ವಾತಂತ್ರ್ಯ ಬಂದ ದಿನಗಳಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗಗಳು ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ದೇಶದ ಜನರ ಮನಸ್ಸಿನಲ್ಲಿದ್ದ ನಂಬಿಕೆ, ವಿಶ್ವಾಸಗಳು ಈ ದಿಕ್ಕಿನಲ್ಲಿ ಕಡಿಮೆಯಾಗತೊಡಗಿತು. ಆದರೆ ನ್ಯಾಯಾಂಗ ಮಾತ್ರ ಪವಿತ್ರತೆಯನ್ನು ಉಳಿಸಿಕೊಳ್ಳುವಲ್ಲಿ ಎಡವಲಿಲ್ಲ, ನ್ಯಾಯಾಲಯಗಳ ಬಗ್ಗೆ, ನ್ಯಾಯಾಧೀಶರ ಬಗ್ಗೆ... ಸಮುದಾಯದಲ್ಲಿ ಭಯಮಿಶ್ರಿತ ಗೌರವಾದರಗಳು ಮನೆಮಾಡಿದ್ದವು. ಎಲ್ಲೂ ನಮಗೆ ನ್ಯಾಯ ಸಿಗದಿದ್ದರೆ, ಕೋರ್ಟಿನಲ್ಲಿ ಖಂಡಿತ ನಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆಯನ್ನು ಇದುವರೆಗೆ ಇಟ್ಟುಕೊಂಡಿದ್ದು ಸುಳ್ಳಲ್ಲ.

ಇಂತಹ ಸಂದಿಗ್ಧ ಸಮಯದಲ್ಲಿ ನಮ್ಮ ರಾಷ್ಟ್ರಪತಿಗಳು ಸಾಲುಸಾಲಾಗಿ ಕ್ಷಮಾದಾನ ಅರ್ಜಿಗಳನ್ನು ತಿರಸ್ಕರಿಸುತ್ತಾ ಬಂದಿರುವುದು, ಖಂಡಿತವಾಗಿಯೂ ಮಾನವೀಯತೆಯಲ್ಲಿ ನಂಬಿಕೆ ಇಟ್ಟಿದ್ದ ಪ್ರಜ್ಞಾವಂತ ಸಮೂಹವನ್ನೇ ಬೆಚ್ಚಿ ಬೀಳುವಂತೆ ಮಾಡಿದೆ. ಏಕೆಂದರೆ ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಕಾಲಮಿತಿಯ ಅರಿವು ಇಲ್ಲವಾಗಿದೆ. ಒಂದು ನಿಗದಿತ ಅವಧಿಯಲ್ಲಿ ಯಾವುದನ್ನು ಇತ್ಯರ್ಥಗೊಳಿಸುವುದಿಲ್ಲ, ಕೊಟ್ಟ ಶಿಕ್ಷೆಯ ಅವಧಿಗೆ ತಕ್ಕಂತೆ ಅದನ್ನು ಜಾರಿಗೊಳಿಸುವುದೂ ಇಲ್ಲ, ನ್ಯಾಯದಾನದ ಪ್ರಕ್ರಿಯೆಯಲ್ಲಿ ವಿಳಂಬವಾದಷ್ಟು, ನ್ಯಾಯವನ್ನು ನಿರಾಕರಿಸಿದಂತೆ ಎಂಬುದು ನಿಜದ ರೂಪ ಪಡೆದಂತಾಗಿದೆ.

ಅದರಲ್ಲೂ ಕ್ಷಮಾದಾನದ ಅರ್ಜಿಗಳಂತೂ ಬೇಗನೆ ಇತ್ಯರ್ಥವಾಗುತ್ತಿಲ್ಲ, ಏತಕ್ಕಾಗಿ ಇಷ್ಟೊಂದು ವರ್ಷಗಳನ್ನು ತೆಗೆದುಕೊಳ್ಳುತ್ತಿವೆ. ಯಾವುದಕ್ಕೂ ಒಂದು ಕಾಲಮಿತಿ ಇರಬೇಕು. ಅಷ್ಟರೊಳಗೆ ಬಂದರೆ, ಅದನ್ನು ಎದುರು ನೋಡುತ್ತಿರುವವರಿಗೆ ಏನೋ ಒಂದು ಹಂತಕ್ಕೆ ಬಂದು ಮುಟ್ಟಿತು ಎಂದುಕೊಳ್ಳುತ್ತಾರೆ. ಇಲ್ಲದಿದ್ದರೆ ಬರೀ ಕಾಯುವುದರಲ್ಲಿ ಇರುವ ನರಕಯಾತನೆಯು ಬಹುಶಃ ಯಾರಿಗೂ ಅರ್ಥವಾಗುವುದಿಲ್ಲ, ಏಕೆಂದರೆ ಜೈಲಿನಲ್ಲಿರುವವರ ನೋವು ಸಂಕಟಗಳು ಹೊರಪ್ರಪಂಚಕ್ಕೆ ಹೇಗೆ ತಾನೆ ಮುಟ್ಟಲು ಸಾಧ್ಯ

ಕಾರಾಗೃಹದ ಕಗ್ಗತ್ತಲು ಜಗತ್ತಿಗೆ ಸಂಬಂಧಿಸಿದಂತೆ ನ್ಯಾಯಾಧೀಶರಾದ ಆನಂದ ನಾರಾಯಣ ಮುಲ್ಲಾ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸುತ್ತಾರೆ. ಅದರ ಭಾವಾನುವಾದ ಇಲ್ಲಿದೆ:

"ಗಗನಕ್ಕೆ ಮುಖ ಮಾಡಿರುವ
ಬೃಹತ್ ಎತ್ತರದ ಗೋಡೆಗಳ ಒಳಗೆ
ಬೆಳಕು ತೂರಲಾಗದ ಕಬ್ಬಿಣದ
ಪರದೆಯನ್ನು ಇಳಿಬಿಟ್ಟಂತೆ
ಬಾಗಿಲುಗಳ ಒಳಗೆ
ಒಂದು ದುರದೃಷ್ಟವಂತವಾದ
ಮನುಕುಲವು ತೆವಳುತಿದೆ
ಇಲ್ಲಿರುವ ಯಾವ ಕೈದಿಗಳಿಗೂ
ಅವರದೇ ಆದ ಹೆಸರುಗಳಿಲ್ಲ
ಅವರುಗಳೆಲ್ಲ ಬಲಿಯ ಸಂಖ್ಯೆಗಳ
ಗುರುತಿಸುವಿಕೆಯಲ್ಲಿ ಹೊರಳಾಡುತ್ತಿದ್ದಾರೆ"
"ಅವರುಗಳ ಕಡು-ದುಃಖದ ಯುಗವು
ಯಾವಾಗ ಮುಗಿಯುತ್ತದೆ?
ಸರಳುಗಳ ಬಾಗಿಲಿಗೆ ಹಾಕಿರುವ
ನೋಡಿದರೆ ಎದೆ ಝಲ್ಲೆನಿಸುವ
ಆ ಎರಡು ದಪ್ಪನೆಯ ಬೀಗಗಳು
ಯಾವಾಗ ಮುರಿಯುತ್ತವೆ?
ಪ್ರತಿಯೊಂದು ಉಸಿರು ಭರವಸೆಯೊಂದಿಗೆ
ಪ್ರಾರ್ಥಿಸುತ್ತದೆ- ಕಳೆದುಹೋಗಿರುವ
ಅವರೆಲ್ಲರ ಆತ್ಮಗಳು ತಮಗಾಗಿರುವ
ಚಿತ್ರಹಿಂಸೆಯನ್ನು ಹೇಳಿಕೊಳ್ಳಲಾರವು.
ಮುಗಿಯಲಾರದ ಕಂಬಿಯ ಹಿಂದಿನ
ದಿನಗಳನ್ನು, ಕ್ಷಣಕ್ಷಣಗಳನ್ನು ಲೆಕ್ಕ ಹಾಕುತ್ತಿದ್ದಾರೆ.
ಒಂದೊಂದನ್ನು ಕೂಡಿ, ಕಳೆದು, ಗುಣಿಸಿ, ಭಾಗಿಸುತ್ತಿದ್ದಾರೆ...

'ಮರಣದಂಡನೆ' ಶಿಕ್ಷೆಯನ್ನು- ನ್ಯಾಯಾಲಯ ಘೋಷಿಸಿದ ಕೂಡಲೇ ಜಾರಿ ಮಾಡುವುದಿಲ್ಲ, ಏಕೆಂದರೆ ಭಾರತದಲ್ಲಿರುವ ನ್ಯಾಯಾಂಗ ವ್ಯವಸ್ಥೆಯು ತನ್ನದೇ ಆದ ಪ್ರಕ್ರಿಯೆಯ ಮೂಲಕ ನ್ಯಾಯದಾನ ಮಾಡುತ್ತದೆ.

ಪ್ರಸ್ತುತ ಬಹುಚರ್ಚೆಗೆ ಒಳಗಾಗುತ್ತಿರುವ ವೀರಪ್ಪನ್ ಸಹಚರರಾದ ನಾಲ್ಕು ಜನರಿಗೆ- ಕೆಳಗಿನ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಇದನ್ನು ವಿರೋಧಿಸಿ, ತಮಿಳುನಾಡಿನ ಕೆಲವು ಸಂಘಟನೆಗಳು, ಕೇಸನ್ನು ಸೀದಾ ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಿ ಜೀವಾವಧಿ ಶಿಕ್ಷೆಯನ್ನು ರದ್ದು ಮಾಡಬೇಕೆಂದು ಕೋರಿತು. 1993 ರ ಡಿಸೆಂಬರ್ 9 ರಂದು ನಡೆದ ಘಟನೆಗೆ 2004 ರಲ್ಲಿ ಸುಪ್ರೀಂಕೋರ್ಟ್ ಈ ನಾಲ್ವರಿಗೆ ಮರಣದಂಡನೆ ವಿಧಿಸಿತು. ಅಲ್ಲಿಯವರೆಗೆ ಅವರೆಲ್ಲಾ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು. ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿ ತಮಗೆ ವ್ಯತಿರಿಕ್ತವಾಗಿ ತೀರ್ಪು ಬಂದಿದ್ದರಿಂದ, ಕ್ಷಮಾದಾನದ ಅರ್ಜಿಯನ್ನು ರಾಷ್ಟ್ರಪತಿಗೆ ಕಳಿಸಿದರು. 13/02/2013 ರಂದು ರಾಷ್ಟ್ರಪತಿಗಳು ಅರ್ಜಿಗಳನ್ನು ತಿರಸ್ಕರಿಸಿದರು.

ಒಬ್ಬ ವ್ಯಕ್ತಿ ಜೀವಾವಧಿ ಶಿಕ್ಷೆಗೆ ಗುರಿಯಾದರೆ 14 ವರ್ಷದ ಸೆರೆವಾಸ ಎಂಬ ಭಾವನೆ ಇತ್ತು, ಇದೇನೂ ಸಾಧಾರಣ ವಿಷಯವಲ್ಲ, ಇಷ್ಟು ದೀರ್ಘಕಾಲ ಸೆರೆಮನೆಯಲ್ಲಿದ್ದು ನಂತರ ಸಾಮಾನ್ಯರಂತೆ ಜೀವನ ನಡೆಸುವುದು, ಸುಲಭದ ಮಾತಲ್ಲ,

'ಒಳ್ಳೆಯತನ' ದಿಂದ ಇರುವವರು ಜೈಲಿನಾಚೆ ಬೆರಳೆಣಿಕೆಯಷ್ಟು ಸ್ನೇಹಿತರನ್ನು ಹೊಂದಿರುತ್ತಾರೆ. 'ಕೆಟ್ಟತನ' ದಿಂದ ಇರುವವರು ಅಪಾರ ಮಟ್ಟದ ಗೆಳೆಯರನ್ನು ಪಡೆದಿರುತ್ತಾರೆ.

ರಾಜ್ಯದ ಎಲ್ಲಾ ಅಧಿಕಾರ ಕೇಂದ್ರಗಳು... ಆರೋಪಿಗೆ, ಅಪರಾಧಿಗೆ, ಕೈದಿಗೆ ವಿರುದ್ಧವಾಗಿರುತ್ತದೆ. ಸರಕಾರದಿಂದ ಯಾವುದೇ ರೀತಿಯ ಸಹಾಯ ಸಿಗುವುದಿಲ್ಲ, ನೋವಿನ ದನಿಯನ್ನು ಅಡಗಿಸಲಾಗುತ್ತದೆ. ಆತ್ಮನಾದದ ಆಕ್ರಂದನವು ಗೋಡೆಯಾಚೆಗೆ ಕೇಳಿಸುವುದಿಲ್ಲ,

ಗಲ್ಲು ಶಿಕ್ಷೆಯ ಬಂಧಿಗಳಿಗೂ, ಅದು ಜಾರಿಯಾಗುವ ಸಮಯಕ್ಕೂ, ತುಂಬಾ ವರ್ಷಗಳ ಅಂತರವಿರುತ್ತದೆ. ಅವರ ಮನವಿಗಳು, ಕ್ಷಮಾದಾನದ ಅರ್ಜಿಗಳು ಇತ್ಯರ್ಥವಾಗು ವವರೆಗೂ ತುಂಬಾ ವರ್ಷಗಳನ್ನು ನುಂಗಿ ಹಾಕುತ್ತದೆ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ "ಏಕಾಂತ ಸೆಲ್" ನ ಒಳಗಡೆ, ಒಬ್ಬಂಟಿಯಾಗಿಯೇ ಕಾಲ ಕಳೆಯಬೇಕಾಗುತ್ತದೆ. ಜೈಲಿನಲ್ಲಿ ಇವರುಗಳು ಯಾವ ಕೆಲಸವನ್ನು ಮಾಡುವಂತಿಲ್ಲ, ಜಡವಾದಂತಿರಬೇಕು. ದೇಹವೆಲ್ಲ ಮರಗಟ್ಟಿ ಹೋಗಿರುತ್ತದೆ. ಮಲಗಿದಲ್ಲಿಯೇ ಮಲಗಬೇಕು, ಜಾಗದ ಬದಲಾವಣೆಯಿಲ್ಲ.

'10X12' ರ ಕೋಣೆಯೇ ಆತನ ಜಗತ್ತು, ಯಾರೊಡನೆಯೂ ಮಾತನಾಡುವಂತಿಲ್ಲ. ಅಲ್ಲಿಯೇ ಶೌಚಾಲಯ, ಕುಡಿಯುವ ನೀರಿನಿಂದ ಹಿಡಿದು, ಕುಡಿಯುವ ಟೀ, ಕಾಫಿ, ನೀರು, ತಿಂಡಿ-ಊಟ... ಎಲ್ಲವೂ ಕುಳಿತಲ್ಲಿಗೆ ಸರಬರಾಜಾಗುತ್ತದೆ. ಎದ್ದು ಓಡಾಡುವಂತಿಲ್ಲ, ತಾನಿರುವ ಬ್ಯಾರಕ್... ಅದೇ ಅವನ ಲೋಕ. ನೋಡಿದ್ದೇ ನೋಟ, ಕಂಡಿರುವ ಮುಖಗಳೇ ಮತ್ತೆ ಮತ್ತೆ ಎದುರಾಗುತ್ತವೆ.


ತನ್ನೆಲ್ಲ ಭಾವನೆಗಳನ್ನು ಹೇಳಿಕೊಳ್ಳಲಾಗದೇ ಸದಾ ಚಡಪಡಿಸುತ್ತಿರಬೇಕು. ಬೋನಿನಲ್ಲಿರುವ ಪ್ರಾಣಿಯಂತೆ ಶಥ-ಪಥ ವೃತ್ತದ ಆಕಾರದೊಳಗೆ ಸುತ್ತುತ್ತಿರಬೇಕು. ಜಗತ್ತಿನ ವಿದ್ಯಮಾನಗಳೊಂದೂ ತಿಳಿಯುವುದಿಲ್ಲ. ಓದು ಅಭ್ಯಾಸವಿದ್ದರೆ... ಒಂದಷ್ಟು ಪುಸ್ತಕಗಳನ್ನು ತಂದುಕೊಡುತ್ತಾರೆ. ಸುದ್ದಿ ಪತ್ರಿಕೆಗಳನ್ನು ಒತ್ತಾಯ ಮಾಡಿ ಕೇಳಬೇಕು. ತನ್ನ ಮುಂದಿರುವ ಕಗ್ಗತ್ತಲನ್ನೇ ನೋಡುತ್ತಾ ನೋಡುತ್ತಾ, ಕಣ್ಣುಗಳು ಹೊಸದನ್ನು ಗ್ರಹಿಸುವ ಶಕ್ತಿಯನ್ನು ಕಳೆದುಕೊಂಡಿರುತ್ತವೆ. ಮನಸ್ಸುಗಳೂ ಕೂಡ ಪೂರ್ಣಪ್ರಮಾಣದಲ್ಲಿ ಸ್ಪಂದಿಸುವ ಗುಣವನ್ನು ಪರಿಭಾವಿಸುವ ಸ್ಥಿತಿಯಲ್ಲಿ ಇರುವುದಿಲ್ಲ, ನಾಳೆ ಬರಲಿರುವ ಸಾವನ್ನು ಎದುರು ನೋಡುತ್ತಾ, ಸಾವು ಹೇಗಿರುತ್ತದೆ ಎನ್ನುವ ಭಯದಲ್ಲಿ ಮನುಷ್ಯ ಅರ್ಧ ಸತ್ತುಹೋಗಿರುತ್ತಾನೆ.

ಮರಣದಂಡನೆಗೆ ಗುರಿಯಾದವರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುತ್ತಾ ಹೋದರೆ, ಒಂದು ಭಯಾನಕ ಜಗತ್ತು ತೆರೆದುಕೊಳ್ಳುತ್ತದೆ. ಗಲ್ಲುಶಿಕ್ಷೆಗೆ ಗುರಿಯಾದವರು ಒಂದೊಂದು ಸಾರಿ ಅಪಾಯಕಾರಿ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಮಾನಸಿಕ ಖಿನ್ನತೆಗೆ ಒಳಗಾಗಿರುತ್ತಾರೆ. ಮನುಷ್ಯ ಮೂಲಭೂತವಾಗಿ ಸಂಘಜೀವಿ. ಅಂತಹ ಯೋಚನಾಶಕ್ತಿಯುಳ್ಳ ಮಾನವನನ್ನು- ಕೀಳು ಪ್ರಾಣಿಗಳಿಗಿಂತ ಕಡೆಯಾಗಿ ನೋಡಿಕೊಳ್ಳುವ ವಿಧಾನವಿದೆಯಲ್ಲ; ಅದು ಭೂಮಿ ಮೇಲಿನ ನರಕ.

ನಮ್ಮ ನೆಲದ ಸಾರ್ವಭೌಮ ನ್ಯಾಯದ ಪುಸ್ತಕವಾದ 'ಭಾರತೀಯ ಸಂವಿಧಾನ' ದಲ್ಲಿ ಮರಣದಂಡನೆಗೆ ಅವಕಾಶವಿಲ್ಲ, ಗಲ್ಲುಶಿಕ್ಷೆಯ ಅನುಕರಣೆಯು ಬಹುಶಃ 'ಭಾರತೀಯ ದಂಡಸಂಹಿತೆ' ಅಥವಾ 'ಅಪರಾಧ ದಂಡಸಂಹಿತೆ' - ಮತ್ತು ಬ್ರಿಟಿಷ್ ಪದ್ಧತಿಯ ನಕಲಾಗಿದೆ. ಭಾರತೀಯ ಮೂಲದ ನ್ಯಾಯಶಾಸ್ತ್ರದಲ್ಲಿ, ಧರ್ಮಗ್ರಂಥಗಳಲ್ಲಿ ಕಣ್ಣಿಗೆ ಕಣ್ಣು, ಜೀವಕ್ಕೆ ಜೀವ ಎಂಬಂತಹ ಪ್ರತೀಕಾರಕ್ಕೆ ಆಸ್ಪದವಿಲ್ಲ,

ಮನುಷ್ಯನ ಜೀವ ತೆಗೆಯುವುದು, ಮಾನವತೆಗೆ ವಿರುದ್ಧವಾದುದು, ಮನುಷ್ಯತ್ವಕ್ಕೆ ಮಾರಕವಾದುದು. ಪ್ರಪಂಚದಲ್ಲಿನ ಬಹುಪಾಲು ರಾಷ್ಟ್ರಗಳು ಮರಣದಂಡನೆಯನ್ನು ನಿಷೇಧಿಸಿವೆ. ನಮ್ಮ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳಾದ ಪರಿಚ್ಛೇದ (14,19,21) ರ ಪ್ರಕಾರ ಈ ಶಿಕ್ಷೆಯನ್ನು ಅನುಮೋದಿಸುವುದಿಲ್ಲ,

ಸುಮಾರು 20 ವರ್ಷಗಳ ಸೆರೆವಾಸವನ್ನು ಅವರುಗಳು ಈಗಾಗಲೇ ಅನುಭವಿಸಿದ್ದಾರೆ. ನಾಲ್ಕು ಜನರಿಗೂ ಗಲ್ಲು ಶಿಕ್ಷೆ ಖಚಿತವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಮರಣದಂಡನೆಯ ರದ್ದತಿಯ ಚರ್ಚೆಗೆ ಮತ್ತೆ ಚಾಲನೆ ದೊರೆತಂತಾಗಿದೆ. ಇಂತಹ ಶಿಕ್ಷೆಯು 21ನೇ ಶತಮಾನದಲ್ಲಿ ಅನಿವಾರ್ಯವೇ? ಎಂಬುವರ ಚಿಂತನೆಗೆ ಕಾರಣವಾಗುತ್ತಿದೆ. ವೀರಪ್ಪನ್ ಸಹಚರರಾದ ನಾಲ್ವರಿಗೆ- ಕ್ಷಮಾದಾನವಿಲ್ಲ ಎನ್ನುವ ಸಂದೇಶ ಈಗಾಗಲೇ ಎಲ್ಲಾ ಕಡೆಗೂ ರವಾನೆಯಾಗಿದೆ. ಅವರೆಲ್ಲರೂ ಈಗ ನಮ್ಮ ರಾಜ್ಯದ ಬೆಳಗಾವಿಯ ಹಿಂಡಲಗ ಜೈಲಿನಲ್ಲಿದ್ದಾರೆ. ಈ ಕಾರಾಗೃಹದಲ್ಲಿ ನೇಣಿಗೇರಿಸಲು ಅಲ್ಲಿನ ಅಧಿಕಾರಿಗಳೆಲ್ಲರೂ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ವಧಾ-ಸ್ಥಾನವನ್ನು ಸ್ವಚ್ಛಗೊಳಿಸುತ್ತಿದ್ದಾರೆ. ಆದರೆ ಗಲ್ಲುಶಿಕ್ಷೆಯನ್ನು ನೆರವೇರಿಸಲು ಸುಪ್ರೀಂಕೋರ್ಟಿನಿಂದ ಕೆಲವು ತಿಂಗಳ ತಡೆಯಾಜ್ಞೆ ಸಿಕ್ಕಿದೆ. ಅಲ್ಲಿರುವ ಮುಖ್ಯ ಅಧಿಕಾರಿಗಳು ಯಾರ ಕೈಗೂ ಸಿಗುತ್ತಿಲ್ಲ, ಪತ್ರಕರ್ತರ, ದೂರದರ್ಶನ ಮಾಧ್ಯಮ ಮಂದಿಯಿಂದ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ಸಂಬಂಧಪಟ್ಟ ಕೈದಿಗಳನ್ನು ಭೇಟಿ



ಮಾಡಲು ಯಾರಿಗೂ ಅವಕಾಶ ನೀಡುತ್ತಿಲ್ಲ ಎನ್ನುವಂತಹ ವರದಿಗಳು 15/02/2013 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಏನಿದರ ಅರ್ಥ? ಒಂದು ರೀತಿಯ ನಿಗೂಢ ಕಾರ್ಯಾಚರಣೆಯು ಸದ್ದಿಲ್ಲದೆ ಜರುಗಿಹೋಗುತ್ತಿದೆಯಲ್ಲ, ಯಾವ ಮಾನವ ಹಕ್ಕುಗಳ ಆಯೋಗವು ಇದರ ವಿರುದ್ಧ ದನಿ ಎತ್ತುತ್ತಿಲ್ಲವೆಂಬ ಕೊರಗು ಹಗಲು-ರಾತ್ರಿ ಕಾಡುತ್ತಿದೆ. ನಾವಿರುವಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸಾರ್ವಜನಿಕ ವಿಷಯವನ್ನು ಕದ್ದು ಮುಚ್ಚಿ ಮಾಡುವಂತಿಲ್ಲ. ನಮ್ಮ ಸರ್ಕಾರದ ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕಾರ್ಯವೈಖರಿಯು ಜನರಿಗೆಲ್ಲ ಗೊತ್ತಾಗಬೇಕು. ಏಕೆಂದರೆ ಇದು ಜನರಿಂದ, ಜನರಿಗಾಗಿ, ಜನರಿಗೋಸ್ಕರ ರಚನೆಯಾಗಿರುವ ಅಂಗಸಂಸ್ಥೆಗಳು. ಅಂದಮೇಲೆ ಇದನ್ನು ಗುಟ್ಟಾಗಿಟ್ಟು ರಹಸ್ಯ ಕಾರ್ಯಾಚರಣೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಅದು ಸಮರ್ಥನೀಯವೂ ಅಲ್ಲ.

ವೀರಪ್ಪನ್ ಸಹಚರರಾದ ನಾಲ್ವರ ಪೈಕಿ ಮೀಸೆ ಮಾದಯ್ಯನ ಅಪರಾಧ ಹೀಗಿದೆ.

ಸಹಾಯ ಕೇಳಿ ಬಂದವರಿಗೆ ಮಾನವೀಯತೆ ನೆಲೆಗಟ್ಟಿನಲ್ಲಿ ಸಹಾಯ ಮಾಡುವುದು ಮನುಷ್ಯ ಧರ್ಮವಲ್ಲವೇ? ಅದರಂತೆ ವೀರಪ್ಪನ್ ತನ್ನ ಹೆಂಡತಿ ಮುತ್ತುಲಕ್ಷ್ಮಿಯನ್ನು - ಕರೆತಂದು "ನೋಡಿ... ಇವಳು ನನ್ನ ಹೆಂಡತಿ, ತುಂಬು ಗರ್ಭಿಣಿ... ಹೆರಿಗೆಯಾಗುವವರೆಗೆ ನಿಮ್ಮಲ್ಲಿರಿಸಿಕೊಳ್ಳಿ" ಎಂದು ಕೇಳಿಕೊಂಡಾಗ, ಎಂತಹವರ ಕಲ್ಲು ಹೃದಯವೂ ಕರಗಿ ನೀರಾಗುತ್ತವೆ. ಇಲ್ಲೂ ಕೂಡ ಆಗಿದ್ದು ಅದೇ. ಮುತ್ತುಲಕ್ಷ್ಮಿಯನ್ನು ಹೆರಿಗೆ ಮಾಡಿಸಿ, ಬಾಣಂತಿತನವನ್ನು ಮಾಡಿ. ತಾಯಿ ಮತ್ತು ಮಗುವನ್ನು ಹಿಂತಿರುಗಿ ಕಳುಹಿಸಿದ್ದು ಮಾದಯ್ಯನಲ್ಲಿದ್ದ ಒಂದು ಮಾನವೀಯ ಗುಣದಿಂದಾಗಿ.

ಅಂದರೆ ಈ ಎಲ್ಲಾ ವಿಷಯಗಳನ್ನೂ ಪೊಲೀಸರಿಗೆ ಮೊದಲೇ ತಿಳಿಸಬೇಕಿತ್ತು ಎಂಬುದು ಪೊಲೀಸರ ವಾದ. ಅದಕ್ಕಾಗಿಯೇ ಆತನ ಮೇಲೆ ವೀರಪ್ಪನ್ ಸಹಚರ ಎಂದು ಹಣೆಪಟ್ಟಿ ಅಂಟಿಸಿ 'ಟಾಡಾ' ಕಾಯ್ದೆಯ ಅಡಿಯಲ್ಲಿ ಬಂಧಿಸಿದರು. ಆದರೆ ಆಗ ಮುತ್ತುಲಕ್ಷ್ಮಿ ಅಪರಾಧಿ ಎನಿಸಿಕೊಂಡಿರಲಿಲ್ಲ, ಈ 'ಟಾಡಾ' ಕಾನೂನನ್ನು ಅಪರೂಪದ ಪ್ರಕರಣಗಳಲ್ಲಿ ಮಾತ್ರ ಬಳಸಬೇಕೆಂದೂ, ಸುಖಾಸುಮ್ಮನೆ ಕಂಡಕಂಡವರ ಮೇಲೆಲ್ಲಾ ಇದನ್ನು ಪ್ರಯೋಗಿಸಕೂಡದು... ಎಂದು ಕಾಯ್ದೆ ರೂಪಿಸಿದವರ ಆಶಯವಾಗಿತ್ತು, ಆದರೆ ಅದರ ಬಿಸಿ ತಟ್ಟಿದ್ದು ಮಾತ್ರ ಪೊಲೀಸರ ಕೆಂಗಣ್ಣಿಗೆ ಗುರಿಯಾದವರಿಗೆ ಮಾತ್ರ ಎಂಬುದು ವಿಪರ್ಯಾಸವಾಗಿದೆ. ಪ್ರಸ್ತುತ ಈ ನಾಲ್ವರನ್ನು 'ಟಾಡಾ' ನಿಯಮದ ಅಡಿಯಲ್ಲಿ ಬಂಧಿಸಲಾಯಿತು.

ಪೊಲೀಸ್ ಇಲಾಖೆಗೆ ಸೇರಿದ ಉನ್ನತ ಅಧಿಕಾರಿಗಳು ತಮಗೆ ಆಗದವರ ಮೇಲೆಲ್ಲಾ ಕೇಸು ಹಾಕತೊಡಗಿದರು. ಒಬ್ಬ ವ್ಯಕ್ತಿಯನ್ನು ಮಟ್ಟಹಾಕುವುದಕ್ಕಾಗಿ ಕಾಯ್ದೆಯನ್ನು ಬಳಸಿಕೊಂಡರು. ನಿರಪರಾಧಿಗಳನ್ನು ಹೆದರಿಸುವುದಕ್ಕಾಗಿ ನಾಗರಿಕರನ್ನು ಅಂಜಿಸುವುದಕ್ಕಾಗಿ ಇದನ್ನು ಅಸ್ತ್ರವನ್ನಾಗಿ ಮಾಡಿಕೊಂಡುಬಿಟ್ಟರು.

ಕಾನೂನಿನ ದುರುಪಯೋಗ ಎಷ್ಟರಮಟ್ಟಿಗೆ ಆಯಿತೆಂದರೆ ಇದರಿಂದ ಆಗುತ್ತಿದ್ದ ಅನಾಹುತಗಳ ಬಗ್ಗೆ ದಿನಾ ಪತ್ರಿಕೆಗಳಲ್ಲಿ ಸುದ್ದಿ ಬರತೊಡಗಿದವು. ಇದನ್ನು ರೂಪಿಸಿದವರೇ ಬೆಚ್ಚಿಬಿದ್ದರು. ಇದರ ಸಾಧಕ-ಬಾಧಕಗಳ ಬಗ್ಗೆ ಒಂದು ದೊಡ್ಡ ಚರ್ಚೆಯೇ ಸಂಸತ್ತಿನಲ್ಲಿ ನಡೆದುಹೋಯಿತು. ಗುಬ್ಬಿಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ; ಪರಿಣಾಮಗಳು, ಫಲಿತಾಂಶಗಳು ಅನಾವರಣವಾಗತೊಡಗಿದವು. ಇದನ್ನು ತಡೆಗಟ್ಟಲೇಬೇಕೆಂಬ ಕೂಗು ದೇಶದ ಉದ್ದಗಲಕ್ಕೂ ಹಬ್ಬಿ ಜನರು ಬೀದಿಗಿಳಿದು ಹೋರಾಟ ಮಾಡತೊಡಗಿದರು.

ಅಂತಿಮವಾಗಿ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಭಾರಿ ವಿರೋಧ ಕಂಡು ಬಂದದ್ದರಿಂದ 'ಟಾಡಾ' ಮಸೂದೆಯನ್ನು ಹಿಂದಕ್ಕೆ ಪಡೆಯಲಾಯಿತು.

ಇಂತಹ ಭೀಕರ 'ಟಾಡಾ' ಮಸೂದೆಯ ವಜ್ರಮುಷ್ಠಿಯಲ್ಲಿ ಸಿಕ್ಕಿಕೊಂಡವರು ಈ ವೀರಪ್ಪನ್ ಸಹಚರರೆಂಬ ನಾಲ್ವರು. ಈ ನಾಲ್ವರು ನಿರಪರಾಧಿಗಳು ಎಂಬುದು ನನ್ನ ವಾದವಲ್ಲ, ಆದರೆ ಪೊಲೀಸ್ ತನಿಖೆಯಲ್ಲಿ ದೃಢವಾಗಿ ಇವರ ಬಗ್ಗೆ ಏನನ್ನು ಹೇಳಲು ಸಾಧ್ಯವಾಗಿಲ್ಲ,

ವೀರಪ್ಪನ್ ಸಹಚರರಿಗೆ ಕೊಟ್ಟಂತಹ ಮರಣದಂಡನೆಯನ್ನು ಸಮರ್ಥಿಸುವ 'ಯಾವುದೇ ಪುರಾವೆಗಳನ್ನು ಅದು ಒಳಗೊಂಡಿಲ್ಲ,

'ಮರಣದಂಡನೆ' ಯು ರದ್ದಾಗಬೇಕು ಎಂಬ ಕೂಗು ವಿಶ್ವದಲ್ಲಿ ಮಾರ್ದನಿಸುತ್ತಿರುವಾಗ, ಭಾರತದಲ್ಲಿ ಅದು ಸಾಲುಸಾಲಾಗಿ ಕಂತುಕಂತುಗಳಲ್ಲಿ ಜಾರಿಯಾಗುತ್ತಿರುವುದು ದುರದೃಷ್ಟಕರವಾಗಿದೆ. ಅದರಲ್ಲೂ ಒಂದು ಬಾರಿ ಶಿಕ್ಷೆಗೆ ಒಳಗಾದವರನ್ನು ಮತ್ತೆ ಶಿಕ್ಷೆಗೆ ಒಳಪಡಿಸುವಂತಿಲ್ಲ ಎಂಬ ನಿಯಮವಿದ್ದರೂ, ಅದನ್ನು ಎಲ್ಲಿಯೂ ಪಾಲಿಸುತ್ತಿಲ್ಲ, ಏಕೆಂದರೆ ವೀರಪ್ಪನ್ ಸಹಚರರು ಈಗಾಗಲೇ 21 ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದಾರೆ. ನಾಲ್ವರಲ್ಲಿ ಮೂವರಿಗೆ ಬುದ್ಧಿ ಸ್ಥಿಮಿತದಲ್ಲಿಲ್ಲ. ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರನ್ನು ನೇಣಿಗೆ ಹಾಕುವಂತಿಲ್ಲ. ಆದರೆ ಪ್ರಸ್ತುತ ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಂಡಂತೆ ಕಾಣುತ್ತಿಲ್ಲ.

'ಟಾಡಾ' ಕಾಯ್ದೆಯ ಅಡಿಯಲ್ಲಿ ಬಂಧಿಸಲಾಗಿರುವ ಸುಮಾರು 75,000 ಜನರಲ್ಲಿ ಯಾರ್ಯಾರು ಇದರಿಂದ ಹೊರಬಂದರು ಎಂಬುದು ಇದುವರೆಗೂ ಗೊತ್ತಾಗಿಲ್ಲ. ಶೇಕಡ 98 ರಷ್ಟು ಪ್ರಕರಣಗಳನ್ನು ನ್ಯಾಯಾಲಯಗಳು ವಜಾಗೊಳಿಸಿವೆ. ಶೇ. 2ರಷ್ಟು ಜನರಿಗೆ ಶಿಕ್ಷೆಯಾಗಿದ್ದರೂ, ಸುಪ್ರೀಂಕೋರ್ಟಿನಲ್ಲಿ ಊರ್ಜಿತವಾಗಿಲ್ಲ.

ಒಬ್ಬ ಬಂಧಿಗೆ ಒಂದು ಶಿಕ್ಷೆಯನ್ನು ಕೊಡುವಾಗ, ಆ ಶಿಕ್ಷೆಯ ಆಗು-ಹೋಗುಗಳು ಅವನಿಗೆ ಅರ್ಥವಾಗುವಂತಿರಬೇಕು. ತನಗೇನೂ ಶಿಕ್ಷೆ. ಎಂತಹ ದಂಡನೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಗ್ರಹಿಸುವ ಪರಿಜ್ಞಾನ ಹೊಂದಿರಬೇಕು. ಇದು ಕಾನೂನಿನ ನಿಯಮ. ಆದರೆ ಗಲ್ಲು ಶಿಕ್ಷೆಯನ್ನು ಜಾರಿಮಾಡಿರುವ ಸಂದರ್ಭದಲ್ಲಿ ಮೂವರು ಕೈದಿಗಳು ಶಿಕ್ಷೆಯನ್ನು ಅರ್ಥಮಾಡಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ. ಅವರಿಗೆ ಮಾನಸಿಕ ಅಸ್ವಸ್ಥತೆ ಉಂಟಾಗಿದೆ ಎಂಬ ವರದಿ ಇದೆ. ಆದರೂ ಶಿಕ್ಷೆ ಜಾರಿ ಮಾಡುವ ಆತುರದಲ್ಲಿ ನಮ್ಮ ಕಾರ್ಯಾಂಗ ಇದೆ. ನೂರಾರು ಪ್ರಶ್ನೆಗಳು... ಪ್ರಶ್ನೆಗಳಾಗಿಯೇ ಉಳಿದಿವೆ.

ಟೆಂಪಲ್ ಆಫ್ ಸಕ್ಸಸ್

ಚೋರ ಗುರು ರಘುನಾಥ್ ಗುರೂಜಿ



ಇವನೊಬ್ಬ ಚೋರ ಗುರು.

ಮತ್ತಿವನಿಗೆ ಅಸಂಖ್ಯ ಮುಠ್ಠಾಳ ಶಿಷ್ಯಗಣ.

ಶ್ರೀಶ್ರೀಶ್ರೀ ಸದ್ಗುರು ಸಾಯಿದತ್ತ ರಘುನಾಥ ಗುರೂಜಿ ಮಹಾರಾಜ್ ಎಂದು ಫರ್ಲಾಂಗ್ ಉದ್ದದ ಹೆಸರಿಟ್ಟುಕೊಂಡಿರುವ ಈತ ಈಗ ಬೆಂಗಳೂರಿನಲ್ಲಿ ಹೊಸ ದಂಧೆ ಚಾಲೂ ಮಾಡಿದ್ದಾನೆ. ಈ ದಂಧೆ ನೋಡಿದರೆ ಎಂತೆಂಥ ಯಶಸ್ವಿ ಬ್ಯುಸಿನೆಸ್‌ಮೆನ್‌ಗಳೂ ದಂಗು ಬಡಿದುಹೋಗುವಂತಿದೆ.

ಟೆಂಪಲ್ ಆಫ್ ಸಕ್ಸಸ್ ಎಂಬ ಬೋರ್ಡ್ ನೇತು ಹಾಕಿಕೊಂಡು ಗಾಂಧಿ ಬಜಾರಿನಲ್ಲೊಂದು ಅಂಗಡಿ ತೆರೆದಿರುವ ರಘುನಾಥ ಗುರೂಜಿ ಆರೋಗ್ಯ ಹಾಗೂ ಆಧ್ಯಾತ್ಮಿಕತೆ ಬೆರೆಸಿ ಕಸಿ ಮಾಡಿ ಹೊಸದೊಂದು ದಂಧೆ ಶುರು ಮಾಡಿದ್ದಾನೆ. ಬಹುಶಃ ನೀವು ನಂಬಲಿಕ್ಕಿಲ್ಲ, ಈ ರಘುನಾಥ ಗುರೂಜಿ ತನ್ನ ಪ್ರಚಾರದ ಕರಪತ್ರಗಳಲ್ಲಿ ಕೆಮ್ಮು, ನೆಗಡಿ, ಅಸ್ತಮಾ, ಅಸಿಡಿಟಿಯಿಂದ ಆರಂಭಿಸಿ ಹೃದಯಬೇನೆ, ಕ್ಯಾನ್ಸರ್, ಕಿಡ್ನಿ ವೈಫಲ್ಯ, ಡಯಾಬಿಟಿಸ್, ಬಿಪಿ, ಬಿಳಿ ಮಚ್ಚೆ, ಆರ್ಥ್ರೈಟಿಸ್, ಅಲ್ಸರ್, ಫಿಸ್ತುಲಾ, ಹೆಪಟೈಟಿಸ್, ಪಾರ್ಶ್ವವಾಯು, ಟ್ಯೂಮರ್, ಕಣ್ಣು, ಕಿವಿ, ಮೂಗು, ಗಂಟಲಿನತನಕ ಯಾರಿಗೆ ಎಂತದೇ ಕಾಯಿಲೆ ಬರಲಿ ತಾನು ವಾಸಿ ಮಾಡುವುದಾಗಿ ಹೇಳಿಕೊಳ್ಳುತ್ತಿದ್ದಾನೆ. ಇವನ ಈ ಬಂಡಲ್ ಕತೆಗಳೆಲ್ಲಾ ಈಗ ಕೆಲವು ಟಿವಿ ಚಾನಲ್‌ಗಳಲ್ಲೂ ಪ್ರಸಾರವಾಗುತ್ತಿವೆ.

ಈ ಘಟಿಂಗ ಅದೆಂತಾ ಭಂಡನೆಂದರೆ ಏಡ್ಸ್ ರೋಗವನ್ನು ನಾನು ವಾಸಿ ಮಾಡುತ್ತೇನೆ ಎಂದು ಹೇಳಿಕೊಳ್ಳುತ್ತಿದ್ದಾನೆ. ಮತ್ತಿದನ್ನು ಅನೇಕರು ನಂಬುತ್ತಿದ್ದಾರೆ. ಲೆಕ್ಕವಿಲ್ಲದಷ್ಟು ಜನ ನಂಬಿ ಮೋಸ ಹೋಗಿದ್ದು ಆಗಿಹೋಗಿದೆ.


ಯಾರಾದರೂ ಒಬ್ಬರು 'ಗುರೂಜಿ, ನನಗೆ ಶುಗರ್ ಇದೆ' ಅಂತಾ ಇವನ ಹತ್ತಿರ ಹೋದರೆ "ನಿಮ್ಮ ಶುಗರ್ ನನಗೆ ಕೊಟ್ಟುಬಿಡಿ, ನಾನು ಕಾಫಿ ಮಾಡಿಕೊಳ್ತೀನಿ. ನಿಮ್ಮ ಕಾಯಿಲೆ ವಾಸಿ ಆಗುತ್ತೆ" ಅನ್ನುತ್ತಾನೆ.

ಹಾಗಂದರೇನೆಂದು ಅರ್ಥವಾಗದೆ ರೋಗಿ ಕಕ್ಕಾಬಿಕ್ಕಿಯಾಗಿ ನೋಡಿದರೆ ರಘುನಾಥ ಗುರೂಜಿ ಅಟ್ಟಹಾಸದಿಂದ ನಗುತ್ತಾ "ಏನ್ ನೋಡ್ತಿದೀರ, ನನ್ನ ಹತ್ರ ಬಂದತಕ್ಷಣ ನಿಮ್ಮ ಶುಗರ್ ಹೋಯ್ತು ಬಿಡಿ, ಯೋಚ್ನೆ ಮಾಡಬೇಡಿ, ಈಗ ಹೋಗಿ ನಿಮ್ಮ ಹೆಸರು ರಿಜಿಸ್ಟರ್ ಮಾಡಿಸಿ, ಟ್ರೀಟ್‌ಮೆಂಟ್ ಶುರು ಮಾಡೋಣ" ಎನ್ನುತ್ತಾನೆ. 'ಆಗಲಿ' ಅಂತೇನಾದರೂ ರೋಗಿಯು ಆಫೀಸಿನ ಸಿಬ್ಬಂದಿ ವಿದ್ಯಾ, ಮೋಹಿನಿ, ಪ್ರೀತಿ ಇವರ ಹತ್ತಿರ ಹೋಗಿ ನಿಂತರೆ ಅವರೊಂದು ಅರ್ಜಿ ಕೊಟ್ಟು ಭರ್ತಿ ಮಾಡಿಸಿಕೊಂಡು ಇಮ್ಮಡಿಯಟ್ಟಾಗಿ ಹಣ ಕೇಳುತ್ತಾರೆ.

ಅದರ ಮೊತ್ತ ಹತ್ತು, ಇಪ್ಪತ್ತು, ಐವತ್ತು ಸಾವಿರದ ತನಕ ಇರುತ್ತದೆ. ಇದು ಯಾಕೆಂದರೆ ಪೇಷಂಟ್‌ಗಳ ಜೇಬಿನ ತೂಕ ನೋಡಿ ಈ ಹುಡುಗಿಯರು ಹಣ ಕೇಳುವ ಕಲೆ ಕಲಿತಿರುವುದರಿಂದ.

"ನಿಮ್ಮ ಕಾಯಿಲೆ ನನಗೆ ಕೊಡಿ, ನಾನು ನಿಮಗೆ ಆರೋಗ್ಯ ಕೊಡುತ್ತೇನೆ" ಎಂಬ ಬೋರ್ಡ್ ಒಂದು ಅಲ್ಲೇ ನೇತಾಡುತ್ತಿರುತ್ತದೆ. ಆದರೆ ಇವನನ್ನು ನಂಬಿ ಹಣ ಕೊಟ್ಟ ಜನ ಈಗ ಗುರೂಜಿಯ ಮಾತಿನ ಗೂಡಾರ್ಥವು "ನಿಮ್ಮ ಕಾಸು ನನಗೆ ಕೊಡಿ, ನಾನು ನಿಮಗೆ ಅನಾರೋಗ್ಯ ತರುತ್ತೇನೆ" ಎಂದು ಭಾವಿಸುವಂತಾಗಿದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಗೀತಾ ಎಂಬ ಮಹಿಳೆಯೊಬ್ಬರು ತಮಗೆ ಶುಗರ್ ಇದೆ ಎಂದು ಭಾವಿಸಿ ಟೆಂಪಲ್ ಆಫ್ ಸಕ್ಸಸ್‌ಗೆ ಕಾಲಿಟ್ಟರು. ಟಿವಿ ಚಾನಲ್ ಒಂದರಲ್ಲಿ ರಘುನಾಥ ಗುರೂಜಿಯ ಪ್ರೋಗ್ರಾಂ ನೋಡಿ, ಅವನ ಮಾತುಗಾರಿಕೆಯ ಮೋಡಿಗೊಳಗಾಗಿ ಆಕೆ ಚಿಕಿತ್ಸೆಗಾಗಿ ಬಂದಿದ್ದರು. ಯಥಾಪ್ರಕಾರ "ನಿಮ್ಮ ಕಾಯಿಲೆ ನನಗೆ ಕೊಡಿ" ಡೈಲಾಗ್ ಹೊಡೆದ ರಘುನಾಥ ಗೀತಾರಿಂದ



ಬರೋಬ್ಬರಿ ಎಪ್ಪತ್ತೈದು ಸಾವಿರ ರೂಪಾಯಿ ಕಿತ್ತ. ಆದರೆ ಆರು ತಿಂಗಳಾದರೂ ಗೀತಾರ ಶುಗರ್ ಕಂಟ್ರೋಲಿಗೆ ಬರಲೇ ಇಲ್ಲ. ಇದರಿಂದ ಬೇಸತ್ತ ಆಕೆ 'ನಿಮ್ಮ ಟ್ರೀಟ್‌ಮೆಂಟ್ ಏನು ಪ್ರಯೋಜನವಿಲ್ಲ' ಅಂತ ಜಗಳ ತೆಗೆದರು. ಆಗ ಈ ಗುರು ನೀವಿನ್ನೂ ಇಲ್ಲಿಗೆ ಬರಲೇಬೇಡಿ' ಅಂದುಬಿಟ್ಟ.

ಇಷ್ಟಕ್ಕೂ ಆಕೆಗೆ ಕಾಯಿಲೆ ಯಾಕೆ ವಾಸಿಯಾಗಲಿಲ್ಲ ಅಂತ ತನಿಖೆ ಮಾಡಿ ನೋಡಿದರೆ ಈ ಚೋರಗುರುವಿನ ಅಸಲಿ ಮುಖ ಕಾಣುತ್ತದೆ.

ನೆಗಡಿಯಿಂದ ಕ್ಯಾನ್ಸರ್‌ವರೆಗೂ ಏನೇ ಕಾಯಿಲೆ ಅಂತ ಜನ ಬಂದರೂ ರಘುನಾಥ ಗುರೂಜಿ ಕೊಡುವುದು "ಉಪಾಪಾನ' ಚಿಕಿತ್ಸೆ.

ಡಾ.ಉದಯ ಕುಮಾರ್ ಎಂಬ ಇನ್ನೊಬ್ಬ ಚೀಟರ್

ರಘುನಾಥ ಗುರೂಜಿಯ ಟೆಂಪಲ್ ಆಫ್ ಸಕ್ಸಸ್ ಎಂಬ ಆಧ್ಯಾತ್ಮಿಕ ಗುಜರಿ ಅಂಗಡಿಯಲ್ಲಿ ಡಾ. ಉದಯ ಕುಮಾರ್ ಎಂಬ ಇನ್ನೊಬ್ಬ ಚೀಟರ್ ಕೂಡಾ ಇದ್ದಾನೆ. ಹೋಮಿಯೊಪಥಿ ಓದಿದ್ದೇನೆ ಅಂತಾ ಹೇಳಿಕೊಳ್ಳುತ್ತಾನೆ. ಆದರೆ ರೋಗಿಗಳಿಗೆ ನಿಂಬೆ ಪಾನಕ ಕುಡಿಸಿ, ಕಣ್ಣಿಗೆ ನಿಂಬೆರಸ ಎರಚುವುದು ಬಿಟ್ಟರೆ ವೈದ್ಯಶಾಸ್ತ್ರದ ಇನ್ನೊಂದು ಜ್ಞಾನವೂ ಇವನಿಗಿಲ್ಲ. ಪ್ರತಿ ಗುರುವಾರ ನಡೆಯುವ ರೋಗಿಗಳ ಸಮಾವೇಶದಲ್ಲಿ ಮೆರೆಯುವುದೊಂದೇ ಇವನ ಸ್ಪೆಷಾಲಿಟಿ. ಟೆಂಪಲ್ ಆಫ್ ಸಕ್ಸಸ್‌ಗೆ ಈಗ ಪೆದ್ದ ಜನ ಸಾಲುಸಾಲಾಗಿ ಬರುತ್ತಿರುವುದರಿಂದ ವಂಚಕರ ಗುಂಪಿನಲ್ಲೇ ಮೇಲುಗೈಗಾಗಿ ಜಗಳ ಶುರುವಾಗಿದೆ. ಆಂಧ್ರದ ಕರ್ನೂಲಿನ ಉಮಾದೇವಿ ನಾರಾಯಣರಾವ್ ದಂಪತಿ ಹಾಗೂ ಇವರ ನೆಂಟರ ಮಗಳು ಪ್ರೀತಿ ಎಂಬಾಕೆ ಡಾ. ಉದಯಕುಮಾರ್ ವಿರುದ್ಧ ನಿತ್ಯಕದನ ನಡೆಸುತ್ತಿದ್ದಾರೆ. ಪ್ರತಿದಿನ ರೋಗಿಗಳಿಂದ ಕಸಿಯುವ ಹಣದಲ್ಲಿ ಯಾರ್‍ಯಾರ ಪಾಲೆಷ್ಟು ಎಂಬ ಜಗಳ ಅದು.

ಈ ವಂಚಕರ ಗುಂಪಿನೊಳಗೇ ಇನ್ನೊಂದು ಜಗಳವೂ ಇದೆ.

ಅದು ವಿದ್ಯಾ ಎಂಬುವಳಿಗೆ ಸಂಬಂಧಿಸಿದ್ದು. ಈಕೆ ಗುರೂಜಿಯ ಮಗಳೆಂದು ರೋಗಿಗಳಿಗೆ ಹೇಳುತ್ತಿದ್ದಾರೆ. ಆದರೆ ವಿದ್ಯಾ ರಘುನಾಥನ ಮಗಳಲ್ಲ, ಈಕೆ ರಘುನಾಥನ ಟೆಂಪಲ್ ಒಳಗೆ ಕಾಲಿಟ್ಟಿದ್ದೇ ಆಕೆಯ ರೋಗಿ ತಾಯಿಗೆ ನಿಂಬೆಪಾನಕ ಕುಡಿಸಲು ಬಂದಾಗ! ಆದರೆ ಆ ತಾಯಿಗೆ ರೋಗ ವಾಸಿಯಾಗದಿದ್ದರೂ ವಿದ್ಯಾಳಿಗೆ ಹೊಸ ಕಾಯಿಲೆ ಬಂದೇ ಬಂತು. ವಿದ್ಯಾ ತನ್ನ ಗಂಡನನ್ನೇ ಬಿಟ್ಟು ರಘುನಾಥನ ಅಂಗಡಿಗೆ ಸೇರಿಕೊಂಡು ಈಗ ಸ್ವಯಂಸೇವಕಿಯಾಗಿ, ಗುರೂಜಿಯ ಆಪ್ತ ಸಹಾಯಕಿಯಂತೆ 'ಟೆಂಪಲ್'ನ ಎಲ್ಲವನ್ನೂ ನಿಯಂತ್ರಿಸುತ್ತಿದ್ದಾಳೆ. ಇನ್ನೊಬ್ಬ ಹುಡುಗಿ ಮೋಹನ ಕೂಡಾ ಅದೆಂತದ್ದೇ ಕಾಯಿಲೆಯ ರೋಗಿ ಬಂದರೂ ತಾನೂ ಅಟೆಂಡ್ ಮಾಡುತ್ತಾಳೆ.

ಆದರೆ ಈಕೆ ಓದಿರುವುದು ಬರೀ ಆರನೇ ಕಳಾಸು ಮಾತ್ರ.

ಇದೇನು ಅಂತಾ ಮಹಾನ್ ಚಿಕಿತ್ಸೆ ಅಥವಾ ಔಷಧವಲ್ಲ, ಬದಲಾಗಿ

ಜುಜುಬಿ ನಿಂಬೆ ಪಾನಕ ಅಷ್ಟೆ!

ತಾನು ಪ್ರಾಚೀನ ಭಾರತೀಯ ವೈದ್ಯ ಪದ್ಧತಿಯನ್ನೆಲ್ಲಾ ಶೋಧಿಸಿ, ಅರೆದು ಸಂಶೋಧಿಸಿರುವ ನಿಂಬೆಪಾನಕದಿಂದ ಈ ಜಗತ್ತಿನ ಸಕಲ ರೋಗಗಳನ್ನು ಗುಣಪಡಿಸಬಹುದು ಎಂದು ರಘುನಾಥ ಬುರುಡೆ ಬಿಡುತ್ತಾನೆ.

ದುರಂತ ಏನೆಂದರೆ ಇವನ ಮಾತನ್ನು ನಂಬಿ ಕೆಲವರು ಪ್ರಾಣ ಕಳೆದುಕೊಂಡಿದ್ದು ಆಗಿದೆ.


ರಘುನಾಥನ ಹೀನಚರಿತ್ರೆ

ಶಿವಮೊಗ್ಗದ ಸೊರಬ ಹತ್ತಿರದ ಮೂಗುಡ್ತಿಯವನಾದ ರಘುನಾಥ ಈಗೊಂದು ಇಪ್ಪತ್ತು ವರ್ಷದಿಂದಲೂ ಹಲಾಲ್‌ಟೋಪಿ ಕೆಲಸಗಳಲ್ಲೇ ಬ್ಯುಸಿಯಾಗಿದ್ದಾನೆ. ತಾನು ಹಿಮಾಲಯದಿಂದ ಕನ್ಯಾಕುಮಾರಿತನಕ ಜ್ಞಾನಸಾಕ್ಷಾತ್ಕಾರಕ್ಕಾಗಿ ವರ್ಷಗಟ್ಟಲೆ ಅಲೆದು ಬಂದೆ ಅನ್ನುತ್ತಾನೆ. ಉತ್ತರಾಖಂಡ್ ರಾಜ್ಯದಲ್ಲಿ ಅಖಂಡ ಶ್ರೀ ಸದ್ಗುರು ಸಾಯಿದತ್ತ ಪೀಠಂ ನನ್ನ ಮೂಲ ಆಧ್ಯಾತ್ಮಿಕ ಕೇಂದ್ರ ಅನ್ನುತ್ತಾನೆ. ಇದೆಲ್ಲಿದೆ, ಯಾಕಿದೆ ಅನ್ನುವುದು ಬಡ ಕನ್ನಡಿಗನಿಗೆ ಗೊತ್ತಾಗುವುದಾದರೂ ಹೇಗೆ? ಆಮೇಲೆ ಕೆಲವರ ಬಳಿ ತಾನು ಶಿರಡಿ ಸಾಯಿಬಾಬಾನ ಅವತಾರ ಎನ್ನುತ್ತಾನೆ. ಇನ್ನೂ ಕೆಲವರಿಗೆ 'ಪುಟ್ಟಪರ್ತಿ ಸಾಯಿಬಾಬಾನಿಗೂ ನಾನೊಂದು ಸಾರಿ ಅಮೃತ ಚಿಕಿತ್ಸೆ ಕೊಟ್ಟಿದ್ದೆ' ಎಂದು ಕೊಚ್ಚಿಕೊಳ್ಳುತ್ತಾನೆ. ರಘುನಾಥನು ಎಲ್ಲೆಲ್ಲಿ ಅಂಡಲೆದು ಅದೇನೇನು ವಿದ್ಯೆ ಕಲಿತು ಬಂದನೊ ಬಲ್ಲವರಿಲ್ಲ, ಖುದ್ದು ಕಂಡವರೂ ಇಲ್ಲ, ಹೀಗಿದ್ದಾಗ ಈಗ್ಗೆ ಕೆಲ ವರ್ಷಗಳ ಹಿಂದೆ ಬೆಂಗಳೂರಿನ ಚಾಮರಾಜಪೇಟೆಯ ಉಮಾ ಟಾಕೀಸ್ ಹತ್ತಿರ ಇವನು ಪ್ರತ್ಯಕ್ಷನಾದ. ಜೊತೆಗೆ ಹೆಂಡತಿ ರೂಪಾ, ಗಂಡುಮಕ್ಕಳಿಬ್ಬರು ಶಕ್ತಿ ಮತ್ತು ಶ್ಯಾಮ್ ಇದ್ದರು. ಅಲ್ಲಿನ ಮಾನಸ ಹೋಟೆಲ್ ಬಿಲ್ಡಿಂಗ್‌ನ ಮಹಡಿ ಮನೆಯಲ್ಲಿ ಝಂಡಾ ಊರಿದ ರಘುನಾಥ 'ಟೆಂಪಲ್ ಆಫ್ ಸಕ್ಸಸ್' ಎನ್ನುವ ಆಧ್ಯಾತ್ಮಿಕ ಅಂಗಡಿ ತೆರೆದ. ಆದರೆ ಇವನ ತಿಕ್ಕಲು ಮಾತು, ವಿಚಿತ್ರ ಚಿಕಿತ್ಸಾ ವಿಧಾನಗಳು, ಮುಗ್ಧ ಜನರಿಂದ ಹಣ ಕೀಳುತ್ತಿದ್ದ ಚಟುವಟಿಕೆಗಳನ್ನೆಲ್ಲಾ ಗಮನಿಸಿದ ಸಾರ್ವಜನಿಕರೆ ರಘುನಾಥನನ್ನು ಆ ಮನೆ ಬಿಟ್ಟು ಓಡಿಸಿದರು. ಅಲ್ಲಿಂದ ಬೆಂಗಳೂರು ಹೈಸ್ಕೂಲ್ ಎದುರಿಗಿರುವ ಲಿಂಗೇಗೌಡ ಎಂಬುವರ ಮನೆಯ ಬಾಡಿಗೆಗೆ ಬಂದ ರಘುನಾಥ ಅಲ್ಲೂ ಹಳೇ ದಂಧೆಗೆ ಕೈಯಿಟ್ಟು, ಜನ ಅಲ್ಲಿಂದಲೂ ಒದ್ದು ಓಡಿಸಿದರು. ಆಮೇಲೆ ನಾಲ್ಕೈದು ವರ್ಷ ನಾಪತ್ತೆಯಾದ ರಘುನಾಥ ಗುರೂಜಿ ಈಗ ಅದೇ ಟೆಂಪಲ್ ಆಫ್ ಸಕ್ಸಸ್ ಬೋರ್ಡನ್ನು ಗಾಂಧಿಬಜಾರಿನಲ್ಲಿ ತಂದು ನೇತು ಹಾಕಿದ್ದಾನೆ. ಗಾಂಧಿ ಬಜಾರ್ ಸರ್ಕಲ್ಲಿನ ಬಾಸ್ಕೋ ಬಿಲ್ಡಿಂಗ್‌ನ ಐಸ್ ಥಂಡರ್ ಹೋಟೆಲಿನ ಎರಡನೇ ಮಹಡಿಯಲ್ಲಿ ಒಂದು ಹಾಗೂ 'ಪೊಬ್ಬತಿ ಸಿಲ್ಕ್' ಅಂಗಡಿಯ ಮೇಲು ಮಹಡಿಯಲ್ಲೊಂದು ಜಾಗ ಹಿಡಿದು ದಂಧೆ ಚಾಲು ಮಾಡಿದ್ದಾನೆ. ಈ ಎರಡೂ ಜಾಗದ ವಿಸ್ತೀರ್ಣ 20x20 ಮೀರುವುದಿಲ್ಲ. ಅಲ್ಲೇ ಇವನ ಚಿಕಿತ್ಸೆ, ಧ್ಯಾನ, ಪ್ರವಚನ, ಸರ್ಜರಿಗಳೆಲ್ಲಾ ನಡೆಯುತ್ತಿವೆ.

ಉಪಾಪಾನಕ್ಕೆ ನಿದ್ದೆ ಮಾತ್ರೆ ಬೆರೆಸುತ್ತಾನೆ ಹುಷಾರ್!

ರಘುನಾಥ್ ಗುರೂಜಿ ತನ್ನ ಬಳಿ ಬರುವ ರೋಗಿಗಳಿಗೆ ಉಪಾಪಾನ ಮಾಡಿಸಿ ನಂತರ ಧ್ಯಾನ ಮಾಡಲು ಹೇಳುತ್ತಾನೆ. ಆದರೆ ಹಾಗೆ ಧ್ಯಾನಕ್ಕಿಳಿಯುವ ಬಹುತೇಕರು ಒಂದೆರಡು ಗಂಟೆ ಮೇಲೇಳುವುದಿಲ್ಲ. ಇದು ಯಾಕೆ ಗೊತ್ತೆ?

ಉಪಾಪಾನದಲ್ಲಿ ಇವನು ನಿದ್ರೆ ಮಾತ್ರೆ ಬೆರೆಸಿ ಕುಡಿಸುತ್ತಾನೆ ಅದಕ್ಕೆ!



ರೋಗಿಯೊಬ್ಬರ ರಹಸ್ಯ ದಾಖಲೆ

ಇವನ ಆಫೀಸಿನಲ್ಲಿರುವ ರೋಗಿಗಳ ಫೈಲ್‌ಗಳನ್ನೊಮ್ಮೆ ಚೆಕ್ ಮಾಡಿ ನೋಡಿದರೆ ಪ್ರತಿ ರೋಗಿಯೂ ತನಗೆ [illegible] ನಿದ್ರೆ ಬಂತೆಂದು ದಾಖಲಿಸಿರುವುದು ಕಂಡುಬರುತ್ತದೆ. ಈತನ ಆಫೀಸಿನಲ್ಲಿ ರಹಸ್ಯವಾಗಿ ಇಟ್ಟಿರುವ [illegible] ಖುದ್ದಾಗಿ ಈ ವರದಿಗಾರನಿಗೆ ತೋರಿಸಿದ್ದಾಳೆ. ಆಕೆಯು [illegible] ಮನವರಿಕೆ ಮಾಡಿಕೊಡುವುದಾಗಿತ್ತು. ಆದರೆ ಅದೇ ದಾಖಲೆಗಳು [illegible] ನಿದ್ರೆ ಮಾತ್ರೆ ಚಿಕಿತ್ಸೆಯ ಅಸಲಿ ಮುಖವನ್ನು ಬಯಲಿಗೆ ತಂದಿದೆ.



ಗುರೂಜಿ ಮಗ ಶಕ್ತಿ ಹಾಗೂ ಡಾ. ಉದಯ್

ಮೋಸದ ದುಡ್ಡಲ್ಲಿ ರಘುನಾಥನ ಮಗನಿಗಾಗಿ ಸಿನಿಮಾ

ಕಳೆದ ಸೆಪ್ಟೆಂಬರ್‌ನಲ್ಲಿ 'ಆರ್ಯಾಸ್ ಲವ್' ಎಂಬ ಸಿನಿಮಾದ ಹಾಡಿನ ಸೀಡಿ ಬೆಂಗಳೂರಿನ ಗ್ರೀನ್‌ಹೌಸ್‌ನಲ್ಲಿ ಬಿಡುಗಡೆಯಾಯಿತು. ಈ ಸಿನಿಮಾದ ಹೀರೋ ಶಕ್ತಿ ಎಂಬಾತ ಚೋರಗುರು ರಘುನಾಥ ಗುರೂಜಿಯ ಸುಪುತ್ರ! ಅಂದಹಾಗೆ ರಘುನಾಥನ ಚೀಟರ್ ಸಹಾಯಕ ಡಾ. ಉದಯ ಕುಮಾರನೇ ಆರ್ಯಾಸ್ ಲವ್ ಚಿತ್ರದ ನಿರ್ಮಾಪಕ.

ಇದರರ್ಥ ಬೇರೇನೂ ಅಲ್ಲ.

ಟೆಂಪಲ್ ಆಫ್ ಸಕ್ಸಸ್ ಮೂಲಕ ಮುಗ್ಧ ಜನರಿಂದ ಮುಂಡಾಯಿಸುತ್ತಿರುವ ಲಕ್ಷಗಟ್ಟಲೆ ಹಣವನ್ನು ಈ ರಘುನಾಥ-ಡಾ. ಉದಯ್ ಈಗ ಸಿನಿಮಾಗಾಗಿ ತಂದು ಸುರಿಯುತ್ತಿದ್ದಾರೆ. ಉಡುಪಿ ಮೂಲದ ಗಗನಸಖಿ ಶುಶ್ರುತಾ ವಾಗ್ಲೆ ಎಂಬಾಕೆ ಈ ಸಿನಿಮಾದ ನಾಯಕಿ. ಹೊಸಬ ಪುನೀತ್ ಆರ್ಯ ಎಂಬುವರು ಈ ಸಿನಿಮಾ ಡೈರೆಕ್ಟರ್. ಮೋಸದ, ದುಡ್ಡು, ಕಳಪೆ ಹೀರೋ, ಅನನುಭವಿ ನಾಯಕಿಯಿರುವ ಈ ಸಿನಿಮಾ ತೋಪಾಗುವುದಂತೂ ಗ್ಯಾರಂಟಿ.

ರಘುನಾಥನಿಂದ ವಂಚನೆಗೊಳಗಾದ ಜನರೆಲ್ಲಾ ಈಗ ಪ್ರತಿಭಟಿಸಲು ಒಂದು ಸಂಘಟನೆ ಮಾಡುತ್ತಿದ್ದಾರೆ. ಗುರೂಜಿಯ ಸಿನಿಮಾ ರೆಡಿಯಾಗುವ ಸಮಯಕ್ಕೇ ಇವರೆಲ್ಲಾ ಬೀದಿಗಿಳಿಯುವ ಲಕ್ಷಣಗಳಿವೆ.

ನಿಂಬೆಪಾನಕದ ಚಿಕಿತ್ಸಾ ವಿಧಾನದ ಬಗ್ಗೆ ಕರಪತ್ರ ಹಂಚುವುದು, ಚಿಲ್ಲಿ ಪತ್ರಕರ್ತರ ಮೂಲಕ ತನ್ನ ಬಗ್ಗೆ ಪತ್ರಿಕಾ ವರದಿ ಹಾಕಿಸುವುದು, ಟಿವಿ ಗಳಲ್ಲೂ ತನ್ನ ಪ್ರಾವೀಣ್ಯತೆಯ ಬಗ್ಗೆ ಹೇಳಿಕೊಳ್ಳುತ್ತಾ ಸರ್ಕಸ್ ಮಾಡಿ ಒಟ್ಟಿನಲ್ಲಿ ರಘುನಾಥ ಗುರೂಜಿ ಲಕ್ಷಾಂತರ ರೂಪಾಯಿ ಕಮಾಯಿಸುತ್ತಿದ್ದಾನೆ.

'No pill, no bill' ಎನ್ನುತ್ತಲೇ ಅಮಾಯಕರಿಂದ ...ಸುತ್ತಿದ್ದಾನೆ. ಇವನೆಂತಾ ಭಂಡನೆಂದರೆ ಯಾರಾದರೂ ...ಶುಗರ್ ಈಗ ಕಂಟ್ರೋಲಿಗೆ ಬಂದಿದೆ' ಅಂದರೆ ...ದ್ರಾ, ಅದು ನನ್ನ ಪ್ರಭಾವ" ಅನ್ನುತ್ತಾನೆ. ಇನ್ಯಾರೋ "ನಿಮ್ಮ ಚಿಕಿತ್ಸೆಯಿಂದ ಏನು ಪ್ರಯೋಜನ ..." ಅಂದರೆ "ನಾನೇನ್ ಮಾಡ್ಲಿ, ಅದು ನಿನ್ ...ನೀವು ನಾನ್ ಹೇಳಿದಂತೆ ಕೇಳಲಿಲ್ಲ, ಸರಿಯಾಗಿ ...ಪಾನಕ ಕುಡಿಲಿಲ್ಲ, ಅದಕ್ಕೆ ಹೀಗಾಗಿದೆ" ಎಂದು ...ಮಾಡಿ "ಇನ್ಮೇಲೆ ಇಲ್ಲಿಗೆ ಬರಬೇಡಿ" ಎಂದು ಆಚೆಗಟ್ಟುತ್ತಾನೆ. ಆದರೆ ಆ ರೋಗಿಗಳಿಂದ ಕಿತ್ತ ...ನಯಾಪೈಸೆಯನ್ನು ವಾಪಸ್ ಕೊಡುವುದಿಲ್ಲ, ...ನ ಜಗಳಕ್ಕೆ ನಿಂತರೆ "ನನ್ ಬಗ್ಗೆ ಆಡಿಕೊಂಡರೆ ...ಕಾಯಿಲೆ ವಾಸಿಯಾಗಲ್ಲ' ಅಂತಾ ದಿಗಿಲಿಕ್ಕಿಸುತ್ತಾನೆ. ...ಸುನಾಥ ಗುರೂಜಿಯಿಂದ ಹೀಗೆ ...ಗೊಳಗಾದವರ ಲಿಸ್ಟ್ ನೋಡಿದರೆ ಅದು ...ಮಾಗುವಷ್ಟಿದೆ.

...ತಾ ಎಂಬುವರು ಎಪ್ಪತ್ತೈದು ಸಾವಿರ ಕೊಟ್ಟು ...ಪಯ ನಿಂಬೆಪಾನಕ ಕುಡಿದೂ ಕುಡಿದೂ ಮೋಸ ...ಪ್ರಕರಣ ಒಂದಾದರೆ ಜಮುನಾ ಎಂಬಾಕೆ ಮಗು ...ಅಂತ ಚಿಕಿತ್ಸೆಗೆ ಬಂದು ಐವತ್ತು ಸಾವಿರ ಲಾಸ್ ...ಕೊಂಡಿದ್ದಾರೆ. ಕಾವ್ಯ ಎಂಬಾಕೆ ಎರಡು ವರ್ಷ ...ಬಿಡದೆ ಅಲೆದರೂ ಅವರ ಬೆನ್ನುನೋವಿನ ಸಮಸ್ಯೆ ...ಯಲಿಲ್ಲ.

...ಡು ತಿಂಗಳ ಹಿಂದೆ ಇವನನ್ನು ನಂಬಿ ಚಿಕಿತ್ಸೆಗಾಗಿ ... ಗಣೇಶ್ ಕಾಮತ್ ಎಂಬ ಕ್ಯಾನ್ಸರ್ ರೋಗಿ ...ಜೊತೆಗೆ ಪ್ರಾಣವನ್ನು ಕಳೆದುಕೊಂಡಿದ್ದಾನೆ. ನಾಗರತ್ನ ...ಮಹಿಳೆ ಇವನ ಟ್ರೀಟ್‌ಮೆಂಟ್ ಏಟಿಗೆ ಸಿಕ್ಕು ...ಕೆಯ ಮಗಳು ಟೆಂಪಲ್ ಆಫ್ ಸಕ್ಸಸ್ ಆಫೀಸಿಗೇ ...ದೊಡ್ಡ ಜಗಳ ಮಾಡಿಹೋಗಿದ್ದಾರೆ.

...ನೆಂಥ ಚಾಲಾಕಿಯೆಂದರೆ ತನ್ನ ಬಗ್ಗೆ ತರೇವಾರಿ ...ಗಳನ್ನು ತಾನೇ ಪ್ರಚಾರ ಮಾಡಿಕೊಂಡಿದ್ದಾನೆ. ...ಘುನಾಥ ಗುರೂಜಿಗೆ ಪವರ್ (ಆಧ್ಯಾತ್ಮಿಕ ಶಕ್ತಿ) ...ದೆ. ಯಾರಾದ್ರೂ ಅವರನ್ನ ಪ್ರಶ್ನಿಸಿದರೆ, ಜಗಳ ...ಅಂತವರನ್ನೇ ವಶೀಕರಣ ಮಾಡಿಕೊಂಡು ತಾನು ...ತೆ ಕೇಳುವ ಹಾಗೆ ಮಾಡುತ್ತಾನಂತೆ' ಎಂಬ ... ಇದರಲ್ಲೊಂದು.

...ರಿಂದಾಗಿ ಗುರೂಜಿಯಿಂದ ಮೋಸ ಹೋದ ... ಪ್ರತಿಭಟಿಸುವ ಧೈರ್ಯ ಮಾಡುತ್ತಿಲ್ಲ. ನಿಂಬೆಹಣ್ಣಿನ ...ದ ಶುಗರು, ಕ್ಯಾನ್ಸರು ವಾಸಿಯಾಗುತ್ತದೆ ಎಂದು ...ರುವ ಮುಗ್ಧ-ಪೆದ್ದ ಜನರು ಗುರೂಜಿಯ ...ಶಕ್ತಿಯ ಬಗ್ಗೆ ನಂಬಿದರೆ ಏನೂ ಆಶ್ಚರ್ಯವಿಲ್ಲ! ...ರೇ ರೋಗಿ ಬಂದರೂ ದಿನಕ್ಕೆ ಏಳು ಲೀಟರ್ ... ಕುಡಿಸುವ ರಘುನಾಥನು ರೋಗಿಗಳ ಹಣಕಾಸಿನ ...ಪತ್ತೆಹಚ್ಚಿ ಅದಕ್ಕೆ ತಕ್ಕಂತೆ ಹಣ ಕೀಳುತ್ತಾನೆ. ...ಪ್ರತಿ ತಿಂಗಳೂ 5550/- ರೂಪಾಯಿ ಮಂತ್ಲಿ ...ಕ್ಕಿಸುತ್ತಾನೆ. ಇಷ್ಟು ಹಣ ಕಿತ್ತರೂ ರಘುನಾಥ ... ಚಿಕಿತ್ಸೆ ಅಂತ ಕೊಡುವುದು ತಿಂಗಳಿಗೆ ಐವತ್ತು ...ಯೂ ಖರ್ಚಾಗದ ನಿಂಬೆಹಣ್ಣಿನ ಪಾನಕ ಮಾತ್ರ! ...ನ ಹತ್ತಿರ ಅಮೃತ ಚಿಕಿತ್ಸೆ, ಡಿವೈನ್ ಥೆರಪಿ, ...ಸರ್ಜರಿ, ಓಂಕಾರ ಧ್ಯಾನ, ಗುರು ಧ್ಯಾನವೆಂಬ ... ಟ್ರೀಟ್‌ಮೆಂಟ್‌ಗಳಿವೆ. ಅಮೃತ ಚಿಕಿತ್ಸೆ ಅಂದರೆ ...ನಕವಾದರೆ ಡಿವೈನ್ ಥೆರಪಿ, ಸೈಕಿಕ್ ಸರ್ಜರಿ ...ಸು ಬರೀ ಬುರುಡೆ. ಇವನ ಹತ್ತಿರ ಶುಗರ್ ... ಬರಲಿ, ಇಲ್ಲ ಕ್ಯಾನ್ಸರ್ ರೋಗಿಯೇ ಬರಲಿ ... ಒಂದು ಲೀಟರ್ ನಿಂಬೆ ಪಾನಕ ಕುಡಿಸಿ ... ಒಂದು ಗಂಟೆ ಕಾಲ ಕಣ್ಣುಮುಚ್ಚಿ ಧ್ಯಾನ ಮಾಡಿ ...

ಧ್ಯಾನದ ಸೆಷನ್‌ಗೆ ಮುನ್ನ ಗುರೂಜಿಯ ...ಚಿಯರು ಏನು ಮಾಡುತ್ತಾರೆ ಗೊತ್ತೆ? ...ಗಿಯ ಕಣ್ಣುಗಳಿಗೇ ನೇರವಾಗಿ ನಿಂಬೆರಸ ಹುಯ್ದು ...ಣ್ಣುಮುಚ್ಚಿ ಮಲಗಿ' ಎಂದುಬಿಡುತ್ತಾರೆ. 'ಅಯ್ಯೋ ...ಕಣ್ಣು ಉರಿ' ಅಂತೇನಾದರೂ ಚೀರಿಕೊಂಡರೆ ... ಬಾಯ್ಮುಚ್ಚಿಕೊಂಡು ಓಂ ರಘುನಾಥ ...ಯೇ ನಮಃ' ಅಂತ ಧ್ಯಾನ ಮಾಡಿ, ಎಲ್ಲಾ ...ಗುತ್ತೆ' ಅಂತ ಗದರಿಸುತ್ತಾರೆ.

...ಂತಾ ತಿಕ್ಕಲುತನ!

...ವ ಸೀಮೆಯ ಚಿಕಿತ್ಸಾ ವಿಧಾನ?

...ಪಸಗುಡಿ ಪೊಲೀಸರು ಈ ರಘುನಾಥ ಗುರೂಜಿ ...ಲೋರಪಿದ್ಯಾ, ಪಾರಂಗತನ ಬಗ್ಗೆ ಈಗಲೇ ಒಂದು ... ಉತ್ತಮ.

● ಪಾರ್ವತೀಶ

ಕೆಜೆಪಿ: ಸಿದ್ದಲಿಂಗು-ಶೋಭಾ ಕಿತ್ತಾಟ

ಅಸೆಂಬ್ಲಿ ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ದಿನದಿಂದ ದಿನಕ್ಕೆ ಬಂಡಾಯಗಾರರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಅದರಲ್ಲೂ ಮುಖ್ಯವಾಗಿ ಮೊನ್ನೆ ಮೊನ್ನೆಯಷ್ಟೇ ಹುಟ್ಟಿಕೊಂಡ ಯಡಿಯೂರಪ್ಪ ನೇತೃತ್ವದ ಕರ್ನಾಟಕ ಜನತಾ ಪಕ್ಷದಲ್ಲಂತೂ ಬಂಡಾಯದ ಸುಂಟರಗಾಳಿಯೇ ಎದ್ದಿದೆ.



ಸಿದ್ದಲಿಂಗು

ಅಧಿಕಾರಾರೂಢ ಬಿಜೆಪಿ ಪಕ್ಷದಲ್ಲಿ ಎಂದಿನಂತೆ ಒಳಗೊಳಗೇ ಬಂಡಾಯ ಮತ್ತು ಅಸಮಾಧಾನದ ಅಲೆ ಇದ್ದೇ ಇದೆ. ಅದನ್ನು ಶಮನಮಾಡುವುದರಲ್ಲೇ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಶಕ್ತಿ ವಿನಿಯೋಗವಾಗುತ್ತಿದೆ. ಕಾಂಗ್ರೆಸ್ ಪಕ್ಷ ಕೂಡ ಇಂತಹ ಬಂಡಾಯಕ್ಕೆ ಹೊರತಾಗಿಲ್ಲ. ಹಾಗೆ ನೋಡಿದರೆ ಅಪ್ಪ-ಮಕ್ಕಳ ಪಕ್ಷ ಎಂದೇ ಕುಖ್ಯಾತಿ ಪಡೆದಿರುವ ದೇವೇಗೌಡರ ನೇತೃತ್ವದ ಜಾತ್ಯತೀತ ಜನತಾ ದಳದಲ್ಲಿ ಬಹಿರಂಗವಾದ ಬಂಡಾಯದ ಚಟುವಟಿಕೆಯಾಗಲೀ, ಹೇಳಿಕೆಗಳಾಗಲೀ ಕಾಣಸಿಗುವುದಿಲ್ಲ.

ಕೆಜೆಪಿಯಲ್ಲಿ ಯಡಿಯೂರಪ್ಪನವರ ನಂತರದ ಸ್ಥಾನಕ್ಕಾಗಿ ಒಂದು ರೀತಿಯಲ್ಲಿ ಪರೋಕ್ಷವಾದ ತೆರೆಮರೆಯಲ್ಲಿ ಪೈಪೋಟಿ ನಡೆಯುತ್ತಲೇ ಇದೆ. ಯಡಿಯೂರಪ್ಪನವರು ಕೆಜೆಪಿಯನ್ನು ಆರಂಭಿಸಿದಾಗ ಮಾಜಿ ಲೋಕಸಭಾ ಸದಸ್ಯ ಧನಂಜಯ ಕುಮಾರ್ ಮತ್ತು ಅವರ ಅನುಯಾಯಿಗಳು ಲೈಮ್‌ಲೈಟ್‌ನಲ್ಲಿದ್ದರು. ಆದರೆ ಯಾವಾಗ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಶೋಭಾ ಕರಂದ್ಲಾಜೆ ಕೆಜೆಪಿ ಸೇರಿಕೊಂಡರೋ ಆಗ ಇಡೀ ಕೆಜೆಪಿಯೇ "ಶೋಭಾಮಯ ವಾಯಿತು". ಕೆಜೆಪಿಯ ಕಾರ್ಯಕರ್ತರು ಈಕೆಯ ಕಾರ್ಯವೈಖರಿ, ಮಾತಿನ ಶೈಲಿ ಬಗ್ಗೆ ಅನೇಕ ಕಡೆ ಅಪಸ್ವರವನ್ನೆತ್ತಲಾರಂಭಿಸಿದರು.

ಶೋಭಾ ಕರಂದ್ಲಾಜೆಯೇ ಕೆಜೆಪಿ ಪಕ್ಷದ ಮೊದಲ ಶತ್ರು ಎಂದು ಸ್ವತಃ ಕೆಜೆಪಿ ಕಾರ್ಯಕರ್ತರೇ ಈಗ ಮಾತನಾಡಲು ಆರಂಭಿಸಿದ್ದಾರೆ. ಅಂದರೆ ಕೆಜೆಪಿಯಲ್ಲಿ ಈಗ ಯಡಿಯೂರಪ್ಪನವರ ನಂತರ ಬಹುತೇಕ ಎಲ್ಲಾ ಸಭೆ ಸಮಾರಂಭಗಳಲ್ಲಿ, ವೇದಿಕೆಗಳಲ್ಲಿ ಈಕೆಯೇ ಶೋಭಾಯಮಾನವಾಗುತ್ತಾರೆ. ಈ ಕಾರಣಕ್ಕಾಗಿಯೇ ಆರಂಭದಲ್ಲಿ ಸಖತ್ ಆಗಿ ಮಿಂಚುತ್ತಿದ್ದ ಧನಂಜಯ ಕುಮಾರ್ ಆಗಲಿ, ಲಕ್ಷ್ಮೀನಾರಾಯಣರಾಗಲೀ ಈಗ ಎಲ್ಲಿಯೂ ಕಾಣಿಸಿಕೊಳ್ಳುತ್ತಿಲ್ಲ.

"ಶೋಭಾ ಅವರು ಬಹುತೇಕ ಎಲ್ಲಾ ವಿಷಯಗಳಲ್ಲೂ ಮೂಗು ತೂರಿಸುತ್ತಾರೆ. ಅವರು ಪಕ್ಷದ ಕಾರ್ಯಕರ್ತರನ್ನು ಪ್ರೀತಿವಿಶ್ವಾಸದಿಂದ ನೋಡದೇ ದರ್ಪ ಮತ್ತು ಅಹಂಕಾರದಿಂದಲೇ ಕಾರ್ಯಕರ್ತರೊಂದಿಗೆ ವರ್ತಿಸುತ್ತಾರೆ. ಇದೆಲ್ಲವೂ ಒಂದು ಪಕ್ಷ ಅಧಿಕಾರದಲ್ಲಿದ್ದಾಗ ಸಹಿಸಬಹುದು. ಹೊಸ ಪಕ್ಷವನ್ನು ಕಟ್ಟುವ ಸಂದರ್ಭದಲ್ಲಿ ಯಾವುದೇ ನಾಯಕ ಅಥವಾ ನಾಯಕಿ ಕಾರ್ಯಕರ್ತರೊಂದಿಗೆ ನಯವಿನಯದಿಂದ ಕೆಲಸ ಮಾಡಿದರೆ ಮಾತ್ರ ಪಕ್ಷದ ಸಂಘಟನೆ ಗಟ್ಟಿಯಾಗುತ್ತದೆ" ಎಂದು ಅನೇಕ ನಾಯಕರು ಶೋಭಾ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಕೆಲವು ಹಿರಿಯರು ತುಂಬ ಸೂಕ್ಷ್ಮವಾಗಿ ಶೋಭಾ ವರ್ತನೆಯನ್ನು ಹೈಕಮಾಂಡ್ ಅಂದರೆ ಯಡಿಯೂರಪ್ಪನವರ ಗಮನಕ್ಕೆ ತಂದರೆ ಮತ್ತೆ ಕೆಲವರು ಬಹಿರಂಗವಾಗಿ ಆಕೆಯನ್ನು ಟೀಕಿಸಲಾರಂಭಿಸಿದ್ದಾರೆ. ಅಷ್ಟೇ ಅಲ್ಲ, "ಈ ಶೋಭಮ್ಮ ಖಂಡಿತವಾಗಿಯೂ ಕೆಜೆಪಿ ಪಕ್ಷವನ್ನು ಹೈಜಾಕ್ ಮಾಡಿ ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳುತ್ತಾಳೆ" ಎಂದು ಆರೋಪಿಸುತ್ತಿದ್ದಾರೆ. ಯಡಿಯೂರಪ್ಪನವರ ಬಲಗೈ ಮತ್ತು ಎಡಗೈ ಬಂಟರಾಗಿ ಬೇರೆ ಯಾರೂ ಅವರ ಸಮೀಪವೂ ಹೋಗದಂತೆ ನೋಡಿಕೊಳ್ಳುವ ಶೋಭಾ ಕೆಜೆಪಿ ಪಕ್ಷವನ್ನು ತನ್ನ ಖಾಸಗಿ ಸ್ವತ್ತಿನ ತರಹ ನೋಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ.

ಇದಕ್ಕೆ ಪೂರಕವಾಗಿ ಕಳೆದ ವಾರ ಮೈಸೂರಿನಲ್ಲಿ ಯಡಿಯೂರಪ್ಪನವರ ಬಲಗೈ ಬಂಟ ಎಂದೇ ಕುಖ್ಯಾತನಾಗಿರುವ ಸಿದ್ದಲಿಂಗಸ್ವಾಮಿ ಒಂದು ಪತ್ರಿಕಾಗೋಷ್ಠಿಯನ್ನೇ ಕರೆದು ಶೋಭಾ ವಿರುದ್ಧದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುವ ಹಂತಕ್ಕೆ ಹೋಗಿದ್ದ. ಅಂದು ಸಿದ್ದಲಿಂಗಸ್ವಾಮಿ ಜೊತೆಗೆ ಆತನ ಶಿಷ್ಯ ಮಲ್ಲೇಶ್ ಕೂಡಾ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾರೆ ಎಂದು ಮೈಸೂರು ಪತ್ರಕರ್ತರಿಗೆ ಸುದ್ದಿಗಳು ಬಂದಿದ್ದವು. ಕೊನೆ ಕ್ಷಣದಲ್ಲಿ ಆ ಬಂಡಾಯದ ಪತ್ರಿಕಾಗೋಷ್ಠಿ ರದ್ದಾಗಿಹೋಯಿತು. ಅವರಿಬ್ಬರ ಬಂಡಾಯದ ಕಾವನ್ನು ಶಮನಗೊಳಿಸಿದ್ದು ಯಡ್ಡಿಗೆ ತುಂಬಾ ಆಪ್ತರಾಗಿರುವ ಸುತ್ತೂರು ಸ್ವಾಮಿಗಳು ಎಂಬ ಸುದ್ದಿ ಹರಡಿದೆ.

ಈ ಹಿಂದೆ ಸಿದ್ದಲಿಂಗಸ್ವಾಮಿ ಸುತ್ತೂರು ಮಠದ ಪುಸ್ತಕಾಲಯದಲ್ಲಿ ಚಾಕರಿ ಮಾಡುತ್ತಿದ್ದವನು. ಆದ್ದರಿಂದ ಆತನನ್ನು ತಮ್ಮ ಬಳಿ ಕರೆದುಕೊಂಡ ಸುತ್ತೂರು ಸ್ವಾಮಿಗಳು "ಲಿಂಗಾಯತರ ಹೊಸ ಪಕ್ಷ ಶುರುವಾಗುತ್ತಿರುವ ಇಂತಹ ಸಂದರ್ಭದಲ್ಲಿ ಹೀಗೆ ಬಹಿರಂಗವಾಗಿ ಬಂಡಾಯ ಘೋಷಿಸುವುದು ಚೆನ್ನಾಗಿರುವುದಿಲ್ಲ, ಅದರಿಂದ ಪಕ್ಷಕ್ಕೆ ಹಾನಿ ಆಗುತ್ತದೆ. ಈಗ ನೀನು ಸುಮ್ಮನಿರು. ನಾನೇ ಯಡಿಯೂರಪ್ಪನಿಗೆ ಶೋಭಾ ಬಗ್ಗೆ ಬುದ್ಧಿವಾದ ಹೇಳುತ್ತೇನೆ ಎಂದರಂತೆ" ಎಂಬ ಮಾತು ಮೈಸೂರಿನ ಕೆಜೆಪಿ ವಲಯದಲ್ಲಿ ಕೇಳಿಬರುತ್ತಿದೆ.

ಅಂದರೆ ಕೆಜೆಪಿ ಒಳಗಿನ ಬಂಡಾಯಕ್ಕೆ ಮುಖ್ಯ ಕಾರಣ ಶೋಭಾ ಕರಂದ್ಲಾಜೆ. ಯಡಿಯೂರಪ್ಪ ಬಿಜೆಪಿಗೆ ಗುಡ್‌ಬೈ ಹೇಳುವ ಮೊದಲೇ ಮೈಸೂರು ಮತ್ತು ಚಾಮರಾಜನಗರದಲ್ಲಿ ಸಿದ್ದಲಿಂಗಸ್ವಾಮಿ ಕೆಜೆಪಿ ಪರವಾಗಿ ತೆರೆಮರೆಯಲ್ಲಿ ಕೆಲಸವನ್ನು ಆರಂಭಿಸಿದ್ದ. ಬಹುತೇಕ ಎಲ್ಲ ಸಭೆ ಸಮಾರಂಭಗಳಿಗೆ ಹಣ ನೀಡಿ, ಎರಡೂ ಜಿಲ್ಲೆಗಳಲ್ಲಿ ಸಿದ್ದಲಿಂಗಸ್ವಾಮಿ ಪಕ್ಷವನ್ನು ಬಲಪಡಿಸುತ್ತಾ ಬಂದಿದ್ದ. ರಾಜ್ಯೋತ್ಸವ ಮತ್ತು ಗಣೇಶೋತ್ಸವ ಸಂದರ್ಭದಲ್ಲಂತೂ ಸಿದ್ದಲಿಂಗಸ್ವಾಮಿ ಗ್ರಾಮಗ್ರಾಮಗಳಲ್ಲೂ ದುಡ್ಡು ಹಂಚಿ ಕೆಜೆಪಿಯ ಅಸ್ತಿತ್ವಕ್ಕೆ ಗಟ್ಟಿಯಾದ ಬುನಾದಿ ಹಾಕಿದ್ದ.

ಸಿದ್ದಲಿಂಗಸ್ವಾಮಿಯ ಈ ಕೆಲಸಕ್ಕೆ ಮಲ್ಲೇಶ್ ಸಾಥ್ ನೀಡಿದ್ದ. ಇವರಿಬ್ಬರೂ ರಾತ್ರಿಹಗಲು ದುಡಿದು ಅಲ್ಲಿ ಪಕ್ಷವನ್ನು ಸಂಘಟಿಸುತ್ತಾ ಬಂದಿದ್ದರು. ಈ ಹಿನ್ನೆಲೆಯಲ್ಲಿ ಬರುವ ಚುನಾವಣೆಗೆ ಈ ಎರಡು ಜಿಲ್ಲೆಗಳಲ್ಲಿ ಯಾರ್‍ಯಾರು ಸ್ಪರ್ಧಿಸಬೇಕೆಂದು ನಿರ್ಧರಿಸುವ ಹಕ್ಕು ತನ್ನದು ಎಂದೇ ಸಿದ್ದಲಿಂಗಸ್ವಾಮಿ ನಂಬಿದ್ದ.

ಆದರೆ ಇತ್ತೀಚೆಗೆ ದಿಢೀರನೆ ಮೈಸೂರಿಗೆ ಭೇಟಿ ನೀಡಿದ ಶೋಭಾ ಕರಂದ್ಲಾಜೆ ತನ್ನದೇ ಆದ ಕಾರ್ಯಕರ್ತರ ಸಭೆಯನ್ನು ಏರ್ಪಡಿಸಿ ಆ ಎರಡೂ ಜಿಲ್ಲೆಗಳಲ್ಲಿ ಪಕ್ಷ ಸಂಘಟನೆಗೆ ಮುಂದಾದರು. ಅಷ್ಟೇ ಅಲ್ಲ, ಈ ಹಿಂದೆ ಆಕೆ ಮಂತ್ರಿಯಾಗಿದ್ದಾಗ ಆಕೆಯೇ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರಿಂದ ಬಹುತೇಕ ಎಲ್ಲಾ ಕಾರ್ಯಕರ್ತರ ಜೊತೆ ನಿಕಟ ಸಂಬಂಧವನ್ನು ಆಕೆ ಹೊಂದಿದ್ದಾರೆ. ಅವತ್ತು ಸಭೆಗೆ ಅಂತವರನ್ನೆಲ್ಲ ಕರೆಸಿ, ಅವರೊಂದಿಗೆ ಚರ್ಚಿಸಿ, ಕೆಲವರಿಗೆ ಅಸೆಂಬ್ಲಿ ಟಿಕೆಟ್ ಭರವಸೆಯನ್ನು ಶೋಭ ನೀಡಿದರು. ಅದರಲ್ಲೂ ಮುಖ್ಯವಾಗಿ ವಿಧಾನ ಪರಿಷತ್ ಸದಸ್ಯರಾಗಿರುವ ಮಲ್ಲಿಕಾರ್ಜುನ ಅವರನ್ನು ಶೋಭಾ ಬೆಂಬಲಿಸಿದ್ದನ್ನು ನೋಡಿ ಸಿದ್ದಲಿಂಗಸ್ವಾಮಿ ಮತ್ತು ಅವರ ಪಟಾಲಂಗೆ ಎಲ್ಲಿಲ್ಲದ ಸಿಟ್ಟು ಬಂದಿದೆ. "ನಾವು ಕಳೆದ ಒಂದು ವರ್ಷದಿಂದ ಕಾರ್ಯಕರ್ತರನ್ನು ಸಂಘಟಿಸಿ, ಪಕ್ಷವನ್ನು ವೃದ್ಧಿಪಡಿಸಿದರೆ, ಪುತ್ತೂರಿನ ಈ ಮಹಿಳೆ ಬಂದು ರಾಜಕೀಯ ಮಾಡುವುದನ್ನು ನಾವು ಹೇಗೆ ತಾನೆ ಸಹಿಸಲು ಸಾಧ್ಯ?" ಎಂದು ಸ್ವಾಮಿ ಪಟಾಲಂ ಬಂಡಾಯವೆದ್ದಿದೆ.



ಅಷ್ಟೇ ಅಲ್ಲ, ಒಂದು ಮೂಲದ ಪ್ರಕಾರ ಶೋಭಾ ಕರಂದ್ಲಾಜೆಯನ್ನು ಸಿದ್ದಲಿಂಗಸ್ವಾಮಿ ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡ ಎಂದೂ, "ನೀನು ಈಗ ಪ್ರತಿನಿಧಿಸುತ್ತಿರುವ ಯಶವಂತಪುರದಿಂದಲೂ ಗೆಲ್ಲಲು ಸಾಧ್ಯವಿಲ್ಲ. ಆದ್ದರಿಂದ ನೀನೇ ಈಗ ಹೊಸ ಕ್ಷೇತ್ರಕ್ಕೆ ಹುಡುಕಾಡುತ್ತಿದ್ದೀಯಾ. ಅಂಥವಳು ನನ್ನ ಕ್ಷೇತ್ರಕ್ಕೆ ಬಂದು ಮೂರು ತೂರಿಸುತ್ತಿದ್ದೀಯಾ? ಮೊದಲು ಯಶವಂತಪುರದಿಂದ ಗೆದ್ದು ಬಾ" ಎಂದೂ ಟೀಕಿಸಿದನಂತೆ.

ಹೀಗೆ ಇದೇ ಮೊದಲ ಬಾರಿಗೆ ಯಡಿಯೂರಪ್ಪ ತನ್ನ ನೂತನ ಪಕ್ಷದಲ್ಲಿ ಬಂಡಾಯದ ಬಿಸಿಯನ್ನು ಎದುರಿಸುತ್ತಿದ್ದಾರೆ. ಒಂದು ಕಡೆ ತನ್ನ ಬಲಗೈ ಬಂಟನಂತಿರುವ ಸಿದ್ದಲಿಂಗಸ್ವಾಮಿಯನ್ನು ಎದುರು ಹಾಕಿಕೊಳ್ಳುವ ಪರಿಸ್ಥಿತಿಯಲ್ಲಿ ಅವರಿಲ್ಲ. ಇನ್ನೊಂದು ಕಡೆ ತನ್ನ ಅತ್ಯಂತ ಆಪ್ತ ಮತ್ತು ನಂಬುಗೆಯ ವ್ಯಕ್ತಿಯಾದ ಶೋಭಾಳನ್ನೂ ದೂರಮಾಡುವ ಸ್ಥಿತಿಯಲ್ಲೂ ಅವರಿಲ್ಲ. ಹೀಗಾಗಿ ಎರಡೂ ಬಣದವರು ಪರಸ್ಪರ ಮಣ್ಣೆರೆಚುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗಲೇ ಅವರ ಸಂಪುಟದಲ್ಲಿದ್ದ ಶೋಭಾ ಕರಂದ್ಲಾಜೆ ಕಾರ್ಯವೈಖರಿಗಳನ್ನು ಅನೇಕ ಹಿರಿಯ ಸಚಿವರು ವಿರೋಧಿಸಿದ್ದರು. ಒಮ್ಮೆ ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಶೋಭಾಳನ್ನು ಸಂಪುಟದಿಂದ ಕೈಬಿಡದಿದ್ದರೆ ಬಿಜೆಪಿಯ ಸರ್ಕಾರವನ್ನೇ ಉರುಳಿಸುವ ಬೆದರಿಕೆಯನ್ನು ಬಳ್ಳಾರಿಯ ರೆಡ್ಡಿ ಗ್ಯಾಂಗ್ ಒಡ್ಡಿತ್ತು. ಈಗ ಅಂತಹದ್ದೇ ಬಂಡಾಯ ಕೆಜೆಪಿಯಲ್ಲಿ ಭುಗಿಲೆದ್ದಿದೆ ಎಂದರೆ ತಪ್ಪಾಗಲಾರದು.

ಶೋಭಾ ಕರಂದ್ಲಾಜೆಯ ಈ "ಹಿಟ್ಲರ್ ಪ್ರವೃತ್ತಿಯನ್ನು" ವಿರೋಧಿಸಿ, ಪಕ್ಷ ಸೇರುವ ದಿನಾಂಕವನ್ನು, ಹಲವಾರು ಬಿಜೆಪಿ ಮಂತ್ರಿಗಳು ಮತ್ತು ಶಾಸಕರು ಮುಂದೂಡುತ್ತಿದ್ದಾರೆ ಎಂಬ ಸುದ್ದಿ ಕೇಳಿಬರುತ್ತಿದೆ. ಹೀಗಾಗಿ ಕೆಜೆಪಿ ಪಕ್ಷ ಗಟ್ಟಿಯಾಗಿ ತಳವೂರುವ ಮೊದಲೇ ಶೋಭಾ ಕರಂದ್ಲಾಜೆ ಅವರ ಕೃಪೆಯಿಂದಾಗಿ ದಿನದಿಂದ ದಿನಕ್ಕೆ "ವೀಕ್" ಆಗುತ್ತಾಹೋಗುತ್ತಿದೆ.

ಕೆಜೆಪಿ ಪಕ್ಷದ ಕತೆ ಹೀಗಾದರೆ ಬಿಜೆಪಿ ಕತೆ ಇನ್ನೂ ಚಿಂತಾಜನಕವಾಗಿದೆ. ಇದೇ ಮೊದಲ ಬಾರಿಗೆ ಬಿಜೆಪಿಯಲ್ಲಿ ಒಬ್ಬ ವ್ಯಕ್ತಿ ಎರಡು ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ಅನೇಕ ತಿಂಗಳುಗಳೇ ಆಗಿಹೋಗಿದೆ. ಅಂದರೆ ಉಪಮುಖ್ಯಮಂತ್ರಿ ಸ್ಥಾನ ಮತ್ತು ರಾಜ್ಯಾಧ್ಯಕ್ಷ ಸ್ಥಾನವನ್ನು ಏಕಕಾಲದಲ್ಲಿ ಆನಂದಿಸುತ್ತಿರುವ ಈಶ್ವರಪ್ಪ ಒಂದು ಹುದ್ದೆಯನ್ನು ಬಿಡಲೇಬೇಕು ಎಂಬುದನ್ನು ಬಿಜೆಪಿ ನಾಯಕರ ಅನಿಸಿಕೆ ಮಾತ್ರವಲ್ಲ ಅದು ಆ ಪಕ್ಷದ ನಿಯಮಗಳ ಉಲ್ಲಂಘನೆ ಕೂಡ. ಆದರೆ ಅದ್ಯಾವುದರ ಬಗ್ಗೆಯೇ ಈಶ್ವರಪ್ಪ ಕ್ಯಾರೆ ಅನ್ನುತ್ತಿಲ್ಲ. ಆದರೀಗ ಚುನಾವಣೆ ಸಮೀಪಿಸುತ್ತಿರುವುದರಿಂದ ಈಶ್ವರಪ್ಪನವರನ್ನು ಒಂದು ಹುದ್ದೆಯಿಂದ ಕೈಬಿಡಲು ಬಿಜೆಪಿ ಹೈಕಮಾಂಡ್ ಚಿಂತಿಸುತ್ತಿದೆಯಂತೆ.

ಈಶ್ವರಪ್ಪ ಉಪಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲು ಯಾರೂ ತಯಾರಿ ಇರಲಿಲ್ಲ, ಏಕೆಂದರೆ ಆಗ ಪಕ್ಷದಲ್ಲೇ ಇದ್ದ ರೆಬಲ್ ಸ್ಟಾರ್ ಯಡಿಯೂರಪ್ಪನವರ ಆಕ್ರೋಶವನ್ನು ಎದುರಿಸಬೇಕಾಗುತ್ತದೆ ಎಂಬ ಭಯ ಹೆಚ್ಚಿನ ಬಿಜೆಪಿ ನಾಯಕರಲ್ಲಿ ಇತ್ತು. ಆದರೆ ಯಾವಾಗ ಯಡಿಯೂರಪ್ಪ ಪಕ್ಷ ಬಿಟ್ಟು ಹೊರ ನಡೆದರೋ ಈಗ ಬಿಜೆಪಿಯಲ್ಲಿ ಅವರಿದ್ದ ಬಲ ಕೂಡ ದಿನದಿಂದ ದಿನಕ್ಕೆ ಕುಗ್ಗಿಹೋಯಿತು. ಈ ಹಿನ್ನೆಲೆಯಲ್ಲಿ ಈಗ ಬಿಜೆಪಿಯ ರಾಜ್ಯಾಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಅನೇಕರು ಆಕಾಂಕ್ಷಿಗಳಾಗಿದ್ದಾರೆ.

ಅದರಲ್ಲೂ ಮುಖ್ಯವಾಗಿ ಮಾಜಿ ಮುಖ್ಯಮಂತ್ರಿ ಸದಾನಂದಗೌಡರು ಅಧ್ಯಕ್ಷ ಗಿರಿಯ ಹುದ್ದೆಯ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಬಿಜೆಪಿ ಹೈಕಮಾಂಡ್ ಯಾಕೋ ಸದಾನಂದಗೌಡರಿಗೆ ಅಧ್ಯಕ್ಷ ಪದವಿ ನೀಡಲು ಮೀನಾಮೇಷ ಎಣಿಸುತ್ತಿದೆ. ಇತ್ತೀಚೆಗೆ ನಡೆದ ಕೋರ್ ಕಮಿಟಿ ಸಭೆಗೆ ಗೈರುಹಾಜರಾಗುವ ಮುಖಾಂತರ ಸದಾನಂದ ಗೌಡರು ತಮ್ಮ ಅಸಮಾಧಾನ ಮತ್ತು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಆದರೆ ಗೌಡರ ಹಿಂದೆ ಹಿಂಬಾಲಕರು ಇಲ್ಲದೆ ಅವರೊಬ್ಬ ಒನ್‌ಮ್ಯಾನ್ ಆರ್ಮಿ ಆಗಿರುವುದರಿಂದ ಅವರ ಬಗ್ಗೆ ಹೈಕಮಾಂಡ್ ತಲೆಕೆಡಿಸಿಕೊಳ್ಳುತ್ತಿಲ್ಲ.

ಈ ಮಧ್ಯೆ ಉಪಮುಖ್ಯಮಂತ್ರಿ ಸ್ಥಾನದಿಂದ ಸ್ವಲ್ಪದರಲ್ಲೇ ವಂಚಿತರಾದ ಗೋವಿಂದ ಕಾರಜೋಳ ಕೂಡಾ ತುಂಬಾ ಗಂಭೀರವಾಗಿ ಅಧ್ಯಕ್ಷ ಸ್ಥಾನಕ್ಕೆ ಪ್ರಯತ್ನ ಮಾಡುತ್ತಲೇ ಇದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ಕಾರಜೋಳ ಅವರನ್ನು ಪಕ್ಷದ ಅಧ್ಯಕ್ಷ ಮಾಡಿದರೆ ಎಷ್ಟು ಲಾಭವಾಗಬಹುದು ಎಂಬ ಲೆಕ್ಕಾಚಾರವನ್ನು ಹೈಕಮಾಂಡ್ ನೋಡುತ್ತಿದೆ.

ಇದೆಲ್ಲದರ ನಡುವೆ ಬಿಜೆಪಿಯ ಒಳಜಗಳ ಮತ್ತು ಬಂಡಾಯ ಯಾವ ಹಂತಕ್ಕೆ ತಲುಪಿದೆ ಎಂದರೆ ಕೊನೆ ಕ್ಷಣದಲ್ಲಿ ಪ್ರಹ್ಲಾದ್ ಜೋಷಿ, ನವೀನಕುಮಾರ್ ಕಟೀಲ್ ಮತ್ತು ಗೋವಿಂದ ಕಾರಜೋಳ ಇವರೆಲ್ಲರ ಹೆಸರುಗಳು ಮೂಲೆಗುಂಪಾಗಿ ಉಪಮುಖ್ಯಮಂತ್ರಿ ಆರ್. ಅಶೋಕ್ ಪಕ್ಷದ ರಾಜ್ಯಾಧ್ಯಕ್ಷ ಆಗುವ ಸಾಧ್ಯತೆ ಕೇಳಿಬರುತ್ತಿದೆ. ಈಗಾಗಲೇ ಲೋಕಸಭಾ ಸದಸ್ಯರಾಗಿ ದೆಹಲಿ ನಾಯಕರ ಜೊತೆ ನಿಕಟ ಸಂಪರ್ಕವನ್ನು ಹೊಂದಿರುವ ತನ್ನದೇ ಬ್ರಾಹ್ಮಣ ಜನಾಂಗಕ್ಕೆ ಸೇರಿದ ಪ್ರಹ್ಲಾದ್ ಜೋಷಿ ಅಧ್ಯಕ್ಷರಾದರೆ ನಾಳೆ ಜೋಷಿ ತನ್ನ ರಾಜಕೀಯ ಜೀವನಕ್ಕೆ ಮುಳ್ಳಾಗಬಹುದು ಎಂಬ ಭಯ ಅನಂತಕುಮಾರ್ ಅವರದ್ದು. ಆದ್ದರಿಂದ ಅನಂತಕುಮಾರ್ ಈಗ ಉಪಮುಖ್ಯಮಂತ್ರಿ ಅಶೋಕರನ್ನು ರಾಜ್ಯಾಧ್ಯಕ್ಷ ಮಾಡುವಂತೆ ಹೈಕಮಾಂಡ್‌ಅನ್ನು ಒತ್ತಾಯಿಸುತ್ತಿದ್ದಾರಂತೆ.

ಒಕ್ಕಲಿಗ ಜನಾಂಗದ ಮೇಲೆ ಹಿಡಿತವನ್ನು ಸಾಧಿಸಿರುವ ಅಶೋಕ್ ಉತ್ತಮ ಸಂಘಟಕರೂ ಹೌದು. ಜೊತೆಗೆ ಚುನಾವಣೆಗೆ ಬೇಕಾದ ಹಣವನ್ನೂ ಸಂಗ್ರಹಿಸುವ ತಾಕತ್ತನ್ನು ಹೊಂದಿರುವವರು. ಇಂತಹ ವಿಷಯಗಳಲ್ಲಿ ಪ್ರಹ್ಲಾದ್ ಜೋಷಿ, ಕಾರಜೋಳ, ನವೀನ್‌ಕುಮಾರ್ ಕಟೀಲ್, ಸದಾನಂದಗೌಡ ಮೊದಲಾದವರಿಗೆ ಅಶೋಕ್ ಅವರಿಗಿರುವಷ್ಟು ಶಕ್ತಿ ಇಲ್ಲ ಎಂದರೆ ತಪ್ಪಾಗಲಾರದು.

ಅಂದರೆ ಇತ್ತ ಬಿಜೆಪಿ ಮೇಲೆ ಅನಂತಕುಮಾರ್ ತನ್ನ ಹಿಡಿತ ಗಟ್ಟಿಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಅತ್ತ ಶೋಭಾ ಕರಂದ್ಲಾಜೆ ಇಡೀ ಕೆಜೆಪಿ ಪಕ್ಷವನ್ನೇ ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಳ್ಳಲು ಯತ್ನಿಸುತ್ತಿದ್ದಾರೆ. ಇವರಿಬ್ಬರಿಂದಾಗಿ ಎರಡೂ ಪಕ್ಷಗಳಲ್ಲಿ ಬಂಡಾಯ ಮತ್ತು ಅಸಮಾಧಾನದ ಹೊಗೆಯಾಡುತ್ತಿದೆ.

● ರೇಣು

ಹೊಳಲ್ಕೆರೆ: ಆಂಜನೇಯರ ಕೈ ಹಿಡಿಯುತ್ತಾರೆಯೇ ಜನ



ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಈಗ ಶಾಸಕನೇ ಇಲ್ಲ. ಕಳೆದ ಬಾರಿ ಬಿಜೆಪಿಯಿಂದ ಗೆದ್ದು ಬಂದಿದ್ದ ಎಂ.ಚಂದ್ರಪ್ಪ ಯಡಿಯೂರಪ್ಪನ ಕೆಜೆಪಿ ಸೇರುವ ಭರದಲ್ಲಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಗೂ ಮುನ್ನವೇ 'ಮಾಜಿ ಶಾಸಕ'ರಾಗಿದ್ದಾರೆ.

ಈತ ಹಾಲಿ ಶಾಸಕನಾಗಿದ್ದಾಗಲೂ ಹೊಳಲ್ಕೆರೆ ಕ್ಷೇತ್ರಕ್ಕೆ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ಆದರೂ "ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾಮಗಾರಿಗಳೇ ನನ್ನ ಕೈಹಿಡಿಯುತ್ತವೆ" ಎಂಬ ನಂಬಿಕೆ ಚಂದ್ರಪ್ಪನದ್ದು. ವಾಸ್ತವವಾಗಿ ತಾನು ಶಾಸಕನಾದ ತರುವಾಯ ಪಕ್ಷದ ಕಾರ್ಯಕರ್ತರು ಮತ್ತು ಸಾರ್ವಜನಿಕರೊಂದಿಗೆ ದುರಹಂಕಾರದಿಂದ ನಡೆದುಕೊಂಡಿದ್ದು ತನ್ನನ್ನು ಮಾಜಿ ಮಾಡುತ್ತದೆ ಎಂಬ ಪರಮಸತ್ಯವನ್ನು ಆತ ಅರ್ಥಮಾಡಿಕೊಂಡಂತಿಲ್ಲ.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ ಈ ಬಾರಿ ಯಾರನ್ನು ಹೊಡೆದು ಕೆಡವುತ್ತದೆ, ಯಾರ ಕೈಹಿಡಿದು ಎತ್ತುತ್ತದೆ ಎನ್ನುವುದೇ ಚಿದಂಬರ ರಹಸ್ಯವಾಗಿದೆ. ಈ ಕ್ಷೇತ್ರ ಒಮ್ಮೆ ಗೆಲ್ಲಿಸಿದವರನ್ನು ಎರಡನೆ ಬಾರಿಗೆ ಗೆಲ್ಲಿಸಿದ ಉದಾಹರಣೆಯಿಲ್ಲ. ಈ ಒಂದು ವಿಚಿತ್ರ ಲಾಜಿಕ್‌ನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಬರುವ ಚುನಾವಣೆಯಲ್ಲಿ ಚಂದ್ರಪ್ಪ ಸೋಲುವುದು 'ಖಚಿತ'ವಾಗುತ್ತದೆ.


ಆದರೆ ರಾಜಕೀಯ ತರ್ಕ ಬೇರೆಯದ್ದಾಗಿದೆ. 2008ಕ್ಕೆ ಮುನ್ನ ಈ ಕ್ಷೇತ್ರ ಸಾಮಾನ್ಯ ಕ್ಷೇತ್ರವಾಗಿತ್ತು. ಅಲ್ಲಿಯತನಕ ಎಲ್ಲಾ ಚುನಾವಣೆಗಳಲ್ಲಿ ಗೆದ್ದವರು ತಾಳ್ಯದ ಮಂಜುನಾಥ, ತಿಮ್ಮಣ್ಣ, ಶಿವಪುರದ ರಮೇಶ, ಬಂಡೇಬೊಮ್ಮೇನಹಳ್ಳಿ ಪರಮೇಶ್ವರಪ್ಪ, ತಿಪ್ಪೇರುದ್ರಪ್ಪ ತರಹದ ಲಿಂಗಾಯತರು. ಇಲ್ಲಿ ಲಿಂಗಾಯತರೇ ಬಹುಸಂಖ್ಯಾತರಾಗಿದ್ದು ಯಾರು ಗೆಲ್ಲಬೇಕೆಂದರೂ ಈ ಸಮುದಾಯದ ಮತಗಳನ್ನು ಅವಲಂಬಿಸಬೇಕಿತ್ತು. ಸಾಲದ್ದಕ್ಕೆ ಸಾಧುಸಧರ್ಮ ಪೀಠದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳ ಮರ್ಜಿಯೂ ಗೆಲ್ಲುವ ಅಭ್ಯರ್ಥಿಯ ಮೇಲಿರುತ್ತಿತ್ತು. ಹಾಗಾಗಿ ಒಂದು ಜಾತಿ ಮತ್ತು ಮಠದ ಕೃಪಾಶೀರ್ವಾದ ಪಡೆದವರು ಚುನಾವಣೆಯಲ್ಲಿ ನಿರಾಯಾಸವಾಗಿ ಗೆದ್ದುಬಿಡುತ್ತಿದ್ದರು.

ಆದರೀಗ ಈ ರಾಜಕೀಯ ಲೆಕ್ಕಾಚಾರಗಳು ಬೇರೆ ಆಗಿವೆ. ಈ ಕ್ಷೇತ್ರದಲ್ಲಿ ಸಾದು ಲಿಂಗಾಯತರ ಮತಗಳಷ್ಟೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಗೊಲ್ಲರ ಮತಗಳು ಇವೆ. ಈ ಹಿಂದುಳಿದ ವರ್ಗಗಳು ಒಂದಾಗಿದ್ದರೆ ಎಂದೋ ಅಧಿಕಾರವನ್ನು ಲಿಂಗಾಯತರಿಂದ ಕಸಿದುಕೊಳ್ಳಬಹುದಿತ್ತು. ಆದರೆ ಲಿಂಗಾಯತರು ಉಳಿದ ಜಾತಿಗಳ ನಡುವಿನ ಒಗ್ಗಟ್ಟನ್ನು ಒಡೆದು ಆಳುವ ತಂತ್ರವನ್ನು ರೂಪಿಸಿದ್ದರಿಂದ ಅವರೇ ಅಧಿಕಾರವನ್ನು ಚಲಾಯಿಸುತ್ತಾ ಬಂದರು.

ಇಂಥಾ ಸನ್ನಿವೇಶದಲ್ಲೇ ಉಮಾಪತಿ ಕ್ಷೇತ್ರದ ರಾಜಕೀಯ ರಂಗವನ್ನು ಪ್ರವೇಶಿಸಿದರು. ಗೊಲ್ಲರ ಸಮುದಾಯದ ಉಮಾಪತಿ ಲಿಂಗಾಯತರಲ್ಲದ ಹಿಂದುಳಿದ, ದಲಿತ ಸಮುದಾಯಗಳನ್ನು ಒಂದುಗೂಡಿಸುತ್ತಲೇ ಲಿಂಗಾಯತ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೂರು ಬಾರಿ ಶಾಸಕರಾದರು. ಹಾಗಂತ ಉಮಾಪತಿಗೆ ಸಿರಿಗೆರೆ ಜಗದ್ಗುರುವಿನ ಕೃಪಾಶೀರ್ವಾದವಿತ್ತು ಎಂದು ಭಾವಿಸಬೇಕಾಗಿಲ್ಲ. ಉಮಾಪತಿ ಸ್ಪರ್ಧಿಸಿದಾಗಲೆಲ್ಲ ಮಠವೇ ಉಮಾಪತಿಯೆದುರು ಸ್ಪರ್ಧೆಗಿಳಿದಂತೆ ಕೆಲಸ ಮಾಡಿದರೂ ಉಮಾಪತಿಗೆ ಜಯ ಸಿಗುತ್ತಿತ್ತು.

ಇಂಥಾ ಜಾತಿ ಜಿದ್ದಿನ ನಡುವೆಯೇ 2008 ಚುನಾವಣೆಯಿಂದ ಕ್ಷೇತ್ರ ಎಸ್‌ಸಿ ಮೀಸಲು ಕ್ಷೇತ್ರವಾಯಿತು. ಆದರೆ ದುರಂತ ಎಂತಹದ್ದೆಂದರೆ ಇಲ್ಲಿಂದ ಈಗಲೂ ಯಾರೇ ಗೆಲ್ಲಬೇಕೆಂದರೂ ಲಿಂಗಾಯತ ಮತಗಳೇ ನಿರ್ಣಾಯಕವಾಗುತ್ತವೆ. ಕಳೆದ ಬಾರಿ ಬಿಜೆಪಿಯಲ್ಲಿದ್ದ ಯಡಿಯೂರಪ್ಪನ ಪರ ರಾಜ್ಯದಲ್ಲಿ ಅಲೆ ಬೀಸಿದ್ದರಿಂದ ಕಮಲ ಪಕ್ಷದ ಅಭ್ಯರ್ಥಿ ಚಂದ್ರಪ್ಪ ಕಾಂಗ್ರೆಸ್‌ನ ಆಂಜನೇಯ ಅವರ ಎದುರು ನಿರಾಯಾಸವಾಗಿ ಗೆದ್ದುಬಿಟ್ಟರು.

ಆಂಜನೇಯ ಈಗ ಮತ್ತೆ ಕಾಂಗ್ರೆಸ್‌ನಿಂದ ಸ್ಪರ್ಧಿಸುವುದು ಖಚಿತವಾಗುತ್ತಿದೆ. ಬಿಜೆಪಿಯನ್ನು ತೊರೆದಿರುವ ಚಂದ್ರಪ್ಪ ಕೆಜೆಪಿಯಿಂದ ಸ್ಪರ್ಧಿಸಲಿದ್ದಾರೆ. ಹೀಗಾಗಿ ಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಮಂಜುನಾಥ್ ಪ್ರತಿನಿಧಿಸಲಿದ್ದಾರೆ. ಇನ್ನು ಜೆಡಿಎಸ್‌ನಿಂದ ಮಹದೇವಪ್ಪ ಸ್ಪರ್ಧಿಸುವ ಸೂಚನೆಗಳು ಕಂಡುಬಂದಿವೆ.



ಆಂಜನೇಯ ಮತ್ತು ಮಂಜುನಾಥ್ ಇಬ್ಬರೂ ಏಳೆಂಟು ಸಾವಿರ ಮತಗಳಿರುವ ಬೋವಿ ಸಮುದಾಯದವಾದರೆ ಚಂದ್ರಪ್ಪ ಮತ್ತು ಮಹದೇವಪ್ಪ ಕನಿಷ್ಟ ಮೂವತ್ತು ಸಾವಿರ ಮತಗಳಿರುವ ಮಾದಿಗ ಸಮುದಾಯದವರು. ಮೇಲುನೋಟಕ್ಕೆ ಇದು ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಚುನಾವಣೆ ಅನ್ನಿಸಿದರೂ ಯಾರದ್ದೇ ಗಲುವಿನಲ್ಲಿ ಲಿಂಗಾಯತರ ಮತಗಳು ನಿರ್ಣಾಯಕವಾಗಲಿವೆ.

ಶತಾಯಗತಾಯ ಗೆಲ್ಲಬೇಕೆಂದು ನಿರ್ಧರಿಸಿರುವ ಚಂದ್ರಪ್ಪ ಕೋಟಿಗಳ ಲೆಕ್ಕದಲ್ಲಿ ದುಡ್ಡು ಸುರಿದರೂ ಆತ ಗೆಲ್ಲುವುದು ಸುಲಭದ ಮಾತಲ್ಲ. ಹಾಗೆಯೇ ಮಹದೇವಪ್ಪ ಮೂರನೇ ಸ್ಥಾನ ಗಿಟ್ಟಿಸಿದರೇ ಅಚ್ಚರಿ ಪಡಬೇಕಾಗುತ್ತದೆ.

ಬಿಜೆಪಿ ಪರವಾಗಿ ಸ್ಪರ್ಧಿಸಲಿರುವ ಮಂಜುನಾಥ್ ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬಂದಿರುವ ವ್ಯಕ್ತಿ. ಈತ ಕರ್ನಾಟಕ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷನಾಗಿದ್ದರೂ ಆ ಬಡವರಿಗೆ ಸೇವೆ ಸಲ್ಲಿಸಿದ್ದು ಕಡಿಮೆಯೇ. ತಾನು ಮಾದಿಗ ಸಮುದಾಯದವನಾದರೂ ಸಾದು ಲಿಂಗಾಯತರ ಹುಡುಗಿಯನ್ನು ಪ್ರೀತಿಸಿ ಮದುವೆ ಆಗಿರುವುದರಿಂದ ಆಕೆಯ ಸಮುದಾಯ ಮತ್ತು ಮಠದ ಬೆಂಬಲ ತನಗೆ ಸಿಕ್ಕೇಸಿಗುತ್ತದೆ ಎಂದು ಮಂಜುನಾಥ್ ನಂಬಿರುವಂತಿದೆ.

ಈ ಕ್ಷೇತ್ರದಲ್ಲಿ ಪ್ರತಿ ಬಾರಿ ಇನ್ನೊಂದು ತರಹದ ವಿಚಿತ್ರ ನಡೆಯುತ್ತದೆ. ಅದೇನೆಂದರೆ ಕಳೆದ ಬಾರಿ ತಾವು ಸೋಲಿಸಿರುವವರ ಬಗ್ಗೆ ಮತದಾರರು ಅನುಕಂಪ ಪಡುವುದು. ಆಂಜನೇಯ 2008ರಲ್ಲಿ ಚಂದ್ರಪ್ಪನ ವಿರುದ್ಧ ಸೋತಿದ್ದರು. ಆದ್ದರಿಂದ ಕಳೆದ ಬಾರಿ ತನ್ನನ್ನು ಸೋಲಿಸಿದ್ದ ಮತದಾರರು ಈ ಬಾರಿ ತನ್ನ ಕೈ ಹಿಡಿಯುತ್ತಾರೆ ಎಂಬ ನಂಬಿಕೆ ಅವರದ್ದು.

ವಾಸ್ತವವೇನೆಂದರೆ ಕಳೆದ ಸಾರಿ ಸೋತ ನಂತ ಆಂಜನೇಯ ಕ್ಷೇತ್ರದಿಂದ ದೂರವಾಗಲಿಲ್ಲ. ಜೊತೆಗೆ ಅವರಿಗ ಸಿರಿಗೆರೆ ಮಠದೊಂದಿಗೆ ಅವಿನಾಭಾವ ಸಂಬಂಧವಿದ ಕಳೆದ ಬಾರಿ ಚಂದ್ರಪ್ಪನನ್ನು ಬೆಂಬಲಿಸಿದ್ದ ಮಠ ಈ ಅದರ ಬಗ್ಗೆ ಸಂಕಟ ಅನುಭವಿಸುತ್ತಿರು ವುದೂ ಆಂಜನೇಯ ಅವರಿಗ ನೆರವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಈಗಲ ಈ ಕ್ಷೇತ್ರದಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿ ಮಾದಿಗ ಸಮುದಾಯದವರನ್ನು - ಅ ಶಾಸಕನಾಗಿದ್ದರೂ - ಲಿಂಗಾಯತರ ಮುಕ್ತಮನಸ್ಸಿನಿಂದ ತಮ್ಮ ನಡುಮನೆ ಬಿಟ್ಟುಕೊಳ್ಳುವುದಿಲ್ಲ. ಗೊಲ್ಲರು ಇನ್ ಒಂದು ಹೆಜ್ಜೆ 'ಮುಂದೆ' ಹೋಗಿ ಮಾದಿ ಸಮುದಾಯದವರನ್ನು ತಮ್ಮ ಕೇರಿಯ ಒಳಗಡೆಗೂ ಬಿಟ್ಟುಕೊಳ್ಳುವುದಿಲ್ಲ.

ಈ ಕ್ಷೇತ್ರದಲ್ಲಿ ಲಿಂಗಾಯತರು ಮತ್ತು ಗೊಲ್ಲರ ಸಮಾನ ಸಂಖ್ಯೆಯಲ್ಲಿದ್ದು ಅವರೆಲ್ಲರ ಅಭಿಮಾನವನ್ ಆಂಜನೇಯ ಅವರು ಗಳಿಸಿದ್ದರೂ ಈ ಅಸ್ಪೃಶ್ಯ ಪದ್ಧ ಒಂದು ಅಡ್ಡಗೋಡೆಯಾಗಿದೆ. ಇದರ ಸೂಕ್ಷ್ಮತೆಯನ ಮನವರಿಕೆ ಮಾಡಿಕೊಂಡಿರುವ ಆಂಜನೇಯ ಕಾರಣಕ್ಕಾಗಿ ಗೊಲ್ಲರ ಕೇರಿಗೋ, ಲಿಂಗಾಯತರ ಗ್ರಾಮಗಳಿಗೋ ಹೋದರೂ ರಸ್ತೆಯಲ್ಲೋ, ಬೇವಿನಮರದ ಕಟ್ಟೆಯ ಮೇಲೋ ಕುಳಿತು, ನಿಂತು ಜನರೊಂದಿಗ ಮಾತನಾಡುವುದನ್ನು ರೂಢಿಸಿಕೊಂಡಿದ್ದಾರೆ. ಅವರ ಪ್ರವೃತ್ತಿ ಗೊಲ್ಲರನ್ನು ಮತ್ತು ಲಿಂಗಾಯತರನ್ನು ಮೆಚ್ಚಿಸಿದ ಈ ಎರಡು ಪ್ರಭಾವಿ ಸಮುದಾಯಗಳಲ್ಲದೆ ನಾಯಕರು ಮಾದಿಗರು ಮತ್ತು ಅಲ್ಪಸಂಖ್ಯಾತರೂ ಆಂಜನೇಯನ ಪರವಾಗಿದ್ದಾರೆ.

ಇಲ್ಲಿ ನಿರ್ಣಾಯಕವಾಗುವ ಲಿಂಗಾಯತರ ಮತಗಳ ಶೇಕಡ 30 ರಷ್ಟು ಆಂಜನೇಯ ಗಳಿಸಿದರೂ ಅವರು ಶಾಸಕರಾಗುವುದು ಗ್ಯಾರಂಟಿ. ಇದನ್ನು ಅರ್ಥ ಮಾಡಿಕೊಂಡಿರುವ ಸಿರಿಗೆರೆ ಮಠವೂ ಈ ಬಾರಿ ಆಂಜನೇಯರ ಪರವಹಿಸುವ ಮಾತು ಕೇಳಿಬರುತ್ತಿದೆ.

● ಟಿ.ಎನ್.ಷಣ್ಮು

ಪ್ರೇಮಿಗಳ ದಿನದಂದು ಪ್ರೇಮಿಯನ್ನೇ ಕೊಂದ ಕೊಲೆಗಾತಿ ಗಂಡನೊಂದಿಗೆ ಜೈಲು ಸೇರಿದಳು




ಅವತ್ತು ಪ್ರೇಮಿಗಳ ದಿನ. ಪ್ರೇಮಿಗಳು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ದಿನ. ತನ್ನ ಪ್ರೇಮವನ್ನು ಪ್ರೇಯಸಿಯೊಂದಿಗೆ ವಿನಿಮಯ ಮಾಡಿಕೊಳ್ಳಲು ಬಂದ ಯುವಕನಿಗೆ ತನ್ನ ಪ್ರಿಯತಮೆ ಸಿಗುವುದಿರಲಿ, ಆತ ತನ್ನ ಪ್ರಾಣವನ್ನೇ ಕಳೆದುಕೊಂಡ...

ಇಂತಹ ಘಟನೆಯೊಂದು ಚಿಕ್ಕಮಗಳೂರು ಜಿಲ್ಲೆಯ ಕಳಸಾಪುರ ಗ್ರಾಮದಲ್ಲಿ ಫೆ.14ರಂದು ನಡೆದಿದೆ.

ಇಲ್ಲಿನ ರಾಜನಸಿರಿಯೂರು ಗ್ರಾಮದ ಕೊಟ್ರೂರೇಗೌಡ ಹಾಗೂ ಯಶೋಧ ದಂಪತಿಗಳ ಪುತ್ರ ದಿಲೀಪ್ ಎಂಬಾತನೇ ತನ್ನ ಪ್ರೇಯಸಿಯ ಮೋಸದ ಜಾಲದಲ್ಲಿ ಬಿದ್ದು ಹೆಣವಾಗಿದ್ದಾನೆ. ಆತ ಎಂಜಿನಿಯರ್ ಪದವೀಧರ. ಎದುರು ಮನೆ ಹುಡುಗಿ ಮೀನಾಕ್ಷಿ ಎಂಬಾಕೆಯನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ. ಟೀಚರ್ ಆಗಿದ್ದ ಮೀನಾಕ್ಷಿ ದಿಲೀಪನನ್ನು ಕೊನೆಗೆ ಚೀಟ್ ಮಾಡಿ ಅವನ ಸಾವಿಗೆ ಕಾರಣಳಾದಳು.

ಬಾಲ್ಯದ ದಿನಗಳಿಂದಲೂ ದಿಲೀಪ್ ಮತ್ತು ಮೀನಾಕ್ಷಿ ನಡುವೆ ಸ್ನೇಹವಿತ್ತು. ಅವರಿಬ್ಬರು ಪ್ರಾಯಕ್ಕೆ ಬಂದಾಗ ಆ ಸ್ನೇಹ ಪ್ರೇಮವಾಗಿ ಪರಿವರ್ತನೆಗೊಂಡಿತು. ಇದು ಗೊತ್ತಾಗುತ್ತಿದ್ದಂತೆ ಮೀನಾಕ್ಷಿಯ ತಂದೆ ಮಲ್ಲೇಗೌಡ ಮತ್ತು ತಾಯಿ ಗಂಗಮ್ಮ ವಿರೋಧ ವ್ಯಕ್ತಪಡಿಸಿದರು.


ಮೀನಾಕ್ಷಿಗೆ ಏನನ್ನಿಸಿತೋ ಆಕೆ ದಿಲೀಪನೊಂದಿಗಿನ ಸಂಬಂಧವನ್ನು ಮುರಿದುಹಾಕಲು ಯತ್ನಿಸಿದಳು. ದಿಲೀಪನಿಂದ ಆದಷ್ಟು ದೂರವಿರಲು ಪ್ರಯತ್ನಿದಳು. ಆದರೆ ಅಪ್ಪಟ ಗ್ರಾಮೀಣ ಹುಡುಗ ದಿಲೀಪ್ ತನ್ನ ಚೊಚ್ಚಲ ಪ್ರೇಮಕಥನವನ್ನು ಅರ್ಧಕ್ಕೆ ಮೊಟಕುಗೊಳಿಸಲು ಒಪ್ಪಿಕೊಳ್ಳಲಿಲ್ಲ. ಇದು ಮೀನಾಕ್ಷಿಗೆ ನುಂಗಲಾರದ ತುತ್ತಾಯಿತು. ಅದೇ ಹೊತ್ತಿಗೆ ಮೀನಾಕ್ಷಿಗೆ ತನ್ನ ಸಹೋದರ ಲೋಹಿತ್‌ನ ಸ್ನೇಹಿತನೊಬ್ಬನ ಪರಿಚಯವಾಯಿತು. ಬೇಲೂರು ತಾಲೂಕಿನ ಸಾಣೇಹಳ್ಳಿ ಮೂಲದ ಆ ಸ್ನೇಹಿತನ ಹೆಸರು ಪ್ರತಾಪ್. ಬೆಂಗಳೂರಿನ ಬಿಬಿಎಂಪಿಯಲ್ಲಿ ಅಕೌಂಟೆಂಟ್ ಹುದ್ದೆಯಲ್ಲಿದ್ದವನು.



ಕೊಲೆಗಾರ ಪ್ರತಾಪ್

ಇದೆಲ್ಲದರ ನಡುವೆ ಮೀನಾಕ್ಷಿಯ ಹೆತ್ತವರು ಮಗಳಿಗೆ ವರನ ಅನ್ವೇಷಣೆಗಿಳಿದರು. ಆಗ ಸಹೋದರ ಲೋಹಿತನೇ ತನ್ನ ತಂಗಿಯನ್ನು ಯಾಕೆ ತನ್ನ ಸ್ನೇಹಿತ ಪ್ರತಾಪನಿಗೆ ಕೊಟ್ಟು ಮದುವೆ ಮಾಡಬಾರದೆಂಬ ಪ್ರಸ್ತಾಪವನ್ನು ಇಟ್ಟ. ಇದಕ್ಕೆ ಮೀನಾಕ್ಷಿ ಮತ್ತು ಪ್ರತಾಪನ ತಂದೆತಾಯಂದಿರು ಒಪ್ಪಿಗೆ ಕೊಟ್ಟರು. ಎರಡೂ ಕುಟುಂಬಗಳು ತಾಂಬೂಲ ಬದಲಾಯಿಸಿಕೊಂಡು ಫೆಬ್ರವರಿ 15 ರಂದು ವಿವಾಹ ಕಾರ್ಯ ನಡೆಸಲು ನಿರ್ಧರಿಸಿದರು.

ಆದರೆ ದಿಲೀಪ್ ಮಾತ್ರ ಮೀನಾಕ್ಷಿಯ ಬೆನ್ನು ಬಿಡದ ಬೇತಾಳದಂತಾಗಿದ್ದ. ಆಕೆಯನ್ನು ಬಿಟ್ಟು ತಾನು ಬದುಕುವುದಿಲ್ಲ ಎಂದು ಬಡಬಡಾಯಿಸಿದ. ಮೀನಾಕ್ಷಿಗೆ ದೊಡ್ಡ ತಲೆನೋವಾದ. ಆಗ ಆಕೆ ದಿಲೀಪ್ ತನಗೆ ಕಾಟ ಕೊಡುತ್ತಿರುವ ಬಗ್ಗೆ ತನ್ನನ್ನು ಮದುವೆ ಆಗಲಿರುವ ಪ್ರತಾಪನಿಗೆ ಹೇಳಿದಳು. ತನ್ನನ್ನು ಆತನಿಂದ ಬಚಾವುಗೊಳಿಸುವಂತೆ ದುಂಬಾಲು ಬಿದ್ದಳು. ಪ್ರಾಯಶಃ ವಿಲನ್ ದಿಲೀಪ್‌ನಿಂದ ತನ್ನ ಭಾವಿ ಪತ್ನಿ ಹೀರೋಯಿನ್ ಮೀನಾಕ್ಷಿಯನ್ನು ರಕ್ಷಿಸುವ ಹೀರೋ ತಾನು ಎಂದು ಪ್ರತಾಪ ಭ್ರಮಿಸಿದನೋ ಏನೋ. ಒಟ್ಟಿನಲ್ಲಿ ದಿಲೀಪನನ್ನು ಮುಗಿಸಲು ಪ್ರತಾಪ್ ನಿರ್ಧರಿಸಿದ.



ಹತ್ಯೆಯಾದ ದಿಲೀಪ

ಬೆಂಗಳೂರಿನ ತನ್ನ ಮೂವರು ಸ್ನೇಹಿತರಾದ ನರಸಿಂಹರಾಜು, ವಿನಯ್ ಮತ್ತು ಪರಮೇಶ್ ಎಂಬುವವರನ್ನು ಚಿಕ್ಕಮಗಳೂರಿಗೆ ಕರೆಸಿಕೊಂಡ. ನಾಲ್ವರೂ ಸೇರಿ ಒಂದು ಪಕ್ಕಾ ಪ್ಲಾನ್ ಹೆಣೆದು ದಿಲೀಪನನ್ನು ಫೆಬ್ರವರಿ 14ರಂದು ಮುಗಿಸಲು ರೆಡಿ ಆದರು.

ಅಂದು ಪ್ರೇಮಿಗಳ ದಿನವಾಗಿದ್ದು ಹಂತಕರ ನೆರವಿಗೆ ಬಂತು. ಅವತ್ತು ಮೀನಾಕ್ಷಿಯಿಂದ ದಿಲೀಪನಿಗೆ ಫೋನ್ ಮಾಡಿಸಿದ ಹಂತಕರು "ನನ್ನ ನಿನ್ನ ಮದುವೆಗೆ ನನ್ನ ತಂದೆತಾಯಿ ಒಪ್ಪುವುದಿಲ್ಲ. ನನಗೆ ಬೇರೆಯವನೊಂದಿಗೆ ಮದುವೆ ನಿಶ್ಚಯ ಮಾಡಿದ್ದಾರೆ. ತಕ್ಷಣ ನೀನು ಕಳಸಾಪುರ ಸೇತುವೆ ಬಳಿಗೆ ಬಂದು ಬಿಡು. ನಾವಿಬ್ಬರೂ ಎಲ್ಲಿಗಾದರೂ ಓಡಿಹೋಗಿ ಬದುಕೋಣ" ಎಂದು ಮೀನಾಕ್ಷಿ ಬಾಯಿಂದ ಹೇಳಿಸಿದ್ದಾರೆ.



ಕೊಲೆಗೆ ಸಹಕರಿಸಿದ ವಿನಯ್



ಪರಮೇಶ್




ನರಸಿಂಹ

...ನ್ನಗಿರಿ: ಪೀಕಲಾಟದಲ್ಲಿ ಮಾಡಾಳು ವಿರುಪಾಕ್ಷಪ್ಪ



...ನ್ನಗಿರಿ ವಿಧಾನಸಭಾ ಕ್ಷೇತ್ರದ ತುಂಬ ಚುನಾವಣೆಯ ...ಏರುವಾಗಿದೆ. ಹಾಲಿ ಬಿಜೆಪಿ ಶಾಸಕ ಮಾಡಾಳು ...ಕ್ಷಪ್ಪ ಇಲ್ಲಿಯತನಕ ಬಿಜೆಪಿಗೆ ರಾಜೀನಾಮೆ ...ದ್ದರೂ ಅವರೇ ಬರುವ ಚುನಾವಣೆಯಲ್ಲಿ ...ೂರಪ್ಪನ ಕೆಜೆಪಿಯ ಅಧಿಕೃತ ಅಭ್ಯರ್ಥಿ ಎಂದು ...ಂಬಾ ಪ್ರಚಾರವಾಗಿದೆ. ಅದರೊಂದಿಗೆ ವಿರುಪಾಕ್ಷಪ್ಪ ...ಮಾಡಲಿರುವ ಸ್ಥಾನಕ್ಕೆ ಸಾದು ಲಿಂಗಾಯತರನ್ನೇ ...ಡುವ ಕಸರತ್ತೂ ಬಿಜೆಪಿಯಲ್ಲಿ ಶುರುವಾಗಿದೆ. ...ರೇ ಜೆಡಿಎಸ್ ಪರವಾಗಿ ವದಿಗೆರೆ ರಮೇಶ ...ವುದು ಖಚಿತವಾಗಿದ್ದು ಅವರು ... ಹಲವಾರು ಸುತ್ತಿನ ಪ್ರಚಾರ ...ವಾಗಿದೆ.



...ಬ್ಬರ ಮಧ್ಯೆ ಕಾಂಗ್ರೆಸ್ ಪಕ್ಷದ ...ಯಾರು ಎಂಬುದೂ ಇಲ್ಲಿಯ ...ಸ್ಪಷ್ಟವಾಗಿಲ್ಲ. ಮಾಜಿ ಕಾಂಗ್ರೆಸ್ ...ವಡ್ನಾಳು ರಾಜಣ್ಣ "ನಾನೇ ಈ ... ಅಭ್ಯರ್ಥಿ" ಎನ್ನುತ್ತಿದ್ದರೆ ...ಶಾಸಕ ಮಹಿಮಾ ಪಟೇಲ್ ...ನಾನೇ ಅಧಿಕೃತ ಉಮೇದು ...ನ್ನುತ್ತಾ ಆಗಾಗ್ಗೆ ಕ್ಷೇತ್ರದಲ್ಲಿ ತಮ್ಮ ... ತೋರಿಸಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದಾರೆ.

ಬದಲಾವಣೆ ಬಯಸುವ ಮತದಾರ

ಈ ಕ್ಷೇತ್ರದ ವಿಚಿತ್ರ ಪ್ರವೃತ್ತಿ ಎಂತಹದ್ದೆಂದರೆ ಇತರೆ ಕ್ಷೇತ್ರಗಳಂತೆ ಇಲ್ಲಿಯೂ ಅಭ್ಯರ್ಥಿಗಳ ಜಾತಿ ಮುಖ್ಯವಾಗಿದ್ದರೂ ಅದಕ್ಕೇ ಜೋತು ಬೀಳದೆ ಇಲ್ಲಿನ ಮತದಾರ ಒಮ್ಮೆ ಗೆದ್ದವರನ್ನೇ ಮತ್ತೆ ಗೆಲ್ಲಿಸುವ ಗೋಜಿಗೆ ಹೋಗುವುದಿಲ್ಲ. ಆದ್ದರಿಂದ ಇಲ್ಲಿಂದ ಸತತವಾಗಿ ಎರಡು ಬಾರಿ ಗೆದ್ದವರು ವಿರಳ.


ಈ ಕ್ಷೇತ್ರ ಬಹುಸಂಖ್ಯಾತ ಲಿಂಗಾಯತರ ಹಿಡಿತದಲ್ಲಿದ್ದರೂ ಇಲ್ಲಿನ ಹಿಂದುಳಿದ ವರ್ಗ, ದಲಿತ ಮತ್ತು ಅಲ್ಪಸಂಖ್ಯಾತ ಮತಗಳೂ ಗೆಲುವಿಗೆ ಅನಿವಾರ್ಯ. ಆದರೂ ಇಲ್ಲಿಂದ ನಿರಂತರವಾಗಿ ಗೆಲ್ಲುತ್ತಾ ಬಂದವರು ಲಿಂಗಾಯತರು ಮಾತ್ರ. ಇಲ್ಲಿ ಸಾದು ಲಿಂಗಾಯತರು ಪ್ರಭಾವಿಗಳಾಗಿದ್ದರೂ ಬಣಜಿಗ ಪಂಗಡದ ಜೆ.ಹೆಚ್. ಪಟೇಲರನ್ನು ಮತದಾರರು ಹಲವೊಮ್ಮೆ ಗೆಲ್ಲಿಸುತ್ತಾ, ಕೆಲವೊಮ್ಮೆ ಸೋಲಿಸುತ್ತಾ ಬಂದರು.

ಪಟೇಲರು ಲಿಂಗೈಕ್ಯರಾದ ನಂತರ ಅವರ ಮಗ ಮಹಿಮಾ ಪಟೇಲ ಒಂದು ಬಾರಿ ಗೆದ್ದರು ನಿಜ. ಆದರೆ ಆನಂತರ ಅವರು ಎರಡು ಬಾರಿ ಸೋಲನ್ನನುಭವಿಸಿದರು. ಅದೇ ರೀತಿ ವಡ್ನಾಳು ರಾಜಣ್ಣ ಸಾದು ಲಿಂಗಾಯರಾಗಿದ್ದರೂ ಅದೇ ಜಾತಿಯ ಮತದಾರರು ಅವರಿಗೂ ಸೋಲಿನ ಸವಿ ಉಣಿಸಿದ್ದರು.

ವಿರುಪಾಕ್ಷಪ್ಪನಿಗೆ ಮಗನೆಂಬ ಶನಿ

ಹಾಲಿ ಬಿಜೆಪಿ ಶಾಸಕ ಮಾಡಾಳು ವಿರುಪಾಕ್ಷಪ್ಪ ಸದ್ಯದ ರಾಜಕೀಯ ಪಲ್ಲಟದ ಸುಳಿಯಲ್ಲಿ ಸಿಕ್ಕು ವಿಲವಿಲಾಂತ ಒದ್ದಾಡುತ್ತಿದ್ದಾರೆ. ಅವರು ಬಿಜೆಪಿಯಲ್ಲಿದ್ದರೂ ಯಡಿಯೂರಪ್ಪನ ಬೆಂಬಲಕ್ಕೆ ನಿಂತಿದ್ದರಿಂದ ಜಾತಿವಾದಿ ಎಂಬ ಪಟ್ಟ ಕಟ್ಟಿಕೊಳ್ಳುವಂತಾಗಿದೆ. ಅತ್ತ ಬಿಜೆಪಿಯನ್ನು ತೊರೆಯದೆ ಇತ್ತ ಕೆಜೆಪಿಯನ್ನು ಸೇರದೆ ಉಳಿದಿರುವ ಮಾಡಾಳು ವಿರುಪಾಕ್ಷಪ್ಪನವರಿಗೆ ಈ ಬಾರಿ ಲಿಂಗಾಯತರ ಮತಗಳು ಕೈ ಹಿಡಿಯುವುದು ಅನುಮಾನವೇ ಎಂಬಂತಾಗಿದೆ. ಅಲ್ಲದೆ ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತ ಮತದಾರರು ಅವರ ಜಾತಿರಾಜಕಾರಣದಿಂದ ಬೇಸತ್ತು ಬೇರೆ ಅಭ್ಯರ್ಥಿಗಳ ಕಡೆ ಮುಖ ಮಾಡುವಂತಾಗಿದೆ.

ರಾಜಕಾರಣಕ್ಕೆ ಎಂಟ್ರಿ ಕೊಡುವ ಮೊದಲು ಮಾಡಾಳು ವಿರುಪಾಕ್ಷಪ್ಪ ಗುತ್ತಿಗೆದಾರನಾಗಿದ್ದರು. ಹುಟ್ಟಾ ಕಾಂಗ್ರೆಸ್ಸಿಗನಾಗಿದ್ದ ವಿರುಪಾಕ್ಷಪ್ಪ ಆ ಪಕ್ಷದಿಂದಲೇ ಮಂಡಲ ಪಂಚಾಯತಿಯ ಸದಸ್ಯನಾಗಿ, ಅಧ್ಯಕ್ಷನಾಗಿ, ಆನಂತರ ಜಿಲ್ಲಾ ಪಂಚಾಯತಿಯ ಸದಸ್ಯನೂ ಆಗಿದ್ದರು. ಆದರೆ ಯಾವಾಗ ಅವರಿಗೆ 2008ರಲ್ಲಿ ಕಾಂಗ್ರೆಸ್ ಟಿಕೆಟ್ ಸಿಗಲ್ಲಿಲ್ಲವೋ ಆಗ ಅವರು ಬಿಜೆಪಿಗೆ ವಲಸೆ ಬಂದರು. ಅಲ್ಲಿಯತನಕ ಬಿಜೆಪಿ ಪರವಾಗಿ ಕ್ಷೇತ್ರದಲ್ಲಿ ದುಡಿದಿದ್ದ ಚೆಡ್ಡಿಗಳು, ಲಿಂಗಾಯತ ನಾಯಕರು ಮತ್ತು ಕಾರ್ಯಕರ್ತರು ಅವತ್ತು ವಿರುಪಾಕ್ಷಪ್ಪನ ಪರ ಕೆಲಸ ಮಾಡಿ ಅವರನ್ನು ಗೆಲ್ಲಿಸಿದ್ದರು.



ರಮೇಶ್ ವದೀಗೆರೆ

ಆದರೆ ಶಾಸಕನಾಗಿ ಗೆದ್ದ ನಂತರ ವಿರುಪಾಕ್ಷಪ್ಪನ ವರಸೆಯೇ ಬದಲಾಯಿತು. ಬಿಜೆಪಿಯ ಮೂಲ ನಿವಾಸಿಗರನ್ನು ಆರಂಭದಿಂದಲೂ ಕಡೆಗಣಿಸುತ್ತಲೇ ಬಂದ ವಿರುಪಾಕ್ಷಪ್ಪ ಅವರೆಲ್ಲರಿಗೆ ಪರ್ಯಾಯವಾಗಿ ಬೆಳೆಯುತ್ತಾ ಸ್ಥಳೀಯವಾಗಿ ಬಿಜೆಪಿ ಮೇಲಿನ ತನ್ನ ಹಿಡಿತವನ್ನು ಬಿಗಿಗೊಳಿಸಿಕೊಂಡರು.

ಅದೇ ಹೊತ್ತಿಗೆ ಅವರ ಮೊದಲನೆ ಮಗ ಮಲ್ಲಿಕಾರ್ಜುನ ತಂದೆಗಿಂತಲೂ ಪ್ರಬಲನಾಗಿ ಬೆಳೆಯಲಾರಂಭಿಸಿದ. ಇನ್ನೂ ಬಿಸಿ ರಕ್ತದ ಯುವಕನಾದ ಈ ಮಲ್ಲಿಕಾರ್ಜುನನ ಅಹಂಕಾರ ಎಂತಹದ್ದೆಂದರೆ ಅದು ಹಲವಾರು ಬಾರಿ ದುರಹಂಕಾರದ ಪರಮಾವಧಿಯೂ ಆಗಿ ಸಾರ್ವಜನಿಕವಾಗಿ ಪ್ರದರ್ಶನಗೊಂಡಿದೆ. ಎಷ್ಟರಮಟ್ಟಿಗೆಂದರೆ ಆತ ನಾಯಕ, ಉಪ್ಪಾರ ಮತ್ತು ದಲಿತ ಸಮುದಾಯದ ಮುಖಂಡರನ್ನು ಅವರ ಜಾತಿ ಹೆಸರು ಹಿಡಿದು ಅವಮಾನಿಸಿದ್ದಾನೆ.

ಅಷ್ಟೇ ಅಲ್ಲದೆ ಈ ಹಿಂದೆ ಜೆ.ಎಚ್.ಪಟೇಲ್, ವಡ್ನಾಳು ರಾಜಣ್ಣ, ಮಹಿಮಾ ಪಟೇಲ್ ಅವರನ್ನಲ್ಲದೆ ಸ್ವತಃ ತನ್ನ ತಂದೆ ವಿರುಪಾಕ್ಷಪ್ಪನವರನ್ನೂ ಚುನಾವಣೆಯಲ್ಲಿ ಗೆಲ್ಲಿಸಿದ್ದ ತನ್ನ ಸ್ವಜಾತಿ ಸಾದು ಲಿಂಗಾಯತ ಸಮುದಾಯದ ಹಿರಿಯ ತಲೆಮಾರಿನ ಮುಖಂಡರ ಎದುರು ಮಲ್ಲಿಕಾರ್ಜುನ ದುರಹಂಕಾರದಿಂದ ವರ್ತಿಸಿದ್ದಾನೆ. ವಿರುಪಾಕ್ಷಪ್ಪನೂ ತನ್ನ ಮಗನ ಇಂತಹ ವರ್ತನೆಗೆ ಕಡಿವಾಣ ಹಾಕುವ ಗೋಜಿಗೆ ಹೋಗಲಿಲ್ಲ. ಇದೆಲ್ಲ ವಿರುಪಾಕ್ಷಪ್ಪನ ರಾಜಕೀಯ ಹಿನ್ನಡೆಗೆ ಕಾರಣವಾದರೆ ಅಚ್ಚರಿ ಇಲ್ಲ.

ವಿರುಪಾಕ್ಷಪ್ಪ ಶಾಸಕನಾದ ತರುವಾಯ ಕ್ಷೇತ್ರದ ಉಸ್ತುವಾರಿಯನ್ನು ವಹಿಸಿಕೊಂಡ ಮಲ್ಲಿಕಾರ್ಜುನ ಚನ್ನಗಿರಿ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಹೆಚ್ಚಿನ ಕಾಮಗಾರಿಗಳಿಗೆ ತಾನೇ ಬೇನಾಮಿ ಗುತ್ತಿಗೆದಾರನಾದ. ಮಿಕ್ಕವನ್ನು ತನ್ನ ಕುಲಸ್ಥರಿಗೆ ಮತ್ತು ಸಂಬಂಧಿಕರಿಗೆ ನೀಡಿದ. ವಿರುಪಾಕ್ಷಪ್ಪನವರ ಹೆಂಡತಿಯ ಅಕ್ಕನ ಮಗ ನಾಗರಾಜ, ಸಂಬಂಧಿಕರಾದ ಶಿವರಾಜ, ಅಕ್ಕಕಟ್ಟಿ ರುದ್ರಪ್ಪ, ತಿಪ್ಪಗೊಂಡನಹಳ್ಳಿ ರಾಜು ಪಾಟೀಲ, ಅಣ್ಣನ ಮಗ ಉಮೇಶ, ಇವರೆಲ್ಲರ ಹೆಸರುಗಳಲ್ಲಿ ಅಕ್ರಮ ಕಾಮಗಾರಿಗಳನ್ನು ಮಾಡಲಾಗಿದೆ. ವಿರುಪಾಕ್ಷಪ್ಪ ಮತ್ತು ಅವರ ಮಗ ಮಲ್ಲಿಕಾರ್ಜುನನ ಇಂಥಾ ಸ್ವಜಾತಿ ಪ್ರೀತಿ ಮತ್ತು ರಕ್ತ ಸಂಬಂಧಿಗಳ ಹಟಾಲಂಪಡೆಯ ಉರುವಣಿಗೆಯಿಂದಲೇ ಇಲ್ಲಿನ ಲಿಂಗಾಯತ ನಾಯಕರು ರೋಸಿಹೋಗಿದ್ದಾರೆ.

ಎಲ್ಲರಲ್ಲೂ ಪೀಕಲಾಟ

ಸದ್ಯ ವಿರುಪಾಕ್ಷಪ್ಪನವರಿಗೆ ಬಿಜೆಪಿಯಿಂದ ಕೆಜೆಪಿಗೆ ಜಿಗಿಯುವುದೂ ಅಷ್ಟು ಸುಲಭವಾಗಿ ಉಳಿದಿಲ್ಲ. ಯಾಕೆಂದರೆ ಈಗಾಗಲೇ ಕೆಜೆಪಿಯೊಂದಿಗೆ ಗುರುತಿಸಿಕೊಂಡಿರುವ ವಿಜಯಕುಮಾರ್ ಎಂಬಾತ ವಿರುಪಾಕ್ಷಪ್ಪನ ಕಟ್ಟಾ ವಿರೋಧಿ. ವಿಚಿತ್ರವೆಂದರೆ ಈ ಹಿಂದೆ ಇದೇ ವಿಜಯಕುಮಾರ್ ವಿರುಪಾಕ್ಷಪ್ಪನ ಗೆಲುವಿಗೆ ಶ್ರಮಿಸಿದ್ದರು. ಈ ವಿಜಯಕುಮಾರ್ ಜಾತ್ಯಸ್ಥನಲ್ಲದೆ ಸಾದು ಲಿಂಗಾಯತರಲ್ಲೇ ಹೆಸರು ಮಾಡಿರುವಾತ. ಈತ ಈಗ ಕೆಜೆಪಿಯಲ್ಲಿ ಪ್ರಬಲವಾಗುತ್ತಿರುವುದು ವಿರುಪಾಕ್ಷಪ್ಪನಿಗೆ ಸಂಕಟ ತಂದಿಟ್ಟಿದೆ.

ಮಾಜಿ ಕಾಂಗ್ರೆಸ್ ಶಾಸಕ ವಡ್ನಾಳು ರಾಜಣ್ಣ ಕ್ಷೇತ್ರದಲ್ಲಿ ಹೆಸರು ಮಾಡಿರುವವರು. ಆದರೂ ಈ ಬಾರಿ ಇಲ್ಲಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟಿಗಾಗಿ ಕಸರತ್ತು ನಡೆಸುತ್ತಿದ್ದಾರೆ. ಜೆಡಿಎಸ್‌ನಿಂದ ವಲಸೆ ಬಂದ ಮಹಿಮಾ ಪಟೇಲ ಟಿಕೆಟಿನ ವಿಷಯದಲ್ಲಿ ರಾಜಣ್ಣರಿಗೆ ಪ್ರಬಲ ಪೈಪೋಟಿ ನೀಡಿದ್ದಾರೆ. ಹಲವು ಮೂಲಗಳ ಪ್ರಕಾರ ಮಹಿಮನಿಗೇ ಟಿಕೆಟು ಸಿಗುವ ಸಾಧ್ಯತೆಗಳಿವೆ. ಇದಕ್ಕೆ ಮಹಿಮಾ ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲರ ಮಗ ಎನ್ನುವುದು ಒಂದು ಕಾರಣವಾದರೆ, ದೆಹಲಿ ದೊರೆಸಾನಿ ಸೋನಿಯಾ ಗಾಂಧಿಯ ಆಶೀರ್ವಾದವೂ ಮಹಿಮಾಗೆ ಇದೆಯಂತೆ.

ಈ ಕಾರಣಕ್ಕೇ ಇತ್ತ ಕಾಂಗ್ರೆಸ್ ಟಿಕೆಟ್‌ಗೆ ವಡ್ನಾಳು ರಾಜಣ್ಣ ಪ್ರಯತ್ನಿಸುತ್ತಿರುವಾಗಲೇ ಅತ್ತ ವಿರುಪಾಕ್ಷಪ್ಪ ತೆರವು ಮಾಡಲಿರುವ ಬಿಜೆಪಿ ಟಿಕೆಟ್‌ಗೂ ತೆರೆಮರೆಯಲ್ಲೆ ತಂತ್ರಗಳನ್ನು ಶುರುಮಾಡಿದ್ದಾರೆ. ಆದರೆ ರಾಜಣ್ಣ ಕಾಂಗ್ರೆಸ್ ತೊರೆದು ಬಿಜೆಪಿ ಸೇರದಂತೆ ತಡೆಯಲು ಕಾಂಗ್ರೆಸ್ ನಾಯಕರೂ ಒಂದು ತಂತ್ರವನ್ನು ರೂಪಿಸಿದ್ದಾರೆ. ಅದರಂತೆ ಚನ್ನಗಿರಿಯ ಟಿಕೆಟ್ ಅನ್ನು ಮಹಿಮಾರಿಗೆ ನೀಡಿ, ಶಿವಮೊಗ್ಗೆಯಿಂದ ಈಶ್ವರಪ್ಪನ ರಾಜಣ್ಣರನ್ನು ಚುನಾವಣಾ ಕಣಕ್ಕೆ ಇಳಿಸುವುದು. ಆದರೆ ರಾಜಣ್ಣ ಚನ್ನಗಿರಿ ಬಿಟ್ಟು ಕದಲುವಂತೆ ಕಾಣಿಸುತ್ತಿಲ್ಲ.

ಈ ಎಲ್ಲ ಲೆಕ್ಕಾಚಾರಗಳ ಹಿನ್ನೆಲೆಯಲ್ಲಿ ಬರುವ ಚುನಾವಣೆಯಲ್ಲಿ ಕೆಜೆಪಿಯಿಂದ ಮಾಡಾಳು ವಿರುಪಾಕ್ಷಪ್ಪ ಕಾಂಗ್ರೆಸ್‌ನಿಂದ ಮಹಿಮಾ ಪಟೇಲ್, ಬಿಜೆಪಿಯಿಂದ ವಡ್ನಾಳು ರಾಜಣ್ಣ ಮತ್ತು ಜೆಡಿಎಸ್‌ನಿಂದ ವದೀಗೆರೆ ರಮೇಶ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ.

ಇದು ನಿಜವಾದರೆ ವಡ್ನಾಳು ರಾಜಣ್ಣ, ಮಾಡಾಳು ವಿರುಪಾಕ್ಷಪ್ಪ, ಮಹಿಮಾ ಪಟೇಲ್... ಈ ಮೂವರೂ ಪ್ರಬಲ ಲಿಂಗಾಯತ ಸಮುದಾಯದವರಾದ್ದರಿಂದ ಆ ಜಾತಿಯ ಮತಗಳು ಈ ಮೂವರ ನಡುವೆ ಹಂಚಿಹೋಗುತ್ತದೆ. ಅಷ್ಟೇ ಅಲ್ಲ, ಇಲ್ಲಿಯತನಕ ಈ ಕ್ಷೇತ್ರವನ್ನು ಲಿಂಗಾಯತ ಅಭ್ಯರ್ಥಿಗಳೇ ಆಳುತ್ತಾ ಬಂದಿರುವುದರ ಬಗ್ಗೆ ಇಲ್ಲಿನ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಈಗ ಅಸಮಾಧಾನಗೊಂಡಿದ್ದಾರೆ. ಅವರೆಲ್ಲರೂ ಒಗ್ಗಟ್ಟಾಗಿ ಜೆಡಿಎಸ್ ಅಭ್ಯರ್ಥಿ ವದೀಗೆರೆ ರಮೇಶ್‌ರನ್ನು ಬೆಂಬಲಿಸುವ ಸಾಧ್ಯತೆಗಳಿವೆ.

ಏನೇ ಆದರೂ ಈ ಬಾರಿಯ ವಿಧಾನಸಭಾ ಚುನಾವಣೆ ಚನ್ನಗಿರಿಯಲ್ಲಿ ಕುತೂಹಲ ಹುಟ್ಟಿಸಿದೆ. ಮೂವರು [illegible] ಮಾಜಿ ಶಾಸಕರುಗಳ ನಡುವೆ ಜೆಡಿಎಸ್‌ನ ವದೀಗೆರೆ ರಮೇಶ ಗೆಲ್ಲಬಹುದಾದ ಸಾಧ್ಯತೆಗಳನ್ನು [illegible].

● ಟಿ.ಎಸ್.ವೇಣು [illegible]

ಸಂಬಂಧಿಕರಿಗೆ 200 ರೂಪಾಯಿ ಬೆಲೆಬಾಳುವ ಸೀರೆ?!

[illegible] ವಿರುಪಾಕ್ಷಪ್ಪನವರ ಮೂರನೆ ಮಗ ಪ್ರಶಾಂತನ ಮದುವೆ ಇದೇ 20 ತಾರೀಖು ದಾವಣಗೆರೆಯ ಬಾಪೂಜಿ ಸಮುದಾಯ ಭವನದಲ್ಲಿ ಅದ್ದೂರಿಯಾಗಿ ನಡೆಯಿತು. [illegible] ಮದುವೆ ಅಧಿಕ [illegible] ಗಳನ್ನು ಮದುವೆಯಾದನು.

ಈ ಮದುವೆ ಸಂದರ್ಭದಲ್ಲಿ ಒಂದು ವಿಚಿತ್ರ ಪ್ರಕರಣ ನಡೆಯಿತು...


[illegible] ಸಂಬಂಧ ಹೊಂದಿರದ ಕಡ ಪೊಲೀಸರು 5,600 ಸೀರೆಗಳನ್ನು ವಶಪಡಿಸಿಕೊಂಡರು. ಅದೂ ಎಲ್ಲಿ? [illegible] ವಾಸಿಸುತ್ತಿರುವ ವಿರುಪಾಕ್ಷಪ್ಪನವರ ಸಂಬಂಧಿ [illegible] ಮನೆಯಲ್ಲಿ!!

[illegible] ವಶಪಡಿಸಿಕೊಂಡ ಸೀರೆಗಳ ಬಗ್ಗೆ [illegible] ಮದುವೆ ಸಂದರ್ಭದಲ್ಲಿ ನಮ್ಮ ಸಂಬಂಧಿಕರಿಗೆ ಕೊಡಲು ಖರೀದಿಸಿ [illegible]

[illegible] ಈಗ ಚನ್ನಗಿರಿಯ ಮತದಾರರು "[illegible] 200 ರೂಪಾಯಿ [illegible] ಸೀರೆಗಳನ್ನು ಹಂಚುವ ದುರ್ಗತಿ ನಮ್ಮ ಕೋಟ್ಯಾಧಿಪತಿ ಶಾಸಕರಿಗೆ ಯಾವಾಗ ಬಂತಪ್ಪಾ?" ಎಂದು ಮೂಗಿನ ಮೇಲೆ ಬೆಟ್ಟು ಇಟ್ಟು ನಗುತ್ತಿದ್ದಾರೆ!

...ನ್ನು ಕೇಳಿದ್ದೇ ತಡ, ಹಿಂದುಮುಂದು ನೋಡದ ...ತನ್ನ ದ್ವಿಚಕ್ರ ವಾಹನವನ್ನೇರಿ ವೇಗವಾಗಿ ಮೀನಾಕ್ಷಿ ...ಸ್ಥಳಕ್ಕೆ ದೌಡಾಯಿಸಿದ.

...ರೆ ಅಲ್ಲಿ ಮೀನಾಕ್ಷಿ ಆತನಿಗಾಗಿ ಕಾಯುತ್ತಿರಲಿಲ್ಲ, ... ನಾಲ್ವರು ಹಂತಕರ ರೂಪದಲ್ಲಿ ಸಾವು ಕಾದಿತ್ತು... ...ವುದೇ ಕ್ಷಣ ಮೀನಾಕ್ಷಿ ಬರುತ್ತಾಳೆಂದು ಭಾವಿಸಿ



ಕೊಲೆ ಮಾಡಿದ ಮರುದಿನವೇ ಹಸೆಮಣೆ ಏರಿದ ಪ್ರತಾಪ್ ಹಾಗೂ ಮೀನಾಕ್ಷಿ....

...ಮೇಲೆ ದಿಲೀಪ್ ಕಾಯುತ್ತಿದ್ದಾಗ ಕಾರೊಂದು ಬಂದು ಆತನಿದ್ದಲ್ಲಿ ನಿಂತುಕೊಂಡಿತು. ಕಾರ್ ...ನ ನಾಲ್ವರು ಕೆಳಗಿಳಿದು ದಿಲೀಪನ ಬಳಿ ... ಕಬ್ಬಿಣದ ರಾಡ್‌ಗಳಿಂದ ಆತನ ತಲೆಯನ್ನು ... ಛಳಿಸಿದರು. ಅವರ ದಾಳಿ ಹೇಗಿತ್ತೆಂದರೆ ...ಸ್ಥಳದಲ್ಲಿ ಸಾವಾದ. ಅದೊಂದು ಅಪಘಾತ, ... ಎಂದು ಪೊಲೀಸರ ದಾರಿ ತಪ್ಪಿಸಲು ...ಕರು ಆತನ ದೇಹವನ್ನು ರಸ್ತೆಯ ಮೇಲಿಂದ ...ದು ಭಾಗ [illegible].


...ರ ಕೊಲೆಯಾದ ಮರುದಿನವೇ ಪ್ರತಾಪ್ ಮತ್ತು ... ಮುಂದೆ ತಮ್ಮ ಬದುಕಿಗೆ ಯಾವ ಚಿಂತೆಯೂ ಇಲ್ಲ ಎಂಬ ನಂಬಿಕೆಯಲ್ಲಿ ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ಹಸೆಮಣೆ ಏರಿದರು. ಅಷ್ಟೇ ಅಲ್ಲ, ಇನ್ನು ಕೆಲವೇ ದಿನಗಳಲ್ಲಿ ಹನಿಮೂನಿಗೆ ಹೋಗಲು ಸಿದ್ಧತೆ ನಡೆಸಲಾರಂಭಿಸಿದರು.

ಆರಂಭದಲ್ಲಿ ಚಿಕ್ಕಮಗಳೂರು ಗ್ರಾಮಾಂತರ ಠಾಣೆಯ ಎಸ್ಸೈ ಮಧು ಕೂಡ ದಿಲೀಪನ ಸಾವು ಕೊಲೆಯಲ್ಲ ಬದಲಾಗಿ ಅಪಘಾತ ಎಂದೇ ನಂಬಿದರು. ಆದರೆ ದಿಲೀಪನ ತಾಯಿ ಯಶೋಧ ದೂರು ನೀಡಿ ಕೊಲೆ ಪ್ರಕರಣ ದಾಖಲಿಸುವಂತೆ ಪೊಲೀಸರ ಮೇಲೆ ಒತ್ತಡ ಹೇರಿದರು. ಕೊಲೆ ನಡೆದ ಸ್ಥಳದಲ್ಲಿ ದೊರೆತಿದ್ದ ಟವೆಲ್ ಮತ್ತು ಮೊಬೈಲ್ ಕರೆಗಳ ಜಾಡು ಹಿಡಿದ ವೃತ್ತನಿರೀಕ್ಷಕ ಕೃಷ್ಣರಾಜು ನೇತೃತ್ವದ ಪೊಲೀಸರ ತಂಡ ಕೇವಲ ಐದು ದಿನಗಳಲ್ಲಿ ಇಡೀ ಪ್ರಕರಣವನ್ನು ಬೇಧಿಸಿತು.

ಪರಿಣಾಮವಾಗಿ ನವದಂಪತಿಗಳಾದ ಮೀನಾಕ್ಷಿ ಮತ್ತು ಪ್ರತಾಪ ಹಾಗು ಆತನ ಮೂವರು ಮಿತ್ರರು ಇವತ್ತು ಕಂಬಿ ಎಣಿಸುತ್ತಿದ್ದಾರೆ.

● ಅಜೀಜ್ ಕಿರುಗುಂದ

ಮಲೆನಾಡಿನ ಬರಹಗಾರ ಅರ್ಷದ್ ಹುಸೇನ್ ಅವರು ಸೌದಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಬದುಕು-ಭಾವಗಳ ಕುರಿತಂತೆ ಹುಸೇನರು ಬಹು ರಂಜಕವಾಗಿ ಬರೆದಿರುವ ಲೇಖನಗಳು 'ಸೌದಿ ಎಂಬ ಕೌದಿಯೊಳಗೆ' ಎಂಬ ಪುಸ್ತಕವಾಗಿ ಪ್ರಕಟಗೊಂಡಿದೆ. ನಮ್ಮ ಓದುಗರಿಗಾಗಿ ಇಲ್ಲಿ ಹುಸೇನರ ಒಂದು ಲೇಖನವನ್ನು ಪ್ರಕಟಿಸಿದ್ದೇವೆ.



ತರಕಾರಿ ತಕರಾರು

ಶ್ರೀಮತಿ ಆನಂದಿ ಸದಾಶಿವರಾವ್ ಅವರ 'ಮಹಿಳೆ ಮತ್ತು ಉಳಿತಾಯ' ಲೇಖನ ಓದಿದ ಮೇಲೆ ನಮ್ಮ ಅನುಭವವೂ (ಪಟ್ಟ ಪಾಡೂ) ನೆನಪಿಗೆ ಬಂದಿತು. ಲೇಖಕಿಯವರು ತಮ್ಮ ಲೇಖನದಲ್ಲಿ ಒಂದೆಡೆ ಮಹಿಳೆಯರು ಸೇರಿ ತಮಗೆ ಬೇಕಾದ ದಿನಸಿ ತರಕಾರಿ ಇತ್ಯಾದಿಗಳನ್ನು ಸಗಟು ಕೊಂಡುಕೊಂಡು ಹಂಚಿಕೊಂಡಾಗ ಉಳಿತಾಯವಾಗುತ್ತದೆ ಎಂದು ವಿವರಿಸಿದ್ದಾರೆ. ಮೇಲ್ನೋಟಕ್ಕೆ ಇದು ಸರಿಯಾದ, ಅನುಸರಿಸಬಹುದಾದ ಸಲಹೆಯಂತೆ ಕಂಡರೂ ಇದರಲ್ಲಿ ಕೆಲವೊಂದು ತೊಡರುಗಳಿವೆ. ಈ ತೊಡರುಗಳನ್ನು ಸಮರ್ಥವಾಗಿ ಎದುರಿಸಿ ಉಳಿತಾಯ ಮಾಡಬಲ್ಲರೇ ಎಂದುದೇ ಒಂದು ಸವಾಲು. ನಾವಂತೂ ಈ ಸವಾಲು ಎದುರಿಸಲಾಗದೇ ಮಣ್ಣು ಮುಕ್ಕಿದ್ದೆವು.

ಸೌದಿಯಲ್ಲಿ ಎಲ್ಲಾ ತರಹದ ತರಕಾರಿಗಳು ಲಭ್ಯವಿದ್ದರೂ ಹೆಚ್ಚಿನವು ಅಲ್ಲೇ ಬೆಳೆದ, ಹೈಬ್ರಿಡ್ ತಳಿಗಳು. ಇವುಗಳು ನೋಡಲಿಕ್ಕೆ ಮಾತ್ರ ಸೊಗಸೇ ಹೊರತು ರುಚಿಯಲ್ಲಾಗಲೀ, ಸತ್ವದಲ್ಲಾಗಲೀ ನಮ್ಮ ಭಾರತದ ತರಕಾರಿಗಳಿಗೆ ಸಮವಲ್ಲ, ಭಾರತದಿಂದ ಆಮದಾದ ಕೆಲವು ತರಕಾರಿಗಳು ಲಭ್ಯವಿದ್ದರೂ ತುಸು ದುಬಾರಿ. ಅದೂ ಅಲ್ಲದೇ ಚಿಲ್ಲರೆ ಅಂಗಡಿಗಳಿಂದ ಕೊಳ್ಳಹೋದರೆ ಸರಿಸುಮಾರು 8 ರಿಯಾಲು ಕೇಜಿಗೆ. ಅದೇ ಒಂದು ಇಡಿಯ ಕೋಳಿಗೆ 9 ರಿಯಾಲು. ಹಾಗಾಗಿ ಹೆಚ್ಚಿನವರು ತರಕಾರಿ ಕೊಳ್ಳುವ ಬದಲು ಕೋಳಿಯನ್ನೇ ಅಪೇಕ್ಷಿಸುತ್ತಾರೆ. ಶುಂಠಿ ಮತ್ತು ಬೆಳ್ಳುಳ್ಳಿ ನೋಡಲು ದೊಡ್ಡ ದೊಡ್ಡ ಗಾತ್ರದಿಂದ ಮನಸೆಳೆದರೂ ನಾಲ್ಕು ಪಟ್ಟು ಮಸಾಲೆಗೂ ಊರಿನ ರುಚಿ ಬರುವುದಿಲ್ಲ, ನಗರದಿಂದ ಕೊಂಚ ದೂರದಲ್ಲಿರೋ ತರಕಾರಿ ಮಾರ್ಕೆಟ್‌ನಲ್ಲಿ ಸಗಟಾಗಿ ಕೊಂಡರೆ ತರಕಾರಿ ಸ್ವಲ್ಪ ಅಗ್ಗವಾಗಿ ಸಿಗುತ್ತದೆ. ಆದರೆ ಒಮ್ಮೆಲೆ ಐದು ಹತ್ತು ಕೇಜಿ ತರಕಾರಿ ಕೊಂಡು ಮಾಡುವುದೇನು? ಅದೇ ಅಕ್ಕಪಕ್ಕದವರೊಂದಿಗೆ ಹಂಚಿಕೊಂಡು ಲಾಭ ಪಡೆದುಕೊಳ್ಳಬಹುದಲ್ಲಾ ಲೇಖಕಿ ವಿವರಿಸಿದ ವಿಷಯವೂ ನನ್ನ ಸ್ನೇಹಿತರಾದ ಆಲಿ ಸೂಚಿಸಿದ ಸಲಹೆಯೂ ಒಂದೇ.

ಆಗ ಹೆಂಡತಿ ಸೌದಿಗೆ ಆಗತಾನೇ ಬಂದು ಮನೆಯೂಟ ಸಿಗುತ್ತಿದ್ದ ಹುರುಪು. ವಾರಕ್ಕೊಂದೆರಡು ಬಾರಿ ಆಲಿಯವರ ಕಾರಿನಲ್ಲಿ ನಾವಿಬ್ಬರೂ ತರಕಾರಿ ಮಾರ್ಕೆಟಿಗೆ ಹೋಗಿ ಸಗಟು ತರಕಾರಿ ತರುವುದೆಂದೂ, ಹೊರಡುವ ಮೊದಲು ಯಾರಿಗೆ ಯಾವ ತರಕಾರಿ, ದಿನಸಿ ಸಾಮಾನು ಬೇಕೆಂದು ಪಟ್ಟಿ ಮಾಡಿಕೊಂಡು ಹೋಗುವುದೆಂದೂ, ಆ ಪಟ್ಟಿಯ ಪ್ರಕಾರ ಸಾಮಾನು ಖರೀದಿಸಿ ಅದರ ಬೆಲೆಯನ್ನು ಎಲ್ಲರೂ ಹಂಚಿಕೊಳ್ಳಬೇಕೆಂದೂ ತೀರ್ಮಾನವಾಗಿತ್ತು, ಆಲಿ ಉತ್ಸಾಹದಲ್ಲಿ ನಮ್ಮ ಕಟ್ಟಡದಲ್ಲಿದ್ದ ಎಲ್ಲಾ ಕುಟುಂಬಗಳಿಗೆ ವಿವರಿಸಿ ಸುಮಾರು ಏಳೆಂಟು ಮನೆಗಳನ್ನು ಬುಕ್ ಮಾಡಿಕೊಂಡಿದ್ದರು. ಆಗ ನಮ್ಮಿಬ್ಬರ ಬಳಿಯೂ ಮೊಬೈಲು ಇರಲಿಲ್ಲ, ಆಲಿಯವರ ಬಳಿ ಪೇಜರ್ ಇತ್ತು, ಮಧ್ಯೆ ಏನಾದರೂ ಬೇಕಿದ್ದರೆ ಪೇಜರ್ ಕೊಡಿ ಎಂದು ಎಲ್ಲರಿಗೂ ನಂಬರ್ ಕೊಟ್ಟಿದ್ದರು.

ಮೊದಲನೆಯ ದಿನ ಉತ್ಸಾಹದಿಂದಲೇ ಏನೇನು ತರಕಾರಿ ಬೇಕು, ಎಷ್ಟೆಷ್ಟು ಬೇಕು ಎಂದು ಪಟ್ಟಿ ಮಾಡಿದೆವು. ಪಟ್ಟಿಯಲ್ಲಿ ಅತಿ ಹೆಚ್ಚಿನ ಬೇಡಿಕೆಯಿದ್ದುದು ನೀರುಳ್ಳಿಗೆ. ತರಕಾರಿಗಳನ್ನು ಥರ್ಮೋಕೋಲ್ ಅಥವಾ ರಟ್ಟಿನ ಪೆಟ್ಟಿಗೆಗಳಲ್ಲಿ ಸುಮಾರು ಐದು ಆರು ಕೆಜಿ ಬರುವಂತೆ ಪ್ಯಾಕ್ ಮಾಡಿರುತ್ತಾರೆ. ಅವರೂ ವ್ಯಾಪಾರಿಗಳಲ್ಲವೇ, ಚಿಕ್ಕ ಗಾತ್ರದ ಹಾಗೂ ಚಿಕ್ಕಪುಟ್ಟ ದೋಷಯುಕ್ತ ತರಕಾರಿಗಳನ್ನು ಅಡಿಯಲ್ಲಿ ತುಂಬಿಸಿ ಮೇಲೆ ಚೆನ್ನಾಗಿರುವ, ಆಕರ್ಷಕವಾಗಿರುವ ತರಕಾರಿಗಳನ್ನು ಜೋಡಿಸಿರುತ್ತಾರೆ. ಅದರಲ್ಲಿ ಕೆಲವು ಹಾಳಾಗಿರುವುವೂ ಇರುತ್ತವೆ. ಟೊಮಾಟೊಗಳಲ್ಲಿ ಕೆಲವು ನುಜ್ಜುಗುಜ್ಜಾಗಿರುತ್ತವೆ. ಈ 'ಡ್ಯಾಮೇಜ್'ಗಳನ್ನು ಹೊರತುಪಡಿಸಿಯೂ ತರಕಾರಿ ನಮಗೆ ಅಗ್ಗವಾಗುತ್ತದೆ. ಆದರೆ ತೊಂದರೆ ಇರುವುದು ಇಲ್ಲಲ್ಲ, ಇವನ್ನು ಹಂಚಿಕೊಳ್ಳುವುದರಲ್ಲಿ.

ನಾವು ತರಕಾರಿ ತಂದಕೂಡಲೇ ಅಕ್ಕಪಕ್ಕದ ಮನೆಯವರು ಕಾಯುತ್ತಿದ್ದು ತಮ್ಮ ಪಾಲಿನ ತರಕಾರಿ ಕೊಂಡೊಯ್ಯಲು ಹಾತೊರೆಯುತ್ತಿದ್ದರು. ಒಂದೊಂದು ಪೆಟ್ಟಿಗೆ ತೆರೆದಾಗಲೂ ಅದಕ್ಕಿದ್ದ ಗಿರಾಕಿಗಳು ಮುಗಿಬೀಳುತ್ತಿದ್ದರು. ಮೊದಮೊದಲು ಬಂದ ಗಿರಾಕಿಗಳು ಒಳ್ಳೊಳ್ಳೆಯ ತರಕಾರಿಗಳನ್ನು ಆರಿಸಿ ನಮಗೆ ಉಳಿಯುತ್ತಿದ್ದುದು ಈ 'ಡ್ಯಾಮೇಜ್' ತರಕಾರಿಗಳೇ. ಹಾಗಾಗಿ ಮೊದಲ ಪ್ರಯತ್ನಕ್ಕೇ ಪತ್ನಿಯ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಆದರೂ ಲೆಕ್ಕಾಚಾರದಲ್ಲಿ ನಾವು ಅಂದಾಜು ಮಾಡಿದ್ದಕ್ಕಿಂತ ಹೆಚ್ಚು ವ್ಯತ್ಯಾಸವೇನೂ ಇರಲಿಲ್ಲ, ಈ ಬಗ್ಗೆ ನಮ್ಮ ಅಕ್ಕಪಕ್ಕದವರು ಅವರ ಅಕ್ಕಪಕ್ಕದವರಿಗೆ ಹೇಳಿ, ಅವರು ಅವರ ಅಕ್ಕಪಕ್ಕದವರಿಗೆ ಹೇಳಿ, ಪಕ್ಕದವರು ಪಕ್ಕದ ಪಕ್ಕದವರಿಗೆ ಹೇಳಿ ವಾರ ಕಳೆಯುವಷ್ಟರಲ್ಲಿ ನಮಗೆ ಸುಮಾರು ಇಪ್ಪತ್ತು ಮನೆಗಳು ಗಿರಾಕಿಗಳಾಗಿದ್ದವು. ನಂತರವೇ ಬಂದಿದ್ದು ನಿಜವಾದ ತೊಂದರೆಗಳು.

ತರಕಾರಿ ಒಂದೆರಡೇ ತರುವುದಾದರೆ ತೊಂದರೆಯಿಲ್ಲ, ಅದೇ ಒಂದೊಂದೂ ತರಕಾರಿ ಹತ್ತು ಹದಿನೈದು ಕೆಜಿ ತೂಕ, ಅದೂಅಲ್ಲದೇ ನಮ್ಮ ಮನೆಯಿದ್ದುದು ಎರಡನೆಯ ಮಹಡಿಯಲ್ಲಿ, ಲಿಫ್ಟ್ ಇಲ್ಲ, ಇಷ್ಟೊಂದು ತರಕಾರಿಗಳನ್ನು ಹೊತ್ತು ಮೇಲೆ ಬರಬೇಕಾದರೆ ಸಾಕುಬೇಕಾಗಿ ಹೋಗುತ್ತಿತ್ತು, ಪ್ಲಾಸ್ಟಿಕ್ ಚೀಲಗಳನ್ನೂ, ಬಾಕ್ಸುಗಳನ್ನು ಹೊತ್ತು ಎರಡು ಕೈಗಳ ಬೆರಳುಗಳು ಕೆಂಪಗಾಗಿ ಉರಿಯತೊಡಗುತ್ತಿದ್ದವು. ಕೆಲವೊಮ್ಮೆ ಮೆಟ್ಟಿಲ ಮೇಲೆ ಎಡವಿ ಕೆಲವು ಬಾಕ್ಸುಗಳು ಕೈಜಾರಿ ಬಿದ್ದು ಒಡೆದು ತರಕಾರಿಗಳು ಚೆಲ್ಲಾಪಿಲ್ಲಿಯಾಗಿ ಉರುಳಿ ಮೆಟ್ಟಿಲ ಮೇಲೆ ಬರುತ್ತಿರುವವರ ಕಾಲುಗಳಿಗೆ ಸಿಕ್ಕಿ ಕೆಲವು ಅಪ್ಪಚ್ಚಿಯಾಗಿ, ಕೆಲವರು ಜಾರಿಬಿದ್ದು, ಮಕ್ಕಳಿಗೆ ಕೇಕೆ ಹಾಕಲು ಒಂದು ಅವಕಾಶ ಸಿಕ್ಕಂತಾಗಿ ಕಲಸುಮೇಲೋಗರವಾಗುತ್ತಿತ್ತು.

ತರಕಾರಿ ತಂದ ಮೇಲೆ ತಮಗೆ ಬೇಕಾಗಿದ್ದುದು ಈ ಜಾತಿಯದ್ದಲ್ಲವೆಂದೂ ಬೇರೆ ಜಾತಿಯದ್ದೆಂದೂ ಕೆಲವರು ನಿರಾಕರಿಸುವುದು ನಮಗೇ ಭರಿಸಬೇಕಾಗುತ್ತಿತ್ತು. ನಾವು ಕಾರಿನಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಹಲವಾರು ಬಾರಿ ಪೇಜರು ಹೊಡೆದುಕೊಳ್ಳುತ್ತಿತ್ತು, ಆಲಿಯವರು ತಮ್ಮ ವ್ಯಾಪಾರದವರು ಯಾರಾದರೂ ಪೇಜರ್ ಕಳಿಸಿರಬಹುದೆಂದು ತಿಳಿದು ದಾರಿ ಮಧ್ಯೆ ಕಾರು ನಿಲ್ಲಿಸಿ ಲೋಕಲ್ ಫೋನ್ ಹುಡುಕಾಡಿ ವಾಪಾಸು ಫೋನು ಮಾಡಿದರೆ ಹೆಚ್ಚಿನವು ನಮಗೆ ಈ ತರಕಾರಿ ತನ್ನಿ ಅಥವಾ ತರಬೇಡಿ ಎಂದೆಲ್ಲಾ ಇರುತ್ತಿತ್ತು, ಮೊದಮೊದಲು ಸಂತೋಷಕೊಡುತ್ತಿದ್ದ ಈ ಬೇಡಿಕೆಗಳು ಬರಬರುತ್ತಾ ಕಿರಿಕಿರಿಯಾಗತೊಡಗಿದ್ದವು.

ಕೆಲವು ಬಾರಿ ವಾಪಾಸು ಬರುವ ದಾರಿಯಲ್ಲೂ ಪೇಜರ್ ಕೊಟ್ಟು ಸತಾಯಿಸುತ್ತಿದ್ದರು. ಕೆಲವೊಮ್ಮೆ ಬೇಡಿಕೆಯಿರುವ ತರಕಾರಿಯೋ, ದಿನಸಿ ಸಾಮಾನೋ ಲಭ್ಯವಿಲ್ಲದಿದ್ದರೆ ಇದಿಲ್ಲ ಅದು ಆಗಬಹುದೇ ಎಂದು ಕೇಳಲು ಫೋನ್ ಮಾಡಿ ತಿಳಿದುಕೊಳ್ಳಬೇಕಾಗುತ್ತಿತ್ತು, ಆದರೆ ಈ ತರಕಾರಿಗೆ ಆರ್ಡರ್ ಮಾಡಿದವರಲ್ಲಿ ಕೆಲವರು ಒಪ್ಪಿಕೊಂಡರೆ ಕೆಲವರು ಒಪ್ಪಿಕೊಳ್ಳದೆ ನಮ್ಮ ಲೆಕ್ಕಾಚಾರ ತಲೆಕೆಳಗಾಗುತ್ತಿತ್ತು, ಅದೂ ಅಲ್ಲದೇ ತರಕಾರಿ ಮಾರ್ಕೆಟಿನ ಒಳಗೆ ಯಾರೂ ಫೋನು ಕೊಡುವುದಿಲ್ಲ, ಎಲ್ಲರಿಗೂ ಅವರ ವ್ಯಾಪಾರವೇ ಮುಖ್ಯವಾಗಿರುತ್ತದೆ. ಆಗ ಸ್ವಲ್ಪ ದೂರದಲ್ಲಿರುವ ಫೋನ್ ಬೂತಿಗೆ ಹೋಗಿಬರುವವರೆಗೂ ನಾವು ಕೊಂಡುಕೊಂಡಿರುವ ತರಕಾರಿಗಳನ್ನು ಕಾಯುತ್ತಾ ಕುಳಿತಿರಬೇಕಾಗುತ್ತದೆ. ಸೌದಿಯಲ್ಲಿ ಬಿರುಬೇಸಿಗೆಯ 40 ಡಿಗ್ರಿ ಬಿಸಿಯಲ್ಲಿ ಕಾಯುತ್ತಾ ಕುಳಿತಿರುವುದು ಯಾರಿಗೆ ತಾನೇ ಆಪ್ಯಾಯಮಾನವಾಗಿರುತ್ತದೆ ಹೇಳಿ.



ಈ ಚಿಕ್ಕಪುಟ್ಟ ಫೋನ್ ಕರೆಗಳಿಗೆ ಆದ ಖರ್ಚುಗಳನ್ನು ನಾವು ಕೇಳುವಂತಿರಲಿಲ್ಲ, ಒಂದು ವೇಳೆ ಫೋನಿಗೆ ಖರ್ಚಾದ ಬಾಬ್ತು ಎಂದು ಎಂಟಾಣೆ ಸೇರಿಸಿದರೆ ಕೆಲವರು 'ಏಕೆ ಫೋನ್ ಬೂತಿನಿಂದ ಫೋನ್ ಮಾಡಿದ್ದು? ಎಲ್ಲಾದರೂ ಅಂಗಡಿಯಿಂದ ಮಾಡಬಹುದಾಗಿತ್ತಲ್ಲಾ' ಎಂದು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು. (ಸೌದಿಯಲ್ಲಿ ಲೋಕಲ್ ಕಾಲುಗಳಿಗೆ ಅತಿ ಕಡಿಮೆ ಬೆಲೆಯಿದ್ದರೂ ಯಾರೂ ಲೋಕಲ್ ಕಾಲುಗಳಿಗೆ ಹಣ ಕೇಳುವುದಿಲ್ಲ) ಕೆಲವೊಮ್ಮೆ ಕೆಲವರು ಹೇಳಿದ್ದ ತರಕಾರಿಯ ಹೆಸರು ನಮಗೆ ತಿಳಿಯದೇ ಅವರು ವಿವರಿಸಿದ ಲಕ್ಷಣದ ಮೇರೆಗೆ ಬದನೆಕಾಯಿಯನ್ನೋ, ಸೌತೆಕಾಯಿಯನ್ನೋ ಕೊಂಡುಕೊಂಡು ಹೋದರೆ, ತಾವು ಹೇಳಿದ್ದು ಇದಲ್ಲ, ಬೇರೆಯದ್ದು ಎಂದು ಹೇಳಿ ನಿರಾಕರಿಸುತ್ತಿದ್ದರಿಂದ ಅವೂ ಮನೆಗೆ ಬಂದುಸೇರುತ್ತಿದ್ದವು. ನಮಗೂ ಬೇಡದಿದ್ದ ಅವುಗಳನ್ನು ಕೆಲವು ಬಾರಿ ಕಸದಬುಟ್ಟಿಗೆ ಎಸೆದದ್ದೂ ಇದೆ.

ತರಕಾರಿಗಳನ್ನು ಹಂಚಿದ ಮೇಲೆ ಉಳಿದ ಬಾಕ್ಸುಗಳನ್ನೂ, ಕಸಗಳನ್ನೂ ಎಸೆಯಲೂ ಮತ್ತೆ ಮೆಟ್ಟಲಿನ ಮುಖಾಂತರ ಇಳಿಯುವಾಗ ಕೆಲವರ ಬಟ್ಟೆಗಳಿಗೆ ಕೊಳಕು ತಾಕಿ ಅವರ ಬೈಗುಳಗಳನ್ನೂ ಕೇಳಬೇಕಾಗಿ ಬರುತ್ತಿತ್ತು, ಕೆಲವರು ನಾವು ಹಂಚಿದ್ದು ಸರಿಯಾಗಿಲ್ಲವೆಂದೂ, ನಾವು ಒಳ್ಳೆಯದ್ದನ್ನಿಟ್ಟುಕೊಂಡು ಕೆಟ್ಟದ್ದನ್ನು ಅವರಿಗೆ ವರ್ಗಾಯಿಸಿದ್ದೇವೆಂದೂ ಆರೋಪಿಸುತ್ತಿದ್ದರು. ಅದಕ್ಕೆ ಅವರೆದುರಿಗೇ ಹಂಚೋಣವೆಂದರೆ ನಾವು ಬರುವ ಸಮಯಕ್ಕೆ ಅವರು ಹೊರಗೆಲ್ಲೋ ಹೋಗಿದ್ದು ಸಾಧ್ಯವಾಗದೇ ಮತ್ತಿನ್ನೇನೋ ಮಾತು ಕೇಳಬೇಕಾಗಿತ್ತು. ಹಲವಾರು ಬಾರಿ ನಮ್ಮ ನೆಚ್ಚಿನ ಧಾರಾವಾಹಿಗಳನ್ನು ನೋಡುತ್ತಿರುವಾಗ ಮಧ್ಯೆ ಮಧ್ಯೆ ಫೋನು ಮಾಡಿ ಇದನ್ನು ತನ್ನಿ ಅದನ್ನು ತನ್ನಿ ಎಂದು ಅಪ್ಪಣೆ ಮಾಡುವಾಗ ಧಾರಾವಾಹಿಯ ರೋಚಕ ಘಟ್ಟ ಮುಗಿದು ಅನೂಚಾನವಾಗಿ ಆ ಸಮಯಕ್ಕೆ ಫೋನ್ ಮಾಡಿದವರ ಮೇಲೆ ಕೋಪ ಬರುತ್ತಿತ್ತು.

ಹೀಗೆ ಕೆಲವು ಅನುಭವಗಳಾದ ಮೇಲೆ ಹಲವಾರು ಜನರ ಹಲವಾರು ಬೇಡಿಕೆಗಳನ್ನು ನಮ್ಮ ಕೈಯಿಂದ ಸಮರ್ಥವಾಗಿ ನಿಭಾಯಿಸಬಲ್ಲೆವೆಂಬ ನಮ್ಮ ನಂಬಿಕೆ ಅಲ್ಲಾಡತೊಡಗಿತು. ಏಕೆಂದರೆ ಒಬ್ಬೊಬ್ಬರದ್ದೂ ಒಂದೊಂದು ಬೇ... ಕೆಲವು ಸಗಟು ತರಲಾಗದಷ್ಟು ಕಡಿಮೆಯಿದ್ದರೆ ಕೆಲವು ಸಗ... ಸಿಗುವಷ್ಟಕ್ಕಿಂತಲೂ ಹೆಚ್ಚಿನ ಬೇಡಿಕೆ.

ಉದಾಹರಣೆಗೆ ನೀರುಳ್ಳಿ ಸುಮಾರು 20 ಕೆಜಿಗೆ ಬೇಡಿಕೆಯಿದ್ದರೆ ಸಗ... ಸಿಗುವುದು 16 ಕೆಜಿ. ಉಳಿದ 4 ಕೆಜಿ ಚಿಲ್ಲರೆ ತರಬೇಕು. ಸಗಟು... ಚಿಲ್ಲರೆಗೂ ಬೆಲೆಯಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಈ ಎರಡರ ಮೊತ್ತ... ಕೂಡಿಸಿ ಪ್ರತಿ ಕೆಜಿಗೆ ಇಂತಿಷ್ಟು ಎಂದು ನಿಗದಿ ಮಾಡಿ ಹಣ ವಸ... ಮಾಡಲಿಕ್ಕೆ ಹೋದರೆ ಸಗಟಾಗಿ ಕೊಂಡರೆ ಇಷ್ಟು ಬೆಲೆ ಎಂದು ... ಗಿರಾಕಿಗಳು ತಕರಾರು ಎತ್ತುತ್ತಿದ್ದರು. ವ್ಯತ್ಯಾಸ ಬರುತ್ತಿದ್ದುದು ಕೇವಲ ಪೈಸೆಗ... ಆದರೂ ನಮ್ಮ ಗಿರಾಕಿಗಳಲ್ಲಿ ಕೆಲವರು ಸಾವಿರಾರು ರಿಯಾ... ಸಂಬಳವಿರುವವರೂ ಸಹ ಪೈಸೆಗಳಿಗಾಗಿ ತಕರಾರು ಎತ್ತುತ್ತಿದ್ದರು.

ಕೆಲವೊಮ್ಮೆ ತಂದ ತರಕಾರಿಗಳು ಚೆನ್ನಾಗಿಲ್ಲವೆಂದೂ, ಒಳ್ಳೆ ಹುಳವಿತ್ತೆಂ... ಇನ್ನೇನೇನೋ ಟೀಕೆಗಳನ್ನು ನಾವು ಮಸೀದಿಗೆ ಹೋದಾಗ, ತಿರುಗಾ... ಹೋದಾಗ, ಅಂಗಡಿ, ದಾರಿಯಲ್ಲಿ ಸಿಕ್ಕವರು ಪ್ರಹಾರ ನೀಡುತ್ತಿದ್ದರು. ಇಂ... ಮಾತುಗಳು ಬರತೊಡಗಿದೊಡನೆಯೇ ನನಗೆ ರೋಸಿಹೋಗಿತ್ತು. ಉಳಿತಾಯದ ಮನೆ ಹಾಳಾಗ, ನಮಗೆ ಬೇಕಾದಷ್ಟು ಮಾತ್ರ ತಂದು ಉಳಿದ... ಬಿಸಾಕಿದರೂ ಸರಿ, ಈ ಸೋಷಿಯಲ್ ಸರ್ವಿಸ್ ಬೇಡವೆಂದು ಆಲಿಯವ... ಕೆಲವಾರು ಬಾರಿ ಕೇಳಿಕೊಂಡಿದ್ದೆ. ಆದರೆ ಅವರ ವಿಚಾರಲಹರಿಯೇ ಬ...

ಚಿಕ್ಕಪುಟ್ಟ ತಕರಾರು ಬಂದರೂ ಜನರು ತಮ್ಮ ಪ್ರಾರ್ಥನೆಗಳಲ್ಲಿ ನಮ್ಮ... ಖಂಡಿತಾ ಜ್ಞಾಪಿಸಿಕೊಳ್ಳುತ್ತಾರೆ, ಆದರಿಂದ ನಮಗೆ ಒಳ್ಳೆಯದಾಗುತ್ತದೆ. ಹಾ... ನಮ್ಮ ಕೈಲಾದ ಸಹಾಯವನ್ನು ನಾವು ಖಂಡಿತಾ ಮಾಡಬೇಕು ಎಂಬು... ಅವರ ಸೂತ್ರ. ಈ ಮಾತುಗಳಿಗೆ ನಾನು ಮತ್ತೆ ಮತ್ತೆ ಸೋಲುತ್ತಿದ್ದೆ.

ಒಮ್ಮೆ ಪಾಕಿಸ್ತಾನದ ನೆರೆಯವರು ಒಳ್ಳೆಯ ಕ್ಯಾರಟ್ ಇದ್ದರೆ ಕೊಂಡುಕೊ... ಬನ್ನಿ, ಐದಾರು ಕೆಜಿ ನಮಗೆ ಬೇಕು ಅಂದಿದ್ದರು. ಆ ದಿನ ಒಳ್ಳೆ... ಆಸ್ಟ್ರೇಲಿಯಾದ ಗಜ್ಜರಿ ಬಂದಿತ್ತು, ಅದು ಇದ್ದುದು ಸುಮಾರು 12 ... ಚೀಲ. ಸರಿ, ಹೇಗೂ ಆರು ಕೆಜಿ ಅವರಿಗೆ ಬೇಕಲ್ಲಾ ಉಳಿದದ್ದರಲ್ಲಿ ಮೂರು... ಕೆಜಿ ನಾವಿಬ್ಬರೂ ಹಂಚಿಕೊಳ್ಳುವುದೆಂದು 12 ಕೆಜಿಯ ಚೀಲವನ್ನು ಹೊ... ತಂದೆವು. ಆರು ಕೆಜಿ ತೂಕ ಮಾಡಿ ಅವರ ಮನೆಗೆ ಹೋಂ ಡೆಲಿ... ಕೊಟ್ಟೂ ಬಂದೆವು. ಆದರೆ ಅರ್ಧ ಗಂಟೆಯೊಳಕ್ಕೇ ಆರೂ ಕೆಜಿ ಮ... ವಾಪಾಸು ಬಂದಿತ್ತು, ಕಾರಣವೇನೆಂದರೆ ಆ ಪಾಕಿಸ್ತಾನಿಯವರಿಗೆ ಪಾಕಿ... ಗಜ್ಜರಿ ಬೇಕಿತ್ತು, ಇದು ಆಸ್ಟ್ರೇಲಿಯದ್ದಾದ್ದರಿಂದ ಅವರಿಗೆ ಅವರು ಬಯ... ಪದಾರ್ಥ ಮಾಡಲು ಸಾಧ್ಯವಿಲ್ಲವೆಂದೂ, ಆ ಪದಾರ್ಥ ಮಾಡಲು ಪಾಕಿಸ್ತಾ... ಗಜ್ಜರಿ ಬೇಕಿತ್ತೆಂದೂ, ಇದು ಬೇಡವೆಂದೂ ವಾದ ಮಾಡಿ ಬಿಟ್ಟುಹೋಗಿದ್ದ... ಅಗಾಧ ಪ್ರಮಾಣದ ಈ ಗಜ್ಜರಿಯನ್ನು ಎಷ್ಟು ಜನರಿಗೆ ಕೇಳಿದರೆ 'ಬೇಡ'ವೆ... ಹೇಳುತ್ತಿದ್ದರು. ನಂತರ 'ಕೊಂಡ ಪಾಪ ತಿಂದು ಪರಿಹಾರ' ಮಾಡಲು ... ಕೆಜಿಯಲ್ಲಿ ಕ್ಯಾರೆಟ್ ಹಲ್ವಾ, ಮೂರು ಕೆಜಿಯಲ್ಲಿ ಕ್ಯಾರೆಟ್ ಉಪ್ಪಿನಕಾ... ಎರಡು ವಾರ ಕ್ಯಾರೆಟ್ ಸಾಂಬಾರ್, ಕ್ಯಾರೆಟ್ ಪಲ್ಯ, ಕ್ಯಾರೆಟ್ ಕೋಸಂ... ಮಾಡಿಕೊಂಡು ಪಾಪ ಪರಿಹಾರ ಮಾಡಿಕೊಂಡೆವು. ಐದು ಕೆಜಿ ಗ... ಹಲ್ವಾ ಮಾಡಲು ಸಿಪ್ಪೆ ಸುಲಿದು, ತುರಿದು, ಹಾಲಿನಲ್ಲಿ ಬೇಯಿಸುವಷ್ಟ... ನಾನೂ ನನ್ನ ಹೆಂಡತಿಯೂ ಸೀದುಹೋಗಿದ್ದೆವು.

ಇವು ನೇರ ಪ್ರಹಾರಗಳಾದರೆ, ಪರೋಕ್ಷವಾಗಿ ಹಣದ ದೆಸೆಯಿಂದ... ನಮಗೆ ಅನೇಕ ತೊಂದರೆಗಳು ಎದುರಾಗುತ್ತಿದ್ದವು. ತರಕಾರಿ ತರ... ಜಬರ್ದಸ್ತಿನಲ್ಲಿ ಆರ್ಡರ್ ಮಾಡಿದವರು ಹಣ ಕೊಡಲು ಮ... ಸತಾಯಿಸುತ್ತಿದ್ದರು. ಕೆಲವರು ನಾಳೆ ಕೊಡುತ್ತೇವೆ, ಕೆಲವರು ಸಂಬಳ ಬ... ಮೇಲೆ ಕೊಡುತ್ತೇವೆ, ಕೆಲವರು ಮುಂದಿನ ತಿಂಗಳು ಕೊಡುತ್ತೇವೆ ಎಂದು... ಗೋಳು ಹೊಯ್ದುಕೊಳ್ಳುತ್ತಿದ್ದರು.

ಕೆಲವರಂತೂ ಲೆಕ್ಕಾಚಾರ ಕೊಟ್ಟರೆ ಇಷ್ಟಾಗಲು ಸಾಧ್ಯವೇ ಇಲ್ಲ, ನ... ಲೆಕ್ಕದ ಪ್ರಕಾರ ಇಷ್ಟೇ ಆಗುತ್ತದೆ ಎಂದು ಕಡಿಮೆ ಕೊಡುತ್ತಿದ್ದರು. ಕೆಲ... ನಾವು ಸತ್ಯ ಹೇಳಿದ್ದರೂ ಒಪ್ಪದೇ ಸಗಟಿನಲ್ಲಿ ಇನ್ನೂ ಕಡಿಮೆಗೆ ಸಿಗುತ್ತದೆಂದು... ನಾವು ಲಾಭ ಮಾಡಿಕೊಳ್ಳಲು ಇಂತಹ ರಿಸ್ಕ್ ತೆಗೆದುಕೊಳ್ಳುತ್ತಿದ್ದೇವೆಂದು... ನೇರವಾಗಿಯಲ್ಲದಿದ್ದರೂ ಯಾರದ್ದೋ ಮುಖಾಂತರ ನಮ್ಮ ಕಿವಿಗಳಿಗೆ ಬೀಳುತ್ತಿ...

ತಾಳ್ಮೆಯಿಂದ ಎಲ್ಲಾ ತೊಡಕುಗಳನ್ನೂ ಸಹಿಸಿದ್ದ ಆಲಿಯವರೂ ... ಕಡೆಗೊಂದು ಬಾರಿ ಈ ಸೋಷಿಯಲ್ ಸರ್ವಿಸ್ ಸಾಕೆಂದು ನಿರ್ಧರಿಸಿ... ಮೇಲೆ ನಾವೆಲ್ಲ ನಿಟ್ಟುಸಿರುಬಿಟ್ಟೆವು. ನಮ್ಮ ಸೋಷಿಯಲ್ ಸರ್ವಿಸಿನ ದೆಸೆಯಿ... ಆಲಿಯವರು ತಮ್ಮ ವೇಳೆಯನ್ನೂ, ವ್ಯಾಪಾರವನ್ನೂ ಹಾಳು ಮಾಡಿಕೊಂಡಿದ್ದಲ್ಲ... ವ್ಯಾಪಾರ ಕೈದುಗೊಂಡ ನಂತರವೂ ಕೆಲವರ ಬಾಕಿ ಬರದೇ ... ಅನುಭವಿಸಬೇಕಾಯ್ತು. ನಂತರ ನಾವು ನಮಗೆ ಬೇಕಾದಷ್ಟು ತರಕಾರಿ ಮ... ಕೊಂಡು ಬರುತ್ತಿದ್ದೆವು.

● ಅರ್ಷದ್ ಹುಸೇನ್ ಎಂ.ಹೆಚ್.ಕೊ...

ೃಷ್ಣದೇವರಾಯ ವಿವಿ: ಮೊಂಡು ವಿಸಿ ಮಂಜಪ್ಪ

ನವತ್ತಿನ ಬಹುಪಾಲು ವಿಶ್ವವಿದ್ಯಾಲಯಗಳು ರ್ಯ ವಿಧಾನಸೌಧವಾಗುತ್ತಿರುವ ದುರ್ಗತಿ ವಾಗೇನೂ ಉಳಿದಿಲ್ಲ. ಪ್ರತಿಯೊಂದು ವಿವಿಯನ್ನು ಪ್ಪು ಮಲಗಿಸಿ ಸರಿಯಾದ್ದೊಂದು ಪಂಚನಾಮೆ ದರೆ ಅಲ್ಲಿ ಅಕ್ಷರ, ಜ್ಞಾನ ಪ್ರಸರಣಕ್ಕಿಂತ ಹೆಚ್ಚಾಗಿ ಮೇಲಾಟ, ಕೀಳು ರಾಜಕಾರಣದ ಹುಳುಕುಗಳೇ ಗಾಚುತ್ತವೆ. ಕೇವಲ ಒಂದೆರಡು ವರ್ಷಗಳ ಹಿಂದಷ್ಟೇ ದ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ಯಲ್ಲೂ ಹಗರಣ, ದ್ವೇಷ ರಾಜಕಾರಣದ ಘಮಲು ಗಿಯೇ ತೇಲಿಬರುತ್ತಿದೆ.


ಷ್ಣದೇವರಾಯ ವಿವಿಯ ಕನ್ನಡ ವಿಭಾಗದ ಮುಖ್ಯಸ್ಥೆ ಘಂಟಿಯವರ ಹಠಾತ್ ವರ್ಗಾವಣೆ ಅಲ್ಲಿನ ಸ್ಥಿ ಮತ್ತು ರಾಜಕಾರಣಕ್ಕೆ ಸದ್ಯದ ಸಾಕ್ಷಿ. ಅಲ್ಲದೆ ಹಿಂದೆ ಪ್ರಬಲ ಸಿಂಡಿಕೇಟ್ ಪಡೆಯ ಕೇಸರಿ ನ ಶಂಕೆಯೂ ವ್ಯಕ್ತವಾಗುತ್ತಿದ್ದು ಘಂಟಿಯವರ ವಣೆಯ ವಿರುದ್ಧ ತೀವ್ರ ಆಕ್ಷೇಪಣೆಗಳು ರುತ್ತಿವೆ. ಸದರಿ ವಿವಿಯ ಪ್ರಪ್ರಥಮ ಲಪತಿ ಎನ್ನುವ ಖ್ಯಾತಿಗೆ ಗಿರುವ ಪ್ರೊ. ಮಂಜಪ್ಪ ಡಿ. ಮನಿ 08.10.2012ರಂದು ಒಂದು ಹೊರಡಿಸಿ ಮಲ್ಲಿಕಾ ಘಂಟಿಯವರನ್ನು ಡಲೇ ಕೃಷ್ಣದೇವರಾಯ ವಿವಿಯಿಂದ ಗೊಳಿಸಿದ್ದು ಅವರು ಇನ್ನು ಮುಂದೆ ರ್ಗಾ ವಿವಿಯ ನೌಕರರಾಗಿರುತ್ತಾರೆ ಘೋಷಿಸಿದ್ದರು. ಗುಲ್ಬರ್ಗಾ ವಿವಿಯ ರ್ ಹೊರಡಿಸಿದ್ದ ಆದೇಶದನ್ವಯ ಜನೆ ಆಯ್ಕೆಯ ಕಲಮ್‌ನಲ್ಲಿ ಯವರು ಟಿಕ್ ಮಾಡಿಲ್ಲ ಎನ್ನುವ ಸಿಲ್ಲಿ ಸಬೂಬನ್ನೂ ಶದಲ್ಲಿ ಹೊಸಮನಿಯವರು ಪ್ರಸ್ತಾಪಿಸಿದ್ದರು. ಆದರೆ ರ್ಟ್ ಅಂಗಳದಲ್ಲಿ ಹೊಸಮನಿಯವರ ಸಬೂಬಿನ ರ್ಣ ಬಂಡವಾಳ ಬಯಲಾಗಿದೆ. ಮಲ್ಲಿಕಾ ಮೇಲಿನ ದ್ದಿನ ಕಾರಣಕ್ಕೆ ಈ ತಾಂತ್ರಿಕ ದೋಷವನ್ನು ಸಿಕೊಂಡು ಅವರನ್ನು ಗುಲ್ಬರ್ಗಾ ವಿವಿಗೆ ಟ್ರಾನ್ಸ್‌ಫರ್ ವಾಗಿತ್ತೆನ್ನುವ ಸತ್ಯ ಮೇಲ್ನೋಟಕ್ಕೇ ತಿಳಿದುಬರುತ್ತಿದೆ. ಉಪಕುಲಪತಿ ಹೊಸ್ಮನಿ ಸಾಹೇಬರು ಮಾಧ್ಯಮಗಳ ಮುಂದೆ 'ಆಕೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಣವನ್ನು ಆಡಳಿತ ಮಂಡಳಿಯ ಗಮನಕ್ಕೇ ಬಾರದಂತೆ ಖಾತೆಯಿಂದ ತೆಗೆದಿರುವುದರಿಂದ ಶಿಕ್ಷೆಯ ರೂಪದಲ್ಲಿ ಈ ವರ್ಗಾವಣೆ ಮಾಡಲಾಗಿದೆ' ಎನ್ನುವ ಮತ್ತೊಂದು ಕಾರಣವನ್ನೂ ನೀಡುತ್ತಾರಾದರು, ತಮ್ಮ ಅಧಿಕೃತ ಆದೇಶದಲ್ಲಾಗಲಿ ಅಥವಾ ಕೋರ್ಟ್‌ನ ಮುಂದಾಗಲಿ ಈ ಕುರಿತು ಪ್ರಸ್ತಾಪವನ್ನೇ ಮಾಡುತ್ತಿಲ್ಲ. ಅಲ್ಲಿಗೆ ಇದೊಂದು ದುರುದ್ದೇಶಪೂರಿತ ಎತ್ತಂಗಡಿ ಎನ್ನುವುದು ಖಾತ್ರಿಯಾಗುತ್ತದೆ.



ಮಲ್ಲಿಕಾ ಘಂಟಿ

ಮಲ್ಲಿಕಾ ಅವರು 2005ರಲ್ಲಿ ಗುಲ್ಬರ್ಗಾ ವಿವಿಯ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿಕೊಂಡು ತದನಂತರ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ್ದರು. ನಂತರ ಅವರನ್ನು ಅದೇ ಗುಲ್ಬರ್ಗಾ ವಿವಿಯ ಅಂಗವಾಗಿದ್ದ ನಂದೀಹಳ್ಳಿಯ ಸ್ನಾತಕೋತ್ತರ ಕೇಂದ್ರಕ್ಕೆ ನಿರ್ದೇಶಕರನ್ನಾಗಿ ನೇಮಿಸಲಾಗಿತ್ತು. 27.07.2010ರಲ್ಲಿ ರಾಜ್ಯ ಸರ್ಕಾರ ಬಳ್ಳಾರಿಯಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯನ್ನು ಸ್ಥಾಪಿಸಿದಾಗ ನಂದೀಹಳ್ಳಿಯ ಸ್ನಾತಕೋತ್ತರ ಕೇಂದ್ರವನ್ನು ಬಳ್ಳಾರಿ ವಿವಿಗೆ ಸೇರ್ಪಡೆ ಮಾಡಲಾಗಿತ್ತು. ನೂತನ ವಿವಿಗೆ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡುವ ವಿಷಯ ಬಂದಾಗ ಸರ್ಕಾರದ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ದಿನಾಂಕ 14.09.2010ರಂದು ಸುತ್ತೋಲೆಯೊಂದನ್ನು ಹೊರಡಿಸಿ ನಂದೀಹಳ್ಳಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಗುಲ್ಬರ್ಗಾ ವಿವಿಗೆ ಸೇರಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಇನ್ನು ಮುಂದೆ ಬಳ್ಳಾರಿ ವಿವಿ ಸೇವೆಗೆ ಮುಂದುವರೆಸುವುದಾಗಿ ತಿಳಿಸಿದ್ದರು. ಅಂದರೆ ಅವರನ್ನು ನೂತನ ವಿವಿಯ ನೌಕರರು ಎಂತಲೇ ಪರಿಗಣಿಸಬೇಕಿತ್ತು. ಈ ಕೇಂದ್ರದ ಹೊರತಾಗಿ ಮತ್ತೂ ಒಂದಷ್ಟು ಗುಲ್ಬರ್ಗಾ ವಿವಿಯ ಸಿಬ್ಬಂದಿಗಳನ್ನು ಬಳ್ಳಾರಿ ವಿವಿಗೆ ಒಳಪಡುವ ಕಾಲೇಜುಗಳಿಗೆ ಹಂಚಿಕೆ ಮಾಡಲಾಗಿತ್ತು. ಆದರೆ ಅವರೆಲ್ಲರೂ ಗುಲ್ಬರ್ಗಾ ವಿವಿಯ ನೌಕರರಾಗೇ ಉಳಿಯಲಿದ್ದರು.

ಈ ನಡುವೆ 29.09.2011ರಂದು ಗುಲ್ಬರ್ಗಾ ವಿವಿಯ ರಿಜಿಸ್ಟ್ರಾರ್ ಆದೇಶವೊಂದನ್ನು ಹೊರಡಿಸಿ, ಬಳ್ಳಾರಿ ವಿವಿಗೆ ಹಂಚಿಕೆಯಾಗಿ ಅಲ್ಲಿ ಕೆಲಸ ಮಾಡುತ್ತಿರುವ ಗುಲ್ಬರ್ಗಾ ವಿವಿಯ ನೌಕರರು ಕೃಷ್ಣದೇವರಾಯ (ಬಳ್ಳಾರಿ) ವಿವಿಯಲ್ಲೇ ಮುಂದುವರೆಯಲು ಇಚ್ಛಿಸಿದರೆ ತಾವು ನೀಡಿರುವ ನಿಯೋಜನೆ ಆಯ್ಕೆಯಲ್ಲಿ ತಮ್ಮ ಆ ಅಭಿಪ್ರಾಯವನ್ನು ನಮೂದಿಸಿ ಸಲ್ಲಿಸಬೇಕು, ಒಂದು ವೇಳೆ ಸಲ್ಲಿಸದಿದ್ದರೆ ಅಂತವರಿಗೆ ಅಲ್ಲಿ ಕೆಲಸ ಮಾಡಲು ಇಷ್ಟವಿಲ್ಲ ಎಂದು ಪರಿಗಣಿಸಿ ವಾಪಾಸ್ ಮೂಲ ವಿವಿಯಾದ ಗುಲ್ಬರ್ಗಾ ವಿವಿಗೆ ಕರೆಸಿಕೊಳ್ಳುವುದಾಗಿ ತಿಳಿಸಿದ್ದರು. ಅದಾದ ಹತ್ತು ದಿನಕ್ಕೆ ಅಂದರೆ 08.10.2012ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಿದ್ದ ಅದೇ ರಿಜಿಸ್ಟ್ರಾರ್ ಕಚೇರಿಯು ಈ ಷರತ್ತು ಈಗಾಗಲೇ ಬಳ್ಳಾರಿ ವಿವಿಗೆ ಕಾಯಂ ಆಗಿ ಸೇರ್ಪಡೆಯಾಗಿರುವ ನಂದೀಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು.



ಮಂಜಪ್ಪ

ಈ ಆದೇಶದನ್ವಯ ನಂದೀಹಳ್ಳಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ನಂತರದಲ್ಲಿ ಬಳ್ಳಾರಿ ವಿವಿಗೆ ಸೇರ್ಪಡೆಯಾದ ಮಲ್ಲಿಕಾ ಘಂಟಿಯವರು ಆಯ್ಕೆಗೆ ಟಿಕ್ ಮಾಡುವ ಅವಶ್ಯಕತೆ ಇರಲಿಲ್ಲ. ಹಾಗಾಗಿ ಅವರು ಆ ನಮೂನೆಯಲ್ಲಿ ತಮ್ಮ ಆಯ್ಕೆಯನ್ನು ಟಿಕ್ ಮಾಡಿರಲಿಲ್ಲ. ಪ್ರಗತಿಪರ ಹಿನ್ನೆಲೆ ಮತ್ತು ಸಿದ್ಧಾಂತದ ಮಲ್ಲಿಕಾ ಅವರ ಉಪಸ್ಥಿತಿ ಬಳ್ಳಾರಿ ವಿವಿ ಕ್ಯಾಂಪಸ್‌ನ ಕೆಲ ಮಂದಿಗೆ ಆಗಿ ಬರುತ್ತಿರಲಿಲ್ಲವಾದ್ದರಿಂದ ಅವರನ್ನು ಎತ್ತಂಗಡಿ ಮಾಡಲು ಈ ಸಂದರ್ಭವನ್ನು ಉಪಯೋಗಿಸಿಕೊಂಡಿದ್ದರು. ತಡ ಮಾಡದ ಉಪಲಕುಲಪತಿ ಹೊಸ್ಮನಿ ಸಾಹೇಬರು ಮಲ್ಲಿಕಾ ಅವರು ಬಳ್ಳಾರಿ ವಿವಿಯಲ್ಲೇ ಉಳಿಯಬೇಕೆನ್ನುವ ಐಚ್ಛಿಕ ಆಯ್ಕೆಗೆ ಟಿಕ್ ಮಾಡಿಲ್ಲವಾದ್ದರಿಂದ ಅವರನ್ನು ಗುಲ್ಬರ್ಗಾ ವಿವಿಗೆ ವರ್ಗ ಮಾಡಲಾಗಿದೆ ಎನ್ನುವ ಡಂಗೂರ ಸಾರಿದ್ದರು. ಅಸಲಿಗೆ ಅವರಿಗೆ ಇಲ್ಲೇ ಉಳಿಯಬೇಕೊ ಅಥವಾ ಅಲ್ಲಿಗೆ ಹೋಗಬೇಕೊ ಎನ್ನುವ ಆಯ್ಕೆಯ ನಿಬಂಧನೆಯೇ ಅನ್ವಯಿಸುತ್ತಿರಲಿಲ್ಲ. ಅದು ಶಿಕ್ಷಣ ಕಾರ್ಯದರ್ಶಿಗಳ ಆದೇಶ ಮತ್ತು ಗುಲ್ಬರ್ಗಾ ವಿವಿಯ ರಿಜಿಸ್ಟ್ರಾರ್‌ರ ತಿದ್ದುಪಡಿ ಅಧಿಸೂಚನೆಯ ಮೂಲವೇ ಸಾಬೀತಾಗಿತ್ತು.

ಅಲ್ಲದೆ, ಬಳ್ಳಾರಿ ಕೃಷ್ಣದೇವರಾಯ ವಿವಿಯ ರಿಜಿಸ್ಟ್ರಾರ್ 21.07.2011ರಂದು ಗುಲ್ಬರ್ಗಾ ವಿವಿಗೆ ಒಂದು ಪಟ್ಟಿಯನ್ನು ಕಳುಹಿಸಿದ್ದರು. ಆ ಪಟ್ಟಿಯಲ್ಲಿ ಸರ್ಕಾರದ ಆದೇಶದನ್ವಯ ಯಾರ್‍ಯಾರನ್ನು ಬಳ್ಳಾರಿ ವಿವಿಯ ಕಾಯಂ ನೌಕರರನ್ನಾಗಿ ಮುಂದುವರೆಸಲಾಗುತ್ತಿದೆ ಎಂದು ಉಲ್ಲೇಖಿಸಲಾಗಿತ್ತು. ಅಚ್ಚರಿ ಎಂದರೆ ಆ ಪಟ್ಟಿಯಲ್ಲಿ ಮಲ್ಲಿಕಾ ಘಂಟಿಯವರ ಹೆಸರೂ ಇತ್ತು. ಅಲ್ಲಿಗೆ ಬಳ್ಳಾರಿ ವಿವಿಯೇ ಅವರನ್ನು ತನ್ನ ಕಾಯಂ ನೌಕರರೆಂದು ಒಪ್ಪಿಕೊಂಡದ್ದು ಸಾಬೀತಾಗಿತ್ತು. ಇಷ್ಟೆಲ್ಲಾ ಪುರಾವೆಗಳಿದ್ದರೂ ಸುಖಾಸುಮ್ಮನೆ ಸಲ್ಲದ ಕಾರಣ ನೀಡಿ ಘಂಟಿಯವರನ್ನು ವರ್ಗ ಮಾಡಿರುವ ಮಂಜಪ್ಪ ಡಿ.ಹೊಸ್ಮನಿಯವರ ಆದೇಶದ ಹಿಂದೆ ಕೀಳು ರಾಜಕಾರಣವಿರುವುದರಲ್ಲಿ ಅನುಮಾನವೇ ಇಲ್ಲ. ಕೋರ್ಟ್‌ನಲ್ಲೂ ಸಹ ಇದು ಸಾಬೀತಾಗಿ ವರ್ಗಾವಣೆಯ ಆದೇಶವನ್ನು ಅಮಾನತ್ತಿನಲ್ಲಿಡಲಾಗಿದೆ. ಕೋರ್ಟ್‌ನ ಆದೇಶವನ್ನು ಕೈಲಿಡಿದ ಮಲ್ಲಿಕಾ ಘಂಟಿಯವರು ಕೃಷ್ಣದೇವರಾಯ ವಿವಿಯಲ್ಲಿ ಕರ್ತವ್ಯ ಸೇರ್ಪಡೆಗೆ ಹೋದಾಗ ಉಪಕುಲಪತಿ ಹೊಸ್ಮನಿ ಅದಕ್ಕೆ ಅವಕಾಶ ನೀಡದೆ ಭಂಡತನದಿಂದ ವರ್ತಿಸಿದ್ದರು. ವರ್ಗಾವಣೆಯನ್ನು ಅವರೆಷ್ಟು ಪ್ರತಿಷ್ಠೆಯ ವಿಷಯವನ್ನಾಗಿಸಿಕೊಂಡಿದ್ದಾರೆ ಎನ್ನುವುದು ಅದರಿಂದಲೇ ತಿಳಿದುಬರುತ್ತಿದೆ.

ವಿಷಯ ಈಗ ರಾಜಭವನದ ಮೆಟ್ಟಿಲೇರಿದೆ. ರಾಜ್ಯಪಾಲರೇ ವಿವಿಯ ಕುಲಪತಿಗಳೂ ಆಗಿರುವುದರಿಂದ ಅಲ್ಲಿಂದಲಾದರು ಕಿಂಚಿತ್ತು ನ್ಯಾಯ ಸಿಗಬಹುದೆನ್ನುವ ಭರವಸೆ ಮಲ್ಲಿಕಾ ಘಂಟಿಯವರದ್ದು. ಆದರೆ ಕೋರ್ಟು, ನಿಯಮ, ಅಪವಾದಗಳನ್ನೆಲ್ಲ ಎದುರು ಹಾಕಿಕೊಂಡು ವಿ.ಸಿ. ಹೊಸ್ಮನಿ ಸಾಹೇಬರು ಜಿದ್ದಿಗೆ ನಿಂತಿರುವುದರ ಹಿಂದೆ ಏನೋ ಒಂದು 'ನಿಗೂಢ'ವಿರುವುದಂತೂ ಸತ್ಯವೆನಿಸುತ್ತದೆ. ಇಂತಹ ನಿಗೂಢತೆಗಳಿಗೆ ಆರಂಭದಲ್ಲೆ ಬ್ರೇಕ್ ಹಾಕದಿದ್ದರೆ ಬಳ್ಳಾರಿ ವಿವಿಯು ಭವಿಷ್ಯದಲ್ಲಿ ಬೆಂಗಳೂರು ವಿವಿಗಿಂತ ಭೀಕರ 'ಬ್ರೇಕಿಂಗ್ ನ್ಯೂಸ್'ಗಳಲ್ಲಿ ಸಿಲುಕುವುದು ಗ್ಯಾರಂಟಿ.....!

● ಗಿರೀಶ್ ತಾಳಿಕಟ್ಟೆ

ೆಂಗಳೂರಿನಲ್ಲಿ ಬೀಸಿದ ಶೇಕ್ಸ್‌ಪಿಯರ್‌ನ ಸುಂಟರಗಾಳಿ

ನಾಟಕ ವಿಮರ್ಶೆ

ೇಕ್ಸ್‌ಪಿಯರ್‌ನ ಕೃತಿಗಳು ರೂಪಾಂತರಗೊಂಡಷ್ಟು ತರಗೊಂಡಷ್ಟು ಜಗತ್ತಿನ ಯಾವ ನಾಟಕಕಾರನ ಾ ರೂಪಾಂತರಗೊಂಡಿಲ್ಲ. ಶೇಕ್ಸ್‌ಪಿಯರ್ ನಾಲ್ಕು ನಗಳ ಹಿಂದೆ ರಚಿಸಿದ ನಾಟಕಗಳು ಇಂದಿಗೂ ದಷ್ಟೇ ಮೌಲ್ಯಗಳನ್ನು ಉಳಿಸಿಕೊಂಡಿವೆ. ಬಹುಶಃ ಯರ್‌ನಷ್ಟು ಸಾರ್ವಕಾಲಿಕ ಪ್ರಸ್ತುತತೆಯನ್ನು ದ ಇನ್ನೊಬ್ಬ ನಾಟಕಕಾರನಿಲ್ಲ. ಶೇಕ್ಸ್‌ಪಿಯರ್‌ನ ಳ ಇನ್ನೊಂದು ವಿಶೇಷತೆಯೇನೆಂದರೆ ಅವುಗಳು ಯಾವುದೇ ಮೂಲೆಯ ಸಾಮಾಜಿಕ ಮತ್ತು ಯ ಪರಿಸ್ಥಿತಿಯ ವಿಮರ್ಶೆಗೆ ಸರಿಹೊಂದುವುದು. ಯರ್‌ನ ಕೊನೆಯ ಕಾಲಘಟ್ಟಕ್ಕೆ ಸೇರುವ ಅವನ ಪ್ರತಿಭಾ ವ್ಯಕ್ತಿತ್ವದ ಫಲ 'ದಿ ಟೆಂಪೆಸ್ಟ್' ನಾಟಕ. ಯ ಗದ್ದುಗೆಯ ಅಧಿಕಾರದ ವ್ಯಾಮೋಹದಿಂದ ೊಬ್ಬ ಒಡಹುಟ್ಟಿದ ಅಣ್ಣನಿಗೆ ಎಸಗುವ ವನ್ನಾಧರಿಸಿ ಸರಳವಾಗಿಯಾದರೂ ಅತ್ಯಂತ ಯವಾಗಿ ಕಟ್ಟಿದ ನಾಟಕ 'ದಿ ಟೆಂಪೆಸ್ಟ್'. ಕನ್ನಡದ ೇಖಕಿ ವೈದೇಹಿಯವರ ರೂಪಾಂತರದ 'ಧಾಂ ಸುಂಟರಗಾಳಿ'ಯನ್ನು ಇತ್ತೀಚೆಗೆ ಮಂಗಳೂರಿನ ಬಾಸ್ಕೋ ಹಾಲ್‌ನಲ್ಲಿ ನಡೆದ 'ಮಳೆಬಿಲ್ಲು-12 ನಾಟಕೋತ್ಸವ'ದಲ್ಲಿ ಕನ್ನಡದ ಪ್ರಸಿದ್ಧ ಕಲಾವಿದ ರಮೇಶ್‌ರ 'ನಟನಾ' ರಂಗತಂಡ ಪ್ರದರ್ಶಿಸಿತು.

ಕರ್ನಾಟಕದ ಶ್ರೇಷ್ಠ ಕಲಾವಿದ ಜೀವನ್ ರಾಂ ರ ನಿರ್ದೇಶನದಲ್ಲಿ ಪ್ರದರ್ಶಿತವಾದ 'ಸುಂಟರಗಾಳಿ', ಮನಸ್ಸನ್ನು ಹೊಸಲೋಕಕ್ಕೆ ಕೊಂಡೊಯ್ದಿತ್ತು. ಟೆಂಪೆಸ್ಟ್'ನ ಕನ್ನಡ ರೂಪಾಂತರಕ್ಕೆ ಸುಮಾರು ಾಲು ಶತಮಾನದ ಇತಿಹಾಸವಿದೆ. ಮೊಟ್ಟ ಬಾರಿ 1893 ರಲ್ಲಿ ಮೈಸೂರು ಸೀತಾರಾಮ 'ಚಂಡಮಾರುತ' ಎಂಬ ಹೆಸರಲ್ಲಿ ತರಿಸಿದ್ದರು. 1930 ರಲ್ಲಿ ಕುವೆಂಪು ಅವರು ಳಿ' ಎಂಬ ಹೆಸರಲ್ಲಿ ರೂಪಾಂತರಿಸಿದರು. 1959 ಸ್ತಿ ವೆಂಕಟೇಶ ಅಯ್ಯಂಗಾರರು 'ಚಂಡಮಾರುತ' ಹೆಸರಲ್ಲಿ ರೂಪಾಂತರಿಸಿದರೆ ಪುನಃ 1981 ರಲ್ಲಿ ಮೂರ್ತಿರಾಯರು 'ಚಂಡಮಾರುತ' ಎಂದೇ ತರಿಸಿದರು. ಈವರೆಗಿನ ರೂಪಾಂತರದಲ್ಲಿ ದ್ದು ವೈದೇಹಿಯವರ 'ಸುಂಟರಗಾಳಿ'. ಈ ಎಲ್ಲಾ ೂ ಒಬ್ಬರಿಗಿಂತ ಇನ್ನೊಬ್ಬರು ವಿಭಿನ್ನವಾಗಿ ಮತ್ತು ಸೃಜನಶೀಲ ರೂಪದಲ್ಲಿ ಮರು ರೂಪಿಸಿದ್ದಾರೆ. ಎನ್ನುವುದು ಶುಷ್ಕ ಪಾಂಡಿತ್ಯದ ಪ್ರದರ್ಶನವಲ್ಲ, ಸಾಧ್ಯತೆಯ ಶೋಧನೆ ಹಾಗೂ ಸವಾಲುಗಳನ್ನು ಅನ್ವೇಷಿಸುವ, ವಿಸ್ತರಿಸುವ ಒಂದು ಪ್ರಕ್ರಿಯೆ. ಅದು ಬುದ್ಧಿ ಮತ್ತು ಭಾವಗಳೆರಡನ್ನೂ ಜೋಡಿಸುವ ಒಂದು ವಿಶಿಷ್ಟ ಸೂತ್ರವೂ ಹೌದು. ಮೂಲ ಟೆಂಪೆಸ್ಟ್‌ನಂತೆಯೇ ಎಲ್ಲಾ ರೂಪಾಂತರಕಾರರೂ ಈ ನಾಟಕದ ಪ್ರಧಾನ ವಸ್ತುವಾಗಿ ಚಿತ್ರಿಸಿರುವುದು ಕ್ಷಮೆ ಮತ್ತು ಶಿಕ್ಷೆಯನ್ನು... ಸುಂಟರಗಾಳಿಯಲ್ಲಿ ವೈದೇಹಿಯವರು ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಸಹಜ ಗುಣದಂತೆಯೇ ಹೆಣ್ಣು ಮಗಳೊಬ್ಬಳ ಮಾನವೀಯ ಅಂತಃಕರಣವನ್ನು ಮತ್ತು ವಾತ್ಸಲ್ಯಮಯೀ ಹೃದಯದ ಭಾವನೆಗಳನ್ನು ಸುಂದರವಾಗಿ ಹೆಣೆದಿದ್ದಾರೆ.

ಮಂತ್ರವಿದ್ಯೆಯನ್ನು ಅಭ್ಯಸಿಸುವ ಸಲುವಾಗಿ ಆಡಳಿತ ಯಂತ್ರವನ್ನು ನಿರ್ಲಕ್ಷಿಸುವ ಮಹಾರಾಜ 'ಮಂತ್ರಬುದ್ಧಿ' ತನ್ನ ಸಹೋದರ ಯುಕ್ತಿ ಸಾಮಂತನ ಕೈಗೆ ಅಧಿಕಾರ ಸೂತ್ರವನ್ನು ಹಸ್ತಾಂತರಿಸಿ ಮಂತ್ರವಿದ್ಯೆಯ ಬೆನ್ನೇರಿ ಹೋಗುತ್ತಾನೆ. ಅಣ್ಣನ ದೌರ್ಬಲ್ಯವನ್ನರಿತ ತಮ್ಮ ನೆರೆರಾಜ್ಯದ ರಾಜನೊಂದಿಗೆ ಕೈಜೋಡಿಸಿ ರಾಜ್ಯವನ್ನೇ ಕಸಿದುಕೊಂಡು ಅಣ್ಣ ಮತ್ತು ಆತನ ಪುಟ್ಟಮಗಳನ್ನು ಹುಟ್ಟು ಹಾಯಿಗಳಿಲ್ಲದ ದೋಣಿಯಲ್ಲಿ ಕೂರಿಸಿ ತಳ್ಳಿ ಬಿಡುತ್ತಾನೆ. ಆದರೆ ತಂದೆ ಮಗಳಿಬ್ಬರೂ ಬದುಕಿ ಒಂದು ದ್ವೀಪ ಸೇರುತ್ತಾರೆ.

ಆ ದ್ವೀಪ ನರಭಕ್ಷಕ ಒಡತಿ ಚೌಡಿ ಮತ್ತು ಆಕೆಯ ಮಗ ಕಿರಾತನ ಅನಾಗರಿಕ ಜಗತ್ತು. ತನ್ನನ್ನು ಕೊಂದು ತಿನ್ನಲು ಮುಂದಾಗುವ ಚೌಡಿಯನ್ನು ತನ್ನ ಮಂತ್ರ ವಿದ್ಯೆಯ ಬಲದಿಂದ ಕೊಂದು ಆಕೆಯ ಮಗ ಕಿರಾತನನ್ನು ಮಂತ್ರಬುದ್ಧಿ ತನ್ನ ಗುಲಾಮನಾಗಿಸುತ್ತಾನೆ. ಈ ಚಿತ್ರಣ ಮೊದಮೊದಲು ಆತ್ಮರಕ್ಷಣೆಗಾಗಿ ದುಷ್ಟಶಕ್ತಿಯನ್ನು ನಿಗ್ರಹಿಸುವಂತೆ ತೋರುತ್ತದೆ. ಆ ಬಳಿಕ ಚೌಡಿಯ ಮಗ ಕಿರಾತನನ್ನು 'ತನ್ನ ಗುಲಾಮನಾಗಿ ಮಂತ್ರಬುದ್ಧಿ ಬಳಸುವ ಪರಿ ನವ ವಸಾಹತುಶಾಹಿಯ ಕೌರ್ಯದಂತೆ ಭಾಸವಾಗುತ್ತದೆ. ಇನ್ನೊಂದು ದೃಷ್ಟಿಕೋನದಲ್ಲಿ ಆಧುನಿಕ ಕಾಲಘಟ್ಟದ ಬಂಡವಾಳಶಾಹಿ ಶಕ್ತಿಗಳು ಕಾಡಿನ ಮಕ್ಕಳಾದ ಆದಿವಾಸಿಗಳ ಬದುಕನ್ನು ದುಸ್ತರಗೊಳಿಸಿ ಅವರ ಮೇಲೆ ಪ್ರಾಬಲ್ಯ ಸಾಧಿಸುವ ಕೌರ್ಯದ ಮೂರ್ತರೂಪದಂತೆಯೂ ತೋರುತ್ತದೆ.

ನರಭಕ್ಷಕಿ ಚೌಡಿಯ ಅಟ್ಟಹಾಸಕ್ಕೆ ಬೆದರಿ ದಾರಿ ಕಾಣದೇ ಒಂಥರಾ ವಿಚಿತ್ರ ಬಂಧನಕ್ಕೊಳಗಾಗಿದ್ದ 'ಗಾಳಿ ಕಿನ್ನರ'ನಿಗೆ ಮಂತ್ರಬುದ್ಧಿ ತನ್ನ ಮಂತ್ರದಂಡದ ಶಕ್ತಿಯ ಮೂಲಕ ವಿಮೋಚನೆ ನೀಡುತ್ತಾನಾದರೂ ಆ ಬಳಿಕ ತನ್ನ ಕಿಂಕರನಂತೆ ಬಳಸಿಕೊಳ್ಳುತ್ತಾನೆ.



ಒಂದು ದಿನ ಮಂತ್ರಬುದ್ಧಿಯ ಪುತ್ರಿ ಕುಮಾರಿಗೆ ದ್ವೀಪದ ಬಳಿ ಒಂದು ಹಡಗು ಕಾಣಸಿಗುತ್ತದೆ. ಅದರಲ್ಲಿ ಮಗಳ ಮದುವೆ ಮುಗಿಸಿಕೊಂಡು ಹೊರಟಿರುವ ನೆರೆರಾಜ್ಯದ ರಾಜ ಮತ್ತು ಆತನ ಪರಿವಾರದೊಂದಿಗೆ ಮಂತ್ರಬುದ್ಧಿಯ ತಮ್ಮ ಯುಕ್ತಿ ಸಾಮಂತನೂ ಇರುತ್ತಾನೆ. ಇವರಿಗೆಲ್ಲಾ ಪಾಠ ಕಲಿಸುವ ಸಲುವಾಗಿ ಮಂತ್ರಬುದ್ಧಿ ತನ್ನ ಮಂತ್ರದಂಡದ ಮೂಲಕ ಭಯಂಕರ ಗುಡುಗು, ಮಿಂಚು, ಬಿರುಗಾಳಿ ಸೃಷ್ಟಿಸಿ ಅಲ್ಲೋಲಕಲ್ಲೋಲ ಮಾಡಿಬಿಡುತ್ತಾನೆ. ಹಡಗಿನಲ್ಲಿದ್ದವರೆಲ್ಲಾ ದಿಕ್ಕಾಪಾಲಾಗಿಬಿಡುತ್ತಾರೆ. ಹೀಗಿರಲು ನೆರೆರಾಜ್ಯದ ರಾಜಕುಮಾರನನ್ನು ತನ್ನ ಕಿಂಕರ ಗಾಳಿ ಕಿನ್ನರನ ಮೂಲಕ ತನ್ನ ಗುಹೆಯ ಬಳಿ ತರಿಸುತ್ತಾನೆ. ಅಲ್ಲಿ ಕುಮಾರಿ ಮತ್ತು ಕುಮಾರನ ಮಧ್ಯೆ ಪ್ರೇಮ ಅಂಕುರಿಸುತ್ತದೆ. ಮಂತ್ರಬುದ್ಧಿಯೂ ಇದನ್ನೇ ಬಯಸುತ್ತಾನಾದರೂ ಕುಮಾರನನ್ನೂ ತನ್ನ ಆಣತಿ ಮೀರದಂತೆ ಪಳಗಿಸಲು ಮಂತ್ರಬುದ್ಧಿ ವಿಕಟ ನಾಟಕವಾಡುತ್ತಾನೆ. ಎರಡು ಮನಸುಗಳ ಮಿಲನಕ್ಕೆ, ಬೆಸುಗೆಗೆ ತಡೆಯೊಡ್ಡುತ್ತಾನೆ.

ಒಂದೆಡೆ ಮಂತ್ರಬುದ್ಧಿಯ ತಮ್ಮ ನೆರೆರಾಜ್ಯದ ರಾಜನ ಕೊಲೆಗೆ ಆತನ ತಮ್ಮನೊಂದಿಗೆ ಸೇರಿ ಸಂಚು ರೂಪಿಸುತ್ತಾನೆ. ಇನ್ನೊಂದೆಡೆ ದ್ವೀಪದ ಮೂಲ ನಿವಾಸಿ ಕಿರಾತ ಮಂತ್ರಬುದ್ಧಿಯ ಕೊಲೆಗೆ ಸಂಚು ರೂಪಿಸುತ್ತಾನೆ. ಎಲ್ಲಾ ಸಂಚುಗಳನ್ನೂ ಗಾಳಿಕಿನ್ನರ ವಿಫಲಗೊಳಿಸುತ್ತಾನೆ. ಹೀಗೆ ಅಧಿಕಾರಕ್ಕಾಗಿ ಒಬ್ಬನ ತಲೆ ಇನ್ನೊಬ್ಬ ಉರುಳಿಸುವ ಸಂಚು ನಾಟಕದುದ್ದಕ್ಕೂ ನಡೆಯುತ್ತದೆ. ಆಧುನಿಕ ಕಾಲದ ಕಾಲೆಳೆಯುವ ರಾಜಕೀಯ ಕುತಂತ್ರವನ್ನು 'ಸುಂಟರಗಾಳಿ' ನಾಟಕದ ಮೂಲಕ ವೈದೇಹಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಇಲ್ಲಿ ಕೊನೆಯವರೆಗೂ ಶಿಕ್ಷೆಯೇ ಪರಿಹಾರವೆಂಬಂತೆ ಸಾಗುವ ನಾಟಕ ಕಟ್ಟಕಡೆಯಲ್ಲಿ ಕ್ಷಮೆಯ ಮೂಲಕ ಸುಖಾಂತ್ಯಗೊಳ್ಳುತ್ತದೆ. ಕುಮಾರಿಯ ಮುಗ್ಧಮನಸ್ಸು, ಎಲ್ಲವನ್ನೂ ಕ್ಷಮಿಸಲು ಹಾತೊರೆಯುವ ನಿಷ್ಕಲ್ಮಷ ಅಂತಃಕರಣ ಮಂತ್ರಬುದ್ಧಿಯ ಮನಸ್ಸನ್ನು ಪರಿವರ್ತಿಸುತ್ತದೆ.

ಇಲ್ಲಿ ಫ್ಯಾಂಟಸಿಯಿದೆ, ರಮ್ಯತೆಯಿದೆ, ಪ್ರಣಯವಿದೆ, ಶೃಂಗಾರವಿದೆ, ಕಾವ್ಯವಿದೆ, ಮೋಸವಿದೆ, ಶಿಕ್ಷೆಯಿದೆ, ಕಟ್ಟಕಡೆಯಲ್ಲಿ ಕ್ಷಮೆಯೂ ಇದೆ. ಮಂಡ್ಯ ರಮೇಶರಂತಹ ಅಭಿಜಾತ ರಂಗಪ್ರತಿಭೆಯ ಗರಡಿಯಲ್ಲಿ 'ನಟನಾ' ತಂಡದ ಶ್ರೇಷ್ಠಮಟ್ಟದ ಅಭಿನಯಕ್ಕೆ ನಿರ್ದೇಶಕ ಜೀವನ್‌ರಾಂ ಸುಳ್ಯರ ಸೃಜನಶೀಲ ಮನಸ್ಸಿನ ಅದ್ಭುತ ತಂತ್ರಗಾರಿಕೆ ಒಂದು ವಿಶೇಷ ಜುಗಲ್‌ಬಂದಿಯಂತಿತ್ತು. ಜೀವನ್ ರಾಮ್‌ರ ರಂಗಸಜ್ಜಿಕೆಯ ಬಗ್ಗೆ ಎರಡು ಮಾತಿಗೆ ಅವಕಾಶವೇ ಇಲ್ಲ. ಹಿನ್ನೆಲೆ ಸಂಗೀತ, ಧ್ವನಿ ಮತ್ತು ಬೆಳಕು ಇಡೀ ಪ್ರದರ್ಶನಕ್ಕೆ ವಿಶೇಷ ಮೆರಗು ಕೊಟ್ಟಿತ್ತು. ಹಿತಮಿತ ಹಾಸ್ಯದೊಂದಿಗೆ ನೀತಿ ಬೋಧನೆಯನ್ನೂ ಮಾಡುವ 'ಸುಂಟರಗಾಳಿ' ಒಂದು ಅತ್ಯಂತ ಸರಳ ನೀತಿಕತೆಯ ಹೂರಣವಾದರೂ ಪ್ರೇಕ್ಷಕ ಸುಮಾರು ಒಂದೂ ಕಾಲು ತಾಸು ಒಂದಿನಿತೂ ಏಕಾಗ್ರತೆ ತಪ್ಪಿಸದಂತೆ ವೀಕ್ಷಿಸುವಲ್ಲಿ ಇಡೀ ತಂಡದ ಶ್ರಮವಿತ್ತು. ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕೆಂದು ಮನಸು ಬಯಸದಿರದು.

● ಇಸ್ಮತ್ ಪಜೀರ್

ಅರೇಬಿಯದ ಎಲ್ಲಾ ಅತ್ತರುಗಳನ್ನು ಪೂಸಿದರೂ


ನರೇಂದ್ರ ಮೋದಿ ಅಂದರೆ ಭಾರತದ ಆತಂಕಿತ, ಹತಾಶ ಜನತೆಯನ್ನು ಹಾಲುಜೇನು ಹರಿಯುವ ನಾಡಿನೆಡೆಗೆ ಕೊಂಡೊಯ್ಯುವ ಆಧುನಿಕ ಮೋಸೆಸ್; ಆತ ಭಾರತದ ಮುಂದಿನ ಪ್ರಧಾನಿಯಾಗಲು ಅತ್ಯಂತ ಸೂಕ್ತ ವ್ಯಕ್ತಿ ಎಂದು ಬಿಂಬಿಸುವುದರಲ್ಲಿ ತೊಡಗಿದೆ ನಮ್ಮ ದೇಶದ ಒಂದು ದೊಡ್ಡ ಜನವರ್ಗ. ಇತ್ತೀಚಿನ ಕುಂಭಮೇಳದಲ್ಲಿ ಭಾಗವಹಿಸಿದ ಬಿಜೆಪಿ ಮತ್ತು ಆರೆಸ್ಸೆಸ್ ಮಾತ್ರ ಇದನ್ನು ಹೇಳುತ್ತಿರುವುದಲ್ಲ. ಮೋದಿಯ ಪ್ರಚಾರದಿಂದ ಅತ್ಯುದ್ರೇಕಕ್ಕೊಳಗಾಗಿರುವ ಅನೇಕ 'ಸುಶಿಕ್ಷಿತ' ಯುವಜನರೂ, ಭಾರತದ ಸೋಕಾಲ್ಡ್ 'ಸುಶಿಕ್ಷಿತ' ವರ್ಗದ ದೊಡ್ಡದೊಂದು ಜನವಿಭಾಗವೂ ಹೀಗೆನ್ನುತ್ತಿದೆ.


ಇತ್ತೀಚೆಗೆ ನಾನು ದೆಹಲಿಯಿಂದ ಭೋಪಾಲಕ್ಕೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ನನ್ನ ಪಕ್ಕದ ಸೀಟಿನಲ್ಲಿದ್ದಾತ ಓರ್ವ ಗುಜರಾತಿ ವಾಣಿಜ್ಯೋದ್ಯಮಿ. ಆತನೊಂದಿಗೆ ಮಾತಾಡುತ್ತ ಮೋದಿ ಬಗ್ಗೆ ಆತನ ಅಭಿಪ್ರಾಯವೇನೆಂದು ಕೇಳಿದೆ. ಆತ ಮೋದಿಯನ್ನು ಕೊಂಡಾಡತೊಡಗಿದರು. ಆಗ ಮಧ್ಯದಲ್ಲಿ ಬಾಯಿ ಹಾಕಿದ ನಾನು, 2002ರಲ್ಲಿ ಗುಜರಾತ್‌ನಲ್ಲಿ ನಡೆದ ಸುಮಾರು 2000 ಮುಸ್ಲಿಮರ ಹತ್ಯಾಕಾಂಡದ ಕುರಿತು ಪ್ರಶ್ನಿಸಿದೆ. ಇದಕ್ಕುತ್ತರವಾಗಿ ಆತ 'ಗುಜರಾತ್‌ನಲ್ಲಿ ಮುಸ್ಲಿಮರು ಸದಾ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದರು. ಆದರೆ 2002ರ ಬಳಿಕ ಅವರಿಗೆ ಅವರ ಜಾಗವನ್ನು ತೋರಿಸಲಾಗಿದೆ. ಆ ಲಾಗಾಯ್ತು ರಾಜ್ಯದಲ್ಲಿ ಶಾಂತಿ ನೆಲೆಸಿದೆ' ಎಂದರು. ಆಗ ನಾನೆಂದೆ: 'ಇದು ಮಸಣದ ಶಾಂತಿ; ಶಾಂತಿಯ ಜೊತೆ ನ್ಯಾಯ ಇಲ್ಲದಿದ್ದರೆ ಅಂತಹ ಶಾಂತಿ ಬಹುಕಾಲ ಬಾಳಲಾರದು.' ನನ್ನ ಮಾತಿಗೆ ಸಿಟ್ಟಿಗೆದ್ದ ವಾಣಿಜ್ಯೋದ್ಯಮಿ ಅಲ್ಲಿಂದೆದ್ದು ಬೇರೊಂದು ಸೀಟಿನಲ್ಲಿ ಕುಳಿತರು.

ವಾಸ್ತವದಲ್ಲಿ ಇಂದು ಗುಜರಾತ್‌ನ ಮುಸ್ಲಿಮರು ಭಯಭೀತರಾಗಿದ್ದಾರೆ. ತಾವೇನಾದರೂ 2002ರ ಆ ನೆತ್ತರು ಹೆಪ್ಪುಗಟ್ಟಿಸುವಂಥ ಘೋರ ಘಟನೆಗಳ ವಿರುದ್ಧ ಧ್ವನಿ ಎತ್ತಿದರೆ ತಮ್ಮ ಮೇಲೆ ದಾಳಿಗಳಾಗಬಹುದು, ತಮ್ಮನ್ನು ಬಲಿಪಶುಗಳಾಗಿಸಬಹುದೆಂದು ಭಯಪಡುತ್ತಿದ್ದಾರೆ. ಭಾರತದಾದ್ಯಂತ ಇರುವ 20 ಕೋಟಿಗೂ ಅಧಿಕ ಮುಸ್ಲಿಮರು ಮೋದಿಯನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದಾರೆ (ಕೆಲವೊಂದು ಕಾರಣಗಳಿಗಾಗಿ ಭಿನ್ನಾಭಿಪ್ರಾಯ ತಳೆದಿರುವ ಮುಸ್ಲಿಮರೂ ಇದ್ದಾರೆ. ಆದರೆ ಇಂಥವರ ಸಂಖ್ಯೆ ಬೆರಳೆಣಿಕೆಯಷ್ಟು).

ಗೋಧ್ರಾದಲ್ಲಿ ರೈಲುಬಂಡಿಯೊಳಗೆ 59 ಹಿಂದೂಗಳ ಹತ್ಯೆ ನಡೆದುದಕ್ಕೆ ಒಂದು 'ಪೂರ್ವಸಂಕಲ್ಪ ಇಲ್ಲದ' ಪ್ರತಿಕ್ರಿಯೆಯಾಗಿ ಗುಜರಾತ್‌ನ ಘಟನೆ ಸಂಭವಿಸಿತೆಂದು ಮೋದಿ ಬೆಂಬಲಿಗರು ವಾದಿಸುತ್ತಾರೆ. ನಾನು ಈ ಕತೆಯನ್ನು ನಂಬುವುದಿಲ್ಲ. ಯಾಕೆಂದರೆ ಒಂದು, ಗೋಧ್ರಾದಲ್ಲಿ ನಿಜವಾಗಿ ಏನು ನಡೆಯಿತೆನ್ನುವುದು ಇಂದಿಗೂ ಒಂದು ರಹಸ್ಯವಾಗಿಯೇ ಉಳಿದಿದೆ. ಎರಡು, ಗೋಧ್ರಾ ದುರ್ಘಟನೆಯ ಕಾರಣಕರ್ತರನ್ನು ಗುರುತಿಸಿ ಅವರಿಗೆ ಕಠಿಣ ಶಿಕ್ಷೆ ವಿಧಿಸಲೇಬೇಕಾಗಿದೆ ನಿಜ, ಆದರೆ ಇದನ್ನು ಹಿಡಿದುಕೊಂಡು ಗುಜರಾತ್‌ನ ಎಲ್ಲಾ ಮುಸ್ಲಿಮರ ಮೇಲೆ ದಾಳಿ ನಡೆಸುವುದಕ್ಕೆ ಯಾವ ರೀತಿಯ ಸಮರ್ಥನೆ ಇದೆ? ಗುಜರಾತ್‌ನಲ್ಲಿ ಮುಸ್ಲಿಮರ ಜನಸಂಖ್ಯೆ ಎಷ್ಟು? ಬರೀ 9 ಪ್ರತಿಶತ. ಮಿಕ್ಕ 91 ಪ್ರತಿಶತದಷ್ಟು ಜನರಲ್ಲಿ ಹೆಚ್ಚಿನವರು ಹಿಂದೂಗಳು. 2002ರಲ್ಲಿ ಗುಜರಾತ್‌ನಲ್ಲಿ ಮುಸ್ಲಿಮರ ನರಮೇಧ ನಡೆಯಿತು, ಅವರ ಮನೆಮಠಗಳನ್ನು ಸುಟ್ಟುಹಾಕಲಾಯಿತು, ಅವರ ಮೇಲೆ ಇನ್ನಿತರ ಭೀಭತ್ಸಕರ ದೌರ್ಜನ್ಯಗಳನ್ನು ಎಸಗಲಾಯಿತು. ಇದೆಲ್ಲವನ್ನೂ 'ಪೂರ್ವಸಂಕಲ್ಪ ಇಲ್ಲದ' ಪ್ರತಿಕ್ರಿಯೆ ಎಂದು ಕರೆಯುವಾಗ ಜರ್ಮನಿಯ ಕ್ರಿಸ್ಟಲ್‌ನಾಕ್ಟ್ ಘಟನೆ ನೆನಪಾಗುತ್ತದೆ. ನಾಜಿಗಳ ಕಿರುಕುಳಕ್ಕೊಳಗಾಗಿದ್ದ ಯಹೂದ್ಯ ಕುಟುಂಬವೊಂದರ ಯುವಕ 1938ರ ನವಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಜರ್ಮನ್ ರಾಜತಾಂತ್ರಿಕನೋರ್ವನನ್ನು ಗುಂಡಿಟ್ಟು ಕೊಂದ. ಆಗ ಜರ್ಮನಿಯ ಇಡೀ ಯಹೂದ್ಯ ಸಮುದಾಯವನ್ನು ಗುರಿಯಾಗಿಸಿ ನಡೆದ ದಾಳಿಗಳ ವೇಳೆ ಅನೇಕ ಯಹೂದ್ಯರನ್ನು ಕೊಂದುಹಾಕಲಾಯಿತು, ಅವರ ಪ್ರಾರ್ಥನಾಲಯಗಳನ್ನು (ಸಿನಗಾಗ್) ಸುಟ್ಟುಹಾಕಲಾಯಿತು, ಅಂಗಡಿಮುಗ್ಗಟ್ಟುಗಳನ್ನು ಲೂಟಿಮಾಡಲಾಯಿತು. ಅದು ನಾಜಿ ಅಧಿಕಾರಿಗಳು ಮತಾಂಧ ಜನಜಂಗುಳಿಗಳನ್ನು ಬಳಸಿ ನಡೆಸಿದ ಯೋಜಿತ ಕಾರ್ಯಾಚರಣೆ ಆಗಿತ್ತು, ಆದರೆ ಜರ್ಮನಿಯ ನಾಜಿ ಸರ್ಕಾರ ಅದನ್ನೊಂದು 'ಪೂರ್ವಸಂಕಲ್ಪ ಇಲ್ಲದ' ಪ್ರತಿಕ್ರಿಯೆ ಎಂದು ಕರೆದಿತ್ತು.

ಚಾರಿತ್ರಿಕವಾಗಿ ಭಾರತ ಸ್ಥೂಲವಾಗಿ ಒಂದು ವಲಸಿಗರ ನಾಡಾಗಿರುವುದರಿಂದ ಇಲ್ಲಿ ಅಪಾರ ವೈವಿಧ್ಯತೆ ಇದೆ. ಹಾಗಾಗಿ ಈ ದೇಶವನ್ನು ಒಂದುಗೂಡಿಸಿ ಪ್ರಗತಿಪಥದಲ್ಲಿ ಕೊಂಡೊಯ್ಯಬಲ್ಲ ಏಕಮಾತ್ರ ರಾಜ್ಯನೀತಿ ಎಂದರೆ ಜಾತ್ಯತೀತತೆ. ಎಲ್ಲಾ ಸಮುದಾಯಗಳನ್ನೂ ಎಲ್ಲಾ ಪಂಥಗಳನ್ನೂ ಸಮಾನವಾಗಿ ಕಾಣುತ್ತ ಎಲ್ಲರಿಗೂ ಸಮಾನಗೌರವ ನೀಡುವುದೇ ಜಾತ್ಯತೀತತೆ. ಮಹಾನ್ ಚಕ್ರವರ್ತಿ ಅಕ್ಬರನ ನೀತಿಯೂ ಇದೇ ಆಗಿತ್ತು, ಇದನ್ನೇ ಅನುಸರಿಸಿದ ನಮ್ಮ ರಾಷ್ಟ್ರ ಸಂಸ್ಥಾಪಕರು (ಪಂಡಿತ್ ನೆಹರೂ ಮತ್ತು ಸಹೋದ್ಯೋಗಿಗಳು) ನಮಗಾಗಿ ಒಂದು ಜಾತ್ಯತೀತ ಸಂವಿಧಾನವನ್ನು ರಚಿಸಿದರು. ಈ ಜಾತ್ಯತೀತತೆಯ ನೀತಿಯನ್ನು ಪಾಲಿಸದೆ ಹೋದರೆ ಇಷ್ಟೊಂದು ವೈವಿಧ್ಯತೆ, ಇಷ್ಟೊಂದು ಧರ್ಮಗಳು, ಇಷ್ಟೊಂದು ಜಾತಿಗಳು, ಇಷ್ಟೊಂದು ಭಾಷೆಗಳು, ಇಷ್ಟೊಂದು ಜನಾಂಗೀಯ ಗುಂಪುಗಳಿಂದ ಕೂಡಿರುವ ನಮ್ಮ ದೇಶ ಒಂದು ದಿನವೂ ಬದುಕುಳಿಯಲಾರದು.





ಆದುದರಿಂದಲೆ ಭಾರತ ಕೇವಲ ಹಿಂದೂಗಳಿಗಷ್ಟೆ ಸೇರಿದ್ದಲ್ಲ; ಮುಸಲ್ಮಾನರು, ಸಿಖ್ಖರು, ಕ್ರೈಸ್ತರು, ಪಾರ್ಸಿಗಳು, ಜೈನರು ಇವರೆಲ್ಲರಿಗೂ ಸಮಾನವಾಗಿ ಸೇರಿದೆ. ಇಲ್ಲಿ ಹಿಂದೂಗಳು ಮಾತ್ರ ಪ್ರಥಮ ದರ್ಜೆಯ ಪ್ರಜೆಗಳಾಗಿ, ಮಿಕ್ಕವರೆಲ್ಲ ದ್ವಿತೀಯ, ತೃತೀಯ ದರ್ಜೆಯ ಪ್ರಜೆಗಳಾಗಿ ಬದುಕಬೇಕಾಗಿಲ್ಲ, ಇಲ್ಲಿ ಎಲ್ಲರೂ ಪ್ರಥಮ ದರ್ಜೆಯ ಪ್ರಜೆಗಳು. ಗುಜರಾತ್ 2002ರ ವೇಳೆ ಸಂಭವಿಸಿದ ಸಾವಿರಾರು ಮುಸ್ಲಿಮರ ಹತ್ಯಾಕಾಂಡವನ್ನು ಹಾಗೂ ಇನ್ನಿತರ ಘೋರ ದೌರ್ಜನ್ಯಗಳನ್ನು ಮರೆಯುವುದಾಗಲಿ ಕ್ಷಮಿಸುವುದಾಗಲಿ ಎಂದಿಗೂ ಸಾಧ್ಯವಿಲ್ಲ, ಅರೇಬಿಯದಲ್ಲಿ ಸಿಗುವ ಎಲ್ಲಾ ಅತ್ತರುಗಳನ್ನು ಬಳಸಿದರೂ ಸಹ ಮೋದಿಗೆ ಮೆತ್ತಿಕೊಂಡಿರುವ ಮಾಲಿನ್ಯವನ್ನು ತೊಳೆದುಹಾಕಲು ಸಾಧ್ಯವಿಲ್ಲ.

ಮೋದಿ ಬೆಂಬಲಿಗರ ಪ್ರಕಾರ ಗುಜರಾತ್ ಹತ್ಯಾಕಾಂಡದಲ್ಲಿ ಮೋದಿ ಕೈವಾಡ ಇರಲಿಲ್ಲ ಮತ್ತು ಯಾವ ನ್ಯಾಯಾಲಯವೂ ಆತ ತಪ್ಪಿತಸ್ಥನೆಂದು ಹೇಳಿಲ್ಲ. ನಾನು ನಮ್ಮ ನ್ಯಾಯಾಂಗದ ಬಗ್ಗೆ ವಿಮರ್ಶೆ ಮಾಡಲಿಚ್ಛಿಸುವುದಿಲ್ಲ. ಆದರೆ ಗುಜರಾತ್ ಹತ್ಯಾಕಾಂಡದಲ್ಲಿ ಮೋದಿ ಕೈವಾಡ ಇರಲಿಲ್ಲವೆಂಬ ಕತೆಯನ್ನು ನಾನು ನಂಬುವುದಿಲ್ಲ. ಅಂಥಾ ಭೀಭತ್ಸಕರ ಘಟನೆಗಳು ರಾಜ್ಯಾದ್ಯಂತ ನಡೆದ ಸಂದರ್ಭದಲ್ಲಿ ಆತ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಹೀಗಿರುವಾಗ ಆತನ ಕೈವಾಡ ಇರಲಿಲ್ಲವೆಂದರೆ ಯಾರಾದರೂ ನಂಬಲು ಸಾಧ್ಯವೇ? ಕನಿಷ್ಠ ನನ್ನಿಂದಂತೂ ಸಾಧ್ಯವಿಲ್ಲ.

ಕೇವಲ ಒಂದು ಉದಾಹರಣೆ ಕೊಡುತ್ತೇನೆ. ಗೌರವಾನ್ವಿತ ಮಾಜಿ ಸಂಸದ ಎಹಸಾನ್ ಜಾಫ್ರಿ ಅಹಮದಾಬಾದ್‌ನ ಚಮನ್‌ಪುರ ಎಂಬಲ್ಲಿ ಬಹುತೇಕ ಮುಸಲ್ಮಾನರೇ ಇದ್ದ ಗುಲ್‌ಬರ್ಗ್ ಹೌಸಿಂಗ್ ಸೊಸೈಟಿಯ ಒಂದು ಮನೆಯಲ್ಲಿ ವಾಸವಾಗಿದ್ದರು. ಅವರಿಗೆ ವಯಸ್ಸಾಗಿತ್ತು. ಅವರ ಪತ್ನಿ ಜಾಕಿಯಾ ಜಾಫ್ರಿಯ ದಾಖಲಿತ ಹೇಳಿಕೆ ಪ್ರಕಾರ 28.2.2002ರಂದು ಮತಾಂಧರ ಗುಂಪೊಂದು ಗ್ಯಾಸ್ ಸಿಲಿಂಡರ್‌ಗಳನ್ನು ಬಳಸಿ ಸೊಸೈಟಿಯ ಕಾಂಪೌಂಡ್ ಗೋಡೆಯನ್ನು ಕೆಡವಿಹಾಕಿತು. ನಂತರ ಅವರೆಲ್ಲ ಎಹಸಾನ್ ಜಾಫ್ರಿಯನ್ನು ಮನೆಯಿಂದ ಹೊರಗೆಳೆದು ತಂದು, ಆತನ ಬಟ್ಟೆಗಳನ್ನೆಲ್ಲ ಕಳಚಿ ಬೆತ್ತಲಾಗಿಸಿದ ಬಳಿಕ ಖಡ್ಗದಿಂದ ಆತನ ಕೈಕಾಲುಗಳನ್ನು ಕತ್ತರಿಸಿ, ಬೆಂಕಿ ಕೊಟ್ಟು ಸಾಯಿಸಿದರು. ಇಷ್ಟು ಮಾತ್ರವಲ್ಲದೆ ಇನ್ನೂ ಅನೇಕ ಮುಸ್ಲಿಮರನ್ನು ಕೊಂದು ಅವರ ಮನೆಗಳನ್ನೆಲ್ಲ ಸುಟ್ಟುಹಾಕಿದರು. ಚಮನ್‌ಪುರದಿಂದ ಸಮೀಪದ ಪೊಲೀಸ್ ಠಾಣೆಗಿರುವ ದೂರ 1 ಕಿಮೀಗಿಂತಲೂ ಕಡಿಮೆ. ಚಮನ್‌ಪುರ ಮತ್ತು ಅಹಮದಾಬಾದ್ ನಗರ ಪೊಲೀಸ್ ಕಮಿಷನರ್ ಕಚೇರಿ ನಡುವಿನ ಅಂತರ 2 ಕಿಮೀಗೂ ಕಮ್ಮಿ. ಹೀಗಿರುವಾಗ ಮುಖ್ಯಮಂತ್ರಿಯವರಿಗೆ ಅಂದಿನ ವಿದ್ಯಮಾನಗಳ ಅರಿವಿರಲಿಲ್ಲ ಎಂಬ ವಿಚಾರ ಕಲ್ಪನೆಗೂ ಮೀರಿದ್ದು. ಇಷ್ಟೊಂದು ಬರ್ಬರವಾಗಿ ಕೊಲೆಗೀಡಾ[ದ] ತನ್ನ ಪತಿಗೆ ನ್ಯಾಯ ಒದಗಿಸುವ ಸಲುವಾಗಿ ಜಾಕಿಯ[ಾ] ಕಂಡಕಂಡಲ್ಲಿಗೆ ಎಡತಾಕುತ್ತಿದ್ದಾರೆ. ಹಿಂದೆ ಆಕೆ ಮೋ[ದಿ] ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಹೂಡಿದ್ದ ಕ್ರಿಮಿನ[ಲ್] ಪ್ರಕರಣ ವಜಾಗೊಂಡಿತ್ತು. (ಕಾರಣ ಸರ್ವೋ[ಚ್ಚ] ನ್ಯಾಯಾಲಯ ವಿರಚಿತ ಎಸ್‌ಐಟಿ ತನ್ನ ಅಂತಿಮ ವರದಿಯಲ್ಲಿ ಮೋದಿ ವಿರುದ್ಧ ಪುರಾವೆಗಳು ಸಿಕ್ಕ[ಿಲ್ಲ] ಎಂದಿದೆ). ಇತ್ತೀಚೆಗಷ್ಟೆ (10 ವರ್ಷಗಳು ಕಳೆದ[ು] ಕೆಳಕೋರ್ಟಿನ ಆದೇಶವನ್ನು ತಳ್ಳಿಹಾಕಿದ ಸರ್ವೋ[ಚ್ಚ] ನ್ಯಾಯಾಲಯ ಆಕೆಯ ಆಕ್ಷೇಪಣಾ ಅರ್ಜಿಯನ[್ನು] ಪರಿಗಣಿಸುವಂತೆ ಆದೇಶಿಸಿದೆ. ನ್ಯಾಯಾಂಗದ ವಿಚಾರ[ಣೆ] ಜಾರಿಯಲ್ಲಿರುವಾಗ ನಾನೀಗ ಈ ವಿಚಾರದಲ್ಲಿ ಇದಕ್ಕಿ[ಂತ] ಹೆಚ್ಚಿನದೇನನ್ನೂ ಹೇಳಹೋಗುವುದಿಲ್ಲ.

ತನ್ನಿಂದಾಗಿ ಗುಜರಾತ್ ಅಭಿವೃದ್ಧಿ ಹೊಂದಿ[ದೆ] ಎನ್ನುತ್ತಿದ್ದಾರೆ ಮೋದಿ. ಆದುದರಿಂದ ಮೊದಲು 'ಅಭಿವೃದ್ಧಿ' ಏನೆಂದು ನೋಡಬೇಕಾಗಿದೆ. ನನಗನಿಸುವ[ಂತೆ] ಅಭಿವೃದ್ಧಿ ಪದಕ್ಕೆ ಇರುವ ಅರ್ಥ ಒಂದೇ: ಜನಸಮೂಹ[ದ] ಜೀವನಮಟ್ಟವನ್ನು ಮೇಲಕ್ಕೇರಿಸುವುದು. ದೊಡ್ಡ ದೊ[ಡ್ಡ] ಔದ್ಯೋಗಿಕ ಸಂಸ್ಥೆಗಳಿಗೆ ವಿನಾಯಿತಿಗಳೊಂದಿಗೆ ಅಗ್ಗದರ[ದಲ್ಲಿ] ನೀರು, ವಿದ್ಯುತ್ತುಗಳನ್ನು ನೀಡುವುದರಿಂದ ಜನಸಮೂಹ[ದ] ಜೀವನಮಟ್ಟದಲ್ಲಿ ಏರಿಕೆ ಆಗದಿದ್ದರೆ ಅದನ್ನು ಅಭಿವ[ೃದ್ಧಿ] ಎನ್ನಲಾಗುವುದಿಲ್ಲ.

ಪ್ರಶ್ನಾರ್ಹ ಅಭಿವೃದ್ಧಿ

ಇಂದು ಗುಜರಾತ್‌ನ 48 ಪ್ರತಿಶತ ಮಕ್ಕ[ಳು] ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದು ರಾಷ್ಟ್ರೀ[ಯ] ಸರಾಸರಿಗಿಂತಲೂ ಜಾಸ್ತಿ. ಗುಜರಾತ್‌ನಲ್ಲಿ ಶಿಶುಗಳ ಹಾ[ಗೂ] ಬಸುರಿಯರ ಸಾವಿನ ಸಂಖ್ಯೆ ಹೆಚ್ಚಿದೆ. ಬುಡಕಟ್ಟು, ಪರಿ[ಶಿಷ್ಟ] ಜಾತಿ/ಹಿಂದುಳಿದ ಜಾತಿಗಳು ವಾಸವಿರುವ ಪ್ರದೇಶಗಳ[ಲ್ಲಿ] ಬಡವರ ಜನಸಂಖ್ಯೆ ಶೇಕಡಾ 57ರಷ್ಟಿದೆ. ರಾಮಚಂ[ದ್ರ] ಗುಹಾ ಬರೆದ ಇತ್ತೀಚಿನ ಲೇಖನ (ದ ಹಿಂದೂ, ಫೆ. 2013) ಪ್ರಕಾರ ಗುಜರಾತ್‌ನ ಪರಿಸರ ಕೆಡುತ್ತಿದೆ, ಶಿಕ್ಷಣ[ದ] ಗುಣಮಟ್ಟ ಕುಸಿಯುತ್ತಿದೆ, ಮಕ್ಕಳಲ್ಲಿ ಅಪೌಷ್ಟಿಕತೆ[ಯ] ಪ್ರಮಾಣ ಅಸಹಜವಾಗಿ ಹೆಚ್ಚಾಗಿದೆ. ಮೂರನೆ ಒಂದಂಶ[ಕ್ಕೂ] ಅಧಿಕ ಪ್ರೌಢ ವ್ಯಕ್ತಿಗಳ ಬಿಎಂಐ (Body Ma[ss] Index) 18.5ಕ್ಕಿಂತ ಕೆಳಮಟ್ಟದಲ್ಲಿದೆ. ಈ ವಿಚಾರದ[ಲ್ಲಿ] ಇಡೀ ದೇಶದ ಅಂಕಿಸಂಖ್ಯೆಗಳನ್ನು ಪರಿಗಣಿಸಿದರೆ [...] ಕೆಟ್ಟ ಪರಿಸ್ಥಿತಿ ಇರುವ ರಾಜ್ಯದಿಂದ ಆರಂಭಿಸಿದ[ರೆ] ಗುಜರಾತ್ 7ನೇ ಸ್ಥಾನದಲ್ಲಿ ನಿಲ್ಲುತ್ತದೆ. 2010[ರ] ಯುಎನ್‌ಡಿಪಿ ವರದಿ ಪ್ರಕಾರ ಅಭಿವೃದ್ಧಿಯ [...] ಆಯಾಮಗಳಾದ ಆರೋಗ್ಯ, ಶಿಕ್ಷಣ, ಆದಾಯಗಳ[ನ್ನು] ಪರಿಗಣಿಸಿದರೆ ಗುಜರಾತ್ 9ನೇ ಸ್ಥಾನದಲ್ಲಿರುವುದ[ನ್ನು] ಕಾಣಬಹುದು.

ವಾಣಿಜ್ಯೋದ್ಯಮಗಳ ಮುಖ್ಯಸ್ಥರೆಲ್ಲ ಮೋ[ದಿ] ಗುಜರಾತ್‌ನಲ್ಲಿ ವಾಣಿಜ್ಯಸ್ನೇಹಿ ವಾತಾವರಣ ನಿರ್ಮಿಸಿದ[ರು] ಎಂದು ವಾದಿಸುವುದರ ಬಗ್ಗೆ ಅನುಮಾನ ಇಲ್ಲ. ಆ[ದರೆ] ಭಾರತದಲ್ಲಿ ಬರೀ ವಾಣಿಜ್ಯೋದ್ಯಮಗಳು ಮಾ[ತ್ರ] ಇರುವುದೇ?

ಭಾರತೀಯರಿಗೆ ನಿಜಕ್ಕೂ ದೇಶದ ಭವಿಷ್ಯದ ಬ[ಗ್ಗೆ] ಕಾಳಜಿ ಇದೆಯಾದರೆ ಇಲ್ಲಿ ಹೇಳಿರುವುದನ್[ನು] ಪರಿಗಣಿಸಬೇಕೆಂಬುದಾಗಿ ವಿನಂತಿ. ಇಲ್ಲವಾದರೆ 1933ರ ಜರ್ಮನಿಯ ಜನ ಮಾಡಿದ ತಪ್ಪನ್ನೇ ಭಾರತೀಯ[ರು] ಮಾಡಬಹುದು.

– ಮಾರ್ಕಂಡೇಯ ಕಟ್ಜು (ಸರ್ವೋ[ಚ್ಚ] ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರು ಮತ್ತು ಪ್ರೆ[ಸ್] ಕೌನ್ಸಿಲ್ ಆಫ್ ಇಂಡಿಯಾದ ಹಾಲಿ ಅಧ್ಯಕ್ಷರು)

ಕನ್ನಡಕ್ಕೆ: ಸುರೇಶ್ ಭಟ್ ಬಾಕ್ರಬೈ[ಲ್]

ಕೃಪೆ: ದ ಹಿಂದ[ೂ]

ನಲ್ಲಿಗಳು ಸೋರುತ್ತಿವೆ...

ಬೆಳಗಿನ ಹುಂಜ
ಕೂಗುವದನೆ ಮರೆತಿದೆ
ಎಲ್ಲ ಹೃದಯಗಳಲೂ
ಗಾಢ ಕತ್ತಲು
ಮುಂಜಾವಿನ ಕನಸು
ಯಾರು ಕಾಣಬೇಕು.....

ಸೊಂಟದ ಕೆಳಗಿನ ಸರಕುಗಳು
ಜಾರುತ್ತಿವೆ.... ಮಾರುತ್ತಿವೆ....
ನೀತಿ ಹೇಳುವ
ಉಡುದಾರ ಮುಟುಚಿಕೊಳ್ಳುತ್ತಿದೆ.



ಎಲ್ಲೆಲ್ಲೂ ಉಚ್ಚೆ ವಿಸರ್ಜನೆ
ಕುರಿತ ಉಪನ್ಯಾಸಗಳು
ನಡುಮನೆಯ ಕಿಚ್ಚಿಗೆ
ಅಗ್ನಿಶಾಮಕದವರಿಗೆ ಕರೆ ಮಾಡುವ
ಪರಿಪಾಠ ಶುರುವಾಗಿದೆ.

ಎಲ್ಲಿ ನೋಡಿದರಲ್ಲಿ...
ಸೋರುತ್ತಿರುವ ನಲ್ಲಿಗಳು
ಕಚ್ಚೆಗಳನು ಭದ್ರಗೊಳಿಸಲು
ಟೆಂಡರು ಕರೆಯಲಾಗಿದೆ.


● ಲಿಂಗರಾಜ ಸೊಟ್ಟಪ್ಪನವರ

ಮರಣದಂಡನೆ ಬಗ್ಗೆ ನೀವೇನೇಳ್ತೀರಪ್ಪ

ಬಯಲುಸೀಮೆ

ಕಟ್ಟೆಪುರಾಣ

• ಬಿ.ಚಂದ್ರೇಗೌಡ



ಸೀರ ಯಾರಿಗೂ ಗೊತ್ತಿಲ್ಲದ ಸುದ್ದಿ ತಂದವನಂತೆ ಗಂಭೀರವಾಗಿ "ದಿಲ್ಲಿ ಪಾರ್ಲಿಮೆಂಟ್ ಮ್ಯಾಲೆ ...ಕಿದ್ನಲ್ಲಾ ಆ ಸಾಬಿಯ ನ್ಯಾಣಾಕಿದರು" ಎಂದು ಹಚ್ಚಿದ.

"ಆದಾಗ್ಲೆ ಹಳೆ ಸುದ್ದಿ ಕಣೊ ನೀನೀಗೇಳ್ತಿ" ಉಗ್ರಿ.

"ಪಾರ್ಲಿಮೆಂಟ ಮ್ಯಾಲೆ ಬಾಂಬಾಕ್ತನೆ ಅಂದ್ರೆ ...ನ್ಯಂಥಾ ಸಾಬಿ ಇದ್ದನೂ."

"ಆದ್ಯಾಕಾಕಿದಾ ಅಂದ್ರೆ, ಅವುನು ...ರದೋನಂತೆ ಕಣಮಾವ. ಕಾಶ್ಮೀರ ಬ್ಯಾರೆ ಮಾಡಿ ... ಹೋರಾಡತಿದ್ನಂತೆ. ಅದೇ ಟೈಮಿಗೆ ಪಾರ್ಲಿಮೆಂಟ ... ಯಾರೋ ಅಟ್ಯಾಕ್ ಮಾಡಿದರಂತೆ. ಅವುರನ್ನಲ್ಲ ...ಸಿದ್ರು. ಆಮ್ಯಾಲೆ ಇಂಥ ಪ್ಲಾನ್ ಯಾರಾಕ್ದೊದ್ರು ... ಪೊಲೀಸ್‌ನೋರು ತಲೆ ಕೆಡಿಸಿಕೊಂಡಾಗ ಈ ... ಸಿಕ್ಕಿದನಂತೆ. ಸರಿ ಇವುನ್ನೆ ತಂದು ನ್ಯಾತಾಕಿದರಂತೆ."

"ಆಂಗರಿವುನು ತೆಪ್ಪು ಮಾಡಿಲ್ಲ ಅನ್ನು."

"ಅದೇ ಅನುಮಾನ ಈಗ. ಮಾಡಿದ್ನೊ ಇಲವೊ ...ಯವಾಗಿ ನ್ಯಾಣಾಕಿದ್ರು ಅಂತ ಮಾತಾಡೋರು ...ಮೂಗ್ಯವುರೆ."

"ಅಲ್ಲಾ ಕಂಢ್ರ ಉಗ್ರಿ, ಆ ಕಾಶ್ಮೀರದಲ್ಲಿ ಆಟೊಂತರ ...ರುವಾಗ ಇವನೊಬ್ಬನ್ನ ಹಿಡಕಂಡು ಬರಕ್ಕೆ ...ಲೀಸ್‌ನೋರಿಗೇನು ತಿಕ್ಲೆ?" ಎಂದ ಸೀರ.

"ಪೊಲೀಸ್‌ನೋರ ಏನನ್ನ ಕಂಡಿದ್ದಿಯೋ ಮಾವ ...? ಚಿಕ್ಕಮುಗಳೂರಲ್ಲಿ ಅರುಣ ಅಂತ ...ಯಾದ್ಲು, ಪೊಲೀಸ್‌ನೋರು ಅವುಳ ಗಂಡನ್ನೆ ಹಿಡಿದು ...ಾಕಿದ್ರು. ಇನ್ನೇನು ಕತೇನೆ ಮುಗಿತು ಅನ್ನುವಾಗ ...ದ ಅಪರಾಧಿಗಳು ಸಿಕ್ಕಿದ್ರು. ಇಲ್ಲ ಅಂದ್ರೆ ಅವುಳ ...ನ್ನ ನೇಣಾಕಿರೋರು."

"ಅದೇನೊ ನಿಜಬುಡು. ಹೆಬ್ಬೂರ ಜನ ಒಂದು ...ಂಪು ಕಟಗಂಡು ಬಂದು ಕೆ.ಇ.ಬಿ. ಕಚೇರಿ ಮ್ಯಾಲೆ ... ಮಾಡಿ ಧ್ವಂಸ ಮಾಡಿ ಪರಾರಿಯಾದ್ರು. ಆಗ ...ಲೀಸ್‌ನೋರು ಬರುವಾಗ ಯಾವನೊ ನನ್ನಂಥೋನ್ನ ...ಬ್ಬಾರು ದಾರಿ ತೋರು ಬಾ ಅಂತ ಜೀಪಿನಲ್ಲಿ ...ಡೋದ್ರು. ಅಪರಾಧಿಗಳ ಹಿಡಕಂಡೋಗಿ ಬಳ್ಳಾರಿ ...ಾಕಿದಾಗ ದಾರಿ ತೋರಿದೊನ್ನೂ ಹಾಕಿದರತ್ತಗೆ. ... ನನಮಕ್ಕಳು ಪೊಲೀಸ್‌ನೋರು" ಎಂದ ಕಾಳಮಾವ.

"ಅದ್ಯಾಕಂಗೆ ಮಾಡ್ತರ್ಲ ಪೊಲೀಸ್‌ನೋರು?" ಎಂದಳು ...

"ಅವುರ ಮ್ಯಾಲೆ ಅಂತ ಒತ್ತಡ ಇರತದೆ ಕಣೆ. ನಮ್ಮ ...ದೇಗೌಡರು ಮಂತ್ರಿಯಾಗಿದ್ದಾಗ ಅರುಣಾ ಕೊಲೆ ... ಪೊಲೀಸ್‌ನೋರು ಅಪರಾಧಿಗಳ ಹಿಡಿಲಿಲ್ಲ, ಆಗ ... 'ಅಪರಾಧಿಗಳ ಇನ್ನು ಹಿಡದಿಲ್ಲ ಅಂದ್ರೆ ನೀವು ...ೀಸ್ ಅಂತ ಇರದ್ಯಾಕೆ? ನಾನು ಜಿಲ್ಲಾ ಉಸ್ತುವಾರಿ ... ಅಂತ ಇರದ್ಯಾಕೆ?' ಅಂತ ಜೋರು ಮಾಡಿದ್ರು. ...ಬ್ಬ ದಿನಕರ ಅಂತ ತಿಕ್ಕಲು ಪೊಲೀಸಿದ್ದ, ಅವುನೇಳಿದ ... ನಿರಪರಾಧಿನೆ ಹಿಡುದು ಜೈಲಿಗಾಕಿದ್ರು. ಅಂಗಾಗಿ ಪೊಲೀಸ್‌ನೋರು ಮಾಡಿರೊ ಕ್ಯಲಸ ಸರಿಯೋ ತಪ್ಪೊ ಅಂತ ತಿಳಕಳಕ್ಕೆ ಬ್ಯಾರೆ ಪೊಲೀಸ್ ನೇಮುಸಬೇಕಾಗ್ಯದೆ."

"ಆದ್ಕೆ ಕಣೊ ಉಗ್ರಿ, ಕ್ವಲೆ ಕೇಸ್ನಲ್ಲ ಖುಲಾಸೆ ಆಗೋದು" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾಕ್ಲ ಕುಲಾಸೆ ಆಯ್ತವೆ?" ಎಂದಳು ಜುಮ್ಮಿ.

"ಯಾಕೆ ಗೊತ್ತೇನಕ್ಕ? ಮಾಡಿರೊ ಕೊಲೆ ನೋಡಿರೋರಿರಬೇಕು. ಉಪಯೋಗಿಸಿದ ವೆಪನ್ ಸಿಗಬೇಕು. ಡಾಗುಟ್ರು ಸರ್ಟಿಫಿಕೇಟ್ ಸರಿಯಿರಬೇಕು. ಇವುನ್ನೆಲ್ಲಾ ಜೋಡಿಸಿ ಲಾಯರ್ರು ವಾದ ಮಾಡಬೇಕು. ಆಗ ತೀರ್ಪು ಬತ್ತದೆ. ಒಂದೇ ಒಂಚೂರು ಯಡವಟ್ಟಾದ್ರು ಸಾಕು ಕೇಸು ಕುಲಾಸೆ ಆಯ್ತದೆ. ಶ್ಯಾನುಭೋಗನ ಕೇಸು ಎಗರಿಹೋದದ್ದೇ ಅಂಗಲವೆ."

"ಯಂಗೆ ಅಂತ ಹೇಳ್ಳ."

"ಹೊಸಳ್ಳಿ ಜನ ಶ್ಯಾನುಭೋಗನ್ನ ಹ್ವಡದಾಕಿದ್ರು. ಎಚ್.ಟಿ. ಕೃಷ್ಣಪ್ಪಾರೆ ಹ್ವಡದಾಕಿದೋರ ಪರ ಲಾಯರು. ಮೆಡಿಕಲ್ ರಿಪೋರ್ಟಲ್ಲಿ ಉಂಡು ಮೂರು ಗಂಟೆ ಆಗಿತ್ತು. ಆದ್ರೆ ಸತ್ತೋನೆಡ್ತಿ ಆದಾಗ ಉಂಡು ವರಿಕೋದ್ರು ಅಂದ್ಲು, ಅಷ್ಟೇ ನೋಡವ ಕೇಸು ಎಗರಿಹೋಯ್ತು."

"ಇಂತ ಕೇಸ್ನಲ್ಲ ಎಗಿರ್‍ಯೋಗಿ ಅಪಜಲ್‌ಗುರು ಸಿಗಾಯ್ಕಂಡ ಅಂದ್ರೆ ಸರಿಯಾದ ಸಾಕ್ಷಿ ಇರಬೇಕು ಕಂಢ್ರ" ಎಂದ ಸೀರ.

"ಮರಣದಂಡನೆ ಸರಿಯೋ ತಪ್ಪೊ ಹೇಳು ದೊಡಪ್ಪ" ಎಂದ ವಾಟಿಸ್ಸೆ.

"ಇನ್ನೊಬ್ಬನ ಬದುಕ್ನೇ ತಗದೋನ್ನ ನ್ಯಾಣಾಕದು ಸರಿ."

"ನೀನೇನೇಳ್ತಿ ಚಿಗಪ್ಪ?"

"ಕೇಳದೇನ್ಲ, ನ್ಯಾಣಾಕದು ಸರಿ."

"ನಿಂದೇನೊ ಉಗ್ರಿ?"

"ನನಿಗೆ ಹೇಳದು ಸ್ವಲುಪ ಕಷ್ಟ ಆಗ್ಯದೆ ಕಣೊ ವಾಟಿಸ್ಸೆ. ಯಾಕೆ ಅಂದ್ರೆ ಇದೇ ಲಾಳನಕೆರೆ ಸಣ್ಣರಾಮಣ್ಣನ ಹುಡುಗ ಲೋಕೇಶ ಕಂಚನಳ್ಳಿ ಗಂಗಾಧರ ಮೂರ್ತಿಯ ಕ್ವಲೆ ಮಾಡಿದ. ಆ ಹುಡುಗನಿಗೆ ಆ ಕ್ವಲೆ ಬೇಕಿರಲಿಲ್ಲ. ಯಾರೊ ಹೇಳಿದ್ರು ಅಂತ ಮಾಡಿ ಜೀವಾವಧಿನೂ ಅನುಭವಿಸಿ ಬಂದವುನೆ. ಸಿಕ್ಕಿದ್ರೆ 'ಏನು ಉಗ್ರಣ್ಣ?' ಅಂತನೆ. 'ತಪ್ಪು ಮಾಡಬಾರದಿತ್ತು' ಅಂತನೆ. ಆ ಹುಡುಗನ್ನ ನ್ಯಾಣಾಕಿದ್ರೆ ಹೋಗಿಬುಡತಿದ್ನಲ್ಲಾ ಅನ್ನುಸ್ತದೆ."

"ಆದ್ರೆ, ಗಂಗಾಧರ ಮೂರ್ತಿ ಹೋದ್ನಲೊ? ಅದಕೇನು ಪನಿಷ್‌ಮೆಂಟು?"

"ಜೀವಕ್ಕೆ ಜೀವ ಪನಿಷ್‌ಮೆಂಟಲ್ಲ ಅಂತ ಒಂದು ವಾದ ಎದ್ದದೆ."

"ಅಂಗಾದ್ರೆ, ಬಂಬಾಯಿ ಉಡಾಯಿಸಿದೊನ್ನ ಇಟ್ಟಗಂಡು ಸಾಯಗಂಟ ಸಾಕಬೇಕಾಗಿತ್ತು. ಆ ನನ್ನ ಮಗನಿಗೆ ಅಷ್ಟು ಜನ ಸಾಯಿಸಿದ್ಕೆ ಯಾವ ಪಶ್ಚಾತ್ತಾಪನೂ ಇರಲಿಲ್ಲವಂತೆ. ನಮಾಜು ಮಾಡಿಕೊಂಡು ಆರಾಮಾಗಿದ್ದ. ಜೈಲಲ್ಲಿ ಲಿಮಿಟ್ಟಾಗಿರೊ ಊಟ ಕೊಡ್ತರೆ. ಡಾಕ್ಟುರು ಬಂದು ಹೆಲ್ತ್ ಚೆಕಪ್ ಮಾಡ್ತರೆ. ಈ ತರ ಅವುನು ಎಪ್ಪತ್ತು ವರ್ಷ ಬದುಕಿದ್ರೆ ಕತಿಯೇನೊ?"

"ಅದೂ ಯೋಚನೆ ಮಾಡಬೇಕಾದ್ದೆಯಪ್ಪ."

"ನಮ್ಮ ದೇಸದಲ್ಲಿ ಒಂದು ಸೈಕಾಲಜಿ ಅದೆ ಕಣೊ ಉಗ್ರೀ. ಕೊಲೆಯಾದೊನ ಕತೆ ಮುಗಿತು. ಪಾಪ ಮಾಡಿದೋನೆಡ್ತಿ ಮಕನೋಡಿ, ಮಕ್ಕಳ ನೋಡಿದ್ರೆ ವಟ್ಟೆ ಉರಿತದೆ ಅಂತರೆ. ಅಲ್ಲಿಗೆ ಹೋದೋನೋದ ಅನ್ನಂಗಾಯ್ತದೆ."

"ಆ ಈರಪ್ಪನ್ ಕಡಿಯೊರ ಇನ್ನೂ ನ್ಯಾಣಾಕಲಿಲ್ವೆ?" ಎಂದಳು ಜುಮ್ಮಿ.

"ಅವುನೆಂಡ್ತಿ ಮುತ್ತುಲಕ್ಷ್ಮಿಗೆ ಒಂದು ಲಾಟ್ರಿ ಹೊಡದದೆ ಕಣಕ್ಕ."

"ಅದ್ಯಾವ ಲಾಟ್ರಿ?"

"ಆ ವೀರಪ್ಪನ್ ಅನ್ನೊ ಪಿಶಾಚಿ ಮ್ಯಾಲೆ 'ಅಟ್ಟಹಾಸ' ಅಂತ ಸಿನುಮಾ ತಗುದ್ರು ಕಣಕ್ಕ. ಈಗಾಗ್ಲೆ ಅನುಭವಸ್ಥೆಯಾಗಿರೊ ಮುತ್ತುಲಕ್ಷ್ಮಿ ಕೋರ್ಟ್‌ಗೋದ್ಲು. ಕೋರ್ಟು ಸಿನುಮ ತಗದೊರು ಇಪ್ಪತ್ತೈದು ಲಕ್ಷ ಕೊಡಿ ಮುತ್ತುಲಕ್ಷ್ಮಿಗೆ ಅಂತ ತೀರ್ಪು ಕೊಟ್ಟದೆ. ಇದಕೇನೇಳ್ತೀ?"

"ನೋಡು ಮತ್ತೆ, ರಾಜಕುಮಾರನ್ನ ಹಿಡಕಂಡೋದಾಗ ಸರಕಾರನೆ ದುಡ್ಡು ಕೊಡ್ತು, ಈಗ ಸಿನುಮದೋರು ಕೊಡ್ತರೆ ಅಂದ್ರೆ ಅವುರಾದಾಯವೇ ಚೆನ್ನಾಗ್ಯದಪ್ಪ."

"ಬದಿಕೋದ್ರು ಕಣಕ್ಕ ಅವುರು. ಹಾಳಾದೋರು ನಾವೆಯ. ಜಾಸ್ತಿ ಜನ ಪೊಲೀಸ್‌ನೋರು ಸತ್ತಿದ್ದು ನಮ್ಮೊರೆಯ. ಅಣ್ಣಾವ್ರುರ ತಗಂಡೋದಾಗ ಕೋಟಿಗಟ್ಲೆ ಕಳಕಂಡೋರು ನಾವೆಯ. ಈಗ ವೀರಪ್ಪನ್ ಕಡಿಯೋರಿಗೆ ಗಲ್ಲು ಬ್ಯಾಡಿ ಅಂತ ಬ್ಯಾರೆ ಸುರುವಾಗ್ಯದೆ."

"ಅಂತೂ ಇನ್ನು ನಿಂತಿಲ್ಲ ಅನ್ನು."

"ಪಾಪ ನೂರಾರು ಜನ ಪೊಲೀಸ್‌ನೋರ್ ಸತ್ರು. ಅವುರ ಕೊಂದಾಕಿದೋರ ಮಡಿಕಳಕ್ಕಾದತೆ ನೀವೆ ಹೇಳಿ."

"ಸೂಳೆಮಕ್ಕಳ ತಗಂಬಂದು ಗೊಬ್ಬಳಿಮರಕೆ ನಾಯಿ ನ್ಯಾತಾಕಿದಂಗೆ ನ್ಯಾತಾಕಬೇಕು ಕಂಢ್ರ" ಎಂದ ಕಾಳಮಾವ.

"ದೊಡಪ್ಪ, ನಿನಿಗೆ ಇನ್ನೂ ಸಿಟ್ಟು ಬರುಸ್ತಿನಿ ಇರು. ಶ್ರೀನಿವಾಸ್ ಅಂತ ಒಬ್ಬ ರೇಂಜರ್ ಇದ್ದ. ಯಂಥ ಅಧಿಕಾರಿ ಅಂತೀ. ಕಾಡುಗಳ್ರು ನಡುಗೋರು ಅವುನೆಸರು ಕೇಳಿದ್ರೆ. ಇಲ್ಲೇ ಚಿಕ್ಕಮಗಳೂರಲ್ಲೂ ಇದ್ದ ಅವುನು. ಟಿಂಬರ್ ಲಾಬಿಯೋರು ಅವುನ ಮ್ಯಾಲೆ ಲಾರಿ ಹತ್ತಿಸಿ ಸಾಯಸಕ್ಕೆ ಅಂತ ಮಾಡಿದ್ರು. ಆದ್ರು ಸಕ್ಸಸ್ ಆಗಲಿಲ್ಲ, ಅವುನ್ನ ವೀರಪ್ಪನ್ ಹಿಡಿಯಕ್ಕೆ ಹಾಕಿದ್ರು ದೊಡಪ್ಪ, ವೀರಪ್ಪನ್ ಏನು ಮಾಡಿದ ಗೊತ್ತೆ? ಶ್ರೀನಿವಾಸನ ತಲೆನೆ ಕತ್ತಿಸಿಗಂಡೋಗಿದ್ದ. ಅಂತ ವೀರಪ್ಪನ್ ಇವತ್ತು ಜೈಲಲಿದ್ರೆ ಮರಣದಂಡನೆ ಬ್ಯಾಡ, ಆತ ಸಾಯಗಂಟ ಸಾಕ್ತಿವಿ ಅಂದಿದ್ರೆ ನಿನಿಗೇನನ್ನುಸ್ತಿತ್ತು ಹೇಳು?"


"ನೋಡ್ರ, ದೇಸದ ಮ್ಯಾಲೆ ಜನಸಂಕೆ ಬೇಕಾದೋಟದೆ. ಯಾವನ್ನೇ ನ್ಯಾಣಾಕಿದ್ರೆ ಮನುಸುನ ಕುಲನೆ ಹೋಯ್ತು ಅನ್ನಂಗೇನೂ ಇಲ್ಲ. ಏನಪ್ಪ ತೆಪ್ಪು ಮಾಡಿದ ಸೂಳೆಮಕ್ಕಳ ಮಕನೋಡದಂಗೆ ಹಿಡಿದುಹಿಡಿದೂ ನ್ಯಾಣಾಕಬೇಕು. ಅದೊಂದಕ್ಕೇ ಹೆದರದು ಜನ."

"ನಿಜ ದೊಡಪ್ಪ, ಬಿಲ್ಲ ರಂಗನ್ನ ಗಲ್ಲಿಗೇರಸಕ್ಕೆ ತಗಂಡೋಗುವಾಗ ಕೈಕಾಲು ನಡುಗುತಿದ್ದವಂತೆ. ನ್ಯಾಣಾಕಿದೋರ ಕತೆ ಹೇಳದರಿಂದ ಅಪರಾಧಗಳಾದರೂ ಕಡಮೆ ಆಗಬವುದು. ನಾನು ಜೀವಹತ್ಯೆ ವಿರೋಧಿನೆ. ನನ್ನ ಪರಸೋನಲ್ ಪ್ರಾಬ್ಲಮ್ ಏನಂದ್ರೆ, ವಬ್ಬ ಅಪರಾಧಿಯ ಸಾಯಂಗಂಟ ಜೈಲಲ್ಲಿ ಇಟಗಂಡ್ರೆ ಸಾಕದ್ಯಂಗೆ? ನೋಡದ್ಯಂಗೇ? ಅಂಥದ್ದೊಂದು ಸ್ಥಿತಿಗೆ ಅವುನು ಒಗ್ಗಿಕೊಂಡು ಪಾಪಪ್ರಜ್ಞೆನೆ ಇಲ್ದೆ ಸುಕವಾಗಿದ್ರೆ ಕತಿಯೇನು. ಇಂತ ಮ್ಯಾಟ್ರು ನನಿಗೆ ಮುತ್ತಿಗಂಡವೆ. ಅದೇನಾದ್ರು ಆಗ್ಲಿ ನಮ್ಮ ಹರಿಕೃಷ್ಣ, ಶಕೀಲನ್ನು ಕೊಂದಿರೊ ವೀರಪ್ಪನ್ ಬಂಟರನ್ನ ಆದಷ್ಟು ಬೇಗ ನ್ಯಾಣಾಕಿದ್ರೆ ನನಿಗಂತೂ ಸಮಾಧಾನ." ■



...ಮ ಮತ್ತು ಕೃಷ್ಣ ಸೇರಿದ ಜಾಗ

...ವಿಚಿತ್ರ ವ್ಯಕ್ತಿಗಳು ವಾಸಿಸುವ ಹುತ್ತದಂತಿರುವ ಸಂಸ್ಥೆಗಳಲ್ಲಿ ಕೆಲವು: ...ಧೀಭವನ, ಖಾದಿ ಭಂಡಾರ, ರಾಮಕೃಷ್ಣಾಶ್ರಮ ಇತ್ಯಾದಿಗಳು. ...ಸನಗುಡಿಯಲ್ಲಿರುವ ರಾಮಕೃಷ್ಣಾಶ್ರಮದೊಳಕ್ಕೆ ಕಾಲಿಟ್ಟೊಡನೆ ನಮ್ಮನ್ನು ...ದೇಶಗಳ ಗೂಢಚಾರರೋ ಎಂಬಂತೆ ನೋಡುವ ಹದ್ದುಗಳಿರುತ್ತವೆ. ...ಗಟ್ಟಲೆ ಸಂಸ್ಕೃತ, ಕನ್ನಡದಲ್ಲಿ ಉಪನ್ಯಾಸದ ಬೊಗಳೆ ಹರಿಸುವ ಇಲ್ಲಿಯ ...ನಂದ, ಷಡ್ವಾನಂದಗಳು ಆಶ್ರಮದ ಮಧ್ಯೆ ಯಾರಾದರೂ ಹೊಸಬರು ...ಕೊಂಡೊಡನೆ ಬಂದು, "ಇದು ಖಾಸಗಿ ಜಾಗ", "ಇಲ್ಲಿಂದ ಮುಂದೆ ...ಗಕೂಡದು", "ಇದು ನಿಮ್ಮ ವಾಕ್‌ಗಾಗಿ ಇರುವ ಪ್ರದೇಶವಲ್ಲ" ಎಂದು ...ಸಲ್ಲಿ ಚೀಟಿ ಕೊಟ್ಟು ನಿಮ್ಮನ್ನು ಇರಿಯುವಂತೆ ನೋಡುತ್ತಾರೆ. "ನಾವು ... ಮಾಡುತ್ತಿಲ್ಲ, ನಿಮ್ಮ ಗುರುವಿನ ಭಾಷಣ ಸವಿಯುತ್ತಿದ್ದೇವೆ" ಎಂದರೆ ...ಸುತ್ತಾರೆ. ಇವರಿಗೆ ತಮ್ಮ ಭಕ್ತರಲ್ಲದ ಯಾರನ್ನು ನೋಡಿದರೂ ... ಈ ರಾಮಕೃಷ್ಣಾಶ್ರಮ ಈಗ ಪಾಕಶಾಸ್ತ್ರ ಮತ್ತು ಭೂರಿಭೋಜನಕ್ಕೆ ...ಗಿದೆ ಎಂದು ಅವರ ಶಿಷ್ಯರು ಭೋಜನದಿಂದ ಸಂತೃಪ್ತರಾಗಿ ... ಹೊಡೆಯುತ್ತಾ ಪಿಸುಗುಟ್ಟುತ್ತಾರೆ. 'ಅದನ್ನು ನಾವು ಸವಿಯುವ ಅವಕಾಶವಿರಲಿ, ನೋಡುವ ಅವಕಾಶ ಕೂಡ ಇಲ್ಲವಲ್ಲ' ಎಂದು ನೀವು ಗೊಣಗಿದರೆ ಅಡ್ವಾಣಿ, ವಾಜಪೇಯಿಗಳಂತೆ 'ಅರ್ಥಪೂರ್ಣ' ಮೌನದಲ್ಲಿ ಮುಳುಗುತ್ತಾರೆ.



ಎರಡು ಬಗೆಯ ಜನ

ನೀವು ತುಂಬ ಕೋಮಲ ಮನಸ್ಸಿನವರಾಗಿದ್ದರೆ ಪ್ರತಿಯೊಂದು ಸಣ್ಣ ಸಂಗತಿಗೂ ನೀವು ಸ್ಪಂದಿಸುತ್ತೀರಿ. ನಿಮ್ಮ ಸುತ್ತ ಇರುವ ಜನ, ಹವಾ, ಸದ್ದು, ಮಾತುಗಳೆಲ್ಲ ನಿಮ್ಮ ಮನಸ್ಸಿನಲ್ಲಿ ಅಲೆ ಎಬ್ಬಿಸುತ್ತವೆ. ಅಂತೆಯೇ ಸೂಕ್ಷ್ಮ ಮನಸ್ಸಿನವರಿಗೆ ವಿಚಿತ್ರ ಒಳನೋಟ ಇರುತ್ತದೆ. ದುಗುಡದಲ್ಲಿ ನಿಂತ ಒಂದು ಹಸುವನ್ನು ನೀವು ನೋಡುವ ರೀತಿಗೂ ಜಡಮನಸ್ಕ ನೋಡುವ ರೀತಿಗೂ ವ್ಯತ್ಯಾಸವಿರುತ್ತದೆ. ದಡ್ಡುಗಟ್ಟಿದ ಮನಸ್ಸಿನವರಿಗೆ ಸಾಹಿತ್ಯ ರಚನೆ ಸಾಧ್ಯವಿಲ್ಲ.

ಅದಿರಲಿ, ಜನರನ್ನು ನೋಡಿ. ನಮ್ಮ ಅಬ್ದುಲ್ ರಶೀದ್ ಪ್ರಕ್ಷುಬ್ಧ ವ್ಯಕ್ತಿತ್ವದವನು, ಎಲ್ಲವನ್ನೂ ಆತ ತೀವ್ರವಾಗಿ ನೋಡುತ್ತಾನೆ. ಮಾತಾಡುವಾಗ ಕೂಡ ಅವನ ಸಿಡವು ನಿಮ್ಮನ್ನು ತಲುಪುತ್ತದೆ. ರಶೀದ್ ತರಹದವರೊಂದಿಗೆ ದಿನವೆಲ್ಲ ಇದ್ದರೆ ಸುಸ್ತಾಗುತ್ತದೆ. ಇಬ್ಬರು ಗೆಳೆಯರ ನಡುವೆ ಮಾತುಕತೆ ಇರುವಂತೆಯೇ ಹೇಳದಿರುವ ಪ್ರೀತಿ, ಮೌನ, ಸಹನೆ ಇರಬೇಕು; ನಿಮ್ಮ ಜೊತೆಗಾರ ಮುಂದಿನ ಕ್ಷಣದಲ್ಲಿ ಏನನ್ನು ಹೇಳಿ ಬೆಚ್ಚಿಸುತ್ತಾನೋ ಎಂಬ ಆತಂಕವಿರಬಾರದು. ಇದನ್ನು ಬರೆಯುವಾಗ ನನಗೆ ದಿವಂಗತ ಗೆಳೆಯ ಶಾಂತಿನಾಥ ದೇಸಾಯಿ ನೆನಪಾಗುತ್ತಿದ್ದಾನೆ. ಈತ ತಣ್ಣನೆಯ ಪ್ರೀತಿಯ, ಅಪಾರ ಸಹನೆಯ ವ್ಯಕ್ತಿ; ಮಹಾ ಸಹಾನುಭೂತಿಯ ಮನುಷ್ಯ ಕೂಡ. ಶಾಂತಿನಾಥನೊಂದಿಗೆ ಮಾತಾಡುವಾಗ ಎಚ್ಚರ ವಹಿಸುವ ಅಗತ್ಯವಿರಲಿಲ್ಲ, ನಗುತ್ತಾ, ಚರ್ಚಿಸುತ್ತಾ ಅರ್ಥಮಾಡಿಕೊಳ್ಳುತ್ತಾ ಇದ್ದುಬಿಡುತ್ತಿದ್ದ ವ್ಯಕ್ತಿ ಶಾಂತಿನಾಥ. ಅನೇಕ ಬಗೆಯ ಪ್ರೇಮ, ಕಾಮದ ಸಂಬಂಧಗಳನ್ನು ಬಲ್ಲ ಶಾಂತಿನಾಥ ಆ ಬಗ್ಗೆ ಪ್ರದರ್ಶನಕ್ಕಾಗಿ ಹೇಳಿಕೊಳ್ಳುತ್ತಿರಲಿಲ್ಲ. ಎಲ್ಲರೂ ಪೋಲಿ ಮಾತಾಡುವಾಗ ಹೇಳಲು ಆತನ ಅನುಭವ ಇದ್ದೇ ಇತ್ತು. ಜಗತ್ತನ್ನು ಸುತ್ತಿದ ಶಾಂತಿನಾಥ ಆ ಬಗ್ಗೆ ಕೂಡ ಧಿಮಾಕು ಇಟ್ಟುಕೊಂಡಿರಲಿಲ್ಲ.

ಅಭಿರುಚಿಯಂತೆಯೇ ಈ ಸಮತೋಲನದ ನಿಲುವು ನೋವಿನಿಂದ, ಭ್ರಮನಿರಸನದಿಂದ, ಆತ್ಮಪರೀಕ್ಷೆಯಿಂದ ಬರುತ್ತದೆ ಎನ್ನಿಸುತ್ತದೆ. ಇಂಥ ತಣ್ಣನೆಯ, ಆರೋಗ್ಯವಂತ ಜನ ಅಪರೂಪ. ಆತನೊಂದಿಗೆ ಎಷ್ಟು ದಿನ ಇದ್ದರೂ ಬೇಸರವಾಗುತ್ತಿರಲಿಲ್ಲ; ಹಾಗೆಯೇ ಆತನೊಂದಿಗೆ ಕಳೆದ ದಿನಗಳು ವ್ಯರ್ಥ ಅನ್ನಿಸುತ್ತಿರಲಿಲ್ಲ. ಪ್ರತಿಯೊಬ್ಬ ಕ್ರಿಯಾಶೀಲನಿಗೂ ಮಿಂಚುವ ಹೊಸತು ಶಾಂತಿನಾಥನಲ್ಲೂ ಇದ್ದವು. ಎಲ್ಲವೂ ಆತನ ವರ್ಣರಂಜಿತ, ಸಹಜ ವ್ಯಕ್ತಿತ್ವಕ್ಕೆ ನೆರವಾಗಿದ್ದವು.

ಇದನ್ನು ನೋಡಿ ಅಬ್ದುಲ್ ರಶೀದ್‌ನಂತಹವರು ಬೇಸರಪಡಬೇಕಾದ್ದಿಲ್ಲ. ಎಲ್ಲ ತೀವ್ರತೆ ಮತ್ತು ಪ್ರಕ್ಷುಬ್ಧತೆಯ ಮಿತಿ ಗೊತ್ತಾದೊಡನೆ ಅವರು ಸರಿಹೋಗುತ್ತಾರೆ. ನಾನು ಕೇವಲ ಎರಡು ದಶಕಗಳ ಹಿಂದೆ ಎಂಥ ಸ್ಫೋಟಕ ವ್ಯಕ್ತಿಯಾಗಿದ್ದೇನೆಂಬುದು ನನ್ನ ಗೆಳೆಯರಿಗೆ ಗೊತ್ತು.



• ಜೂನ್ 17, 1998

ಆಯವ್ಯಯಾಶೀರ್ವಾದ!

'ಈ ಸಾಲಿನ ಬಜೆಟ್ ಮಂಡಿಸಲು ಬಿಡುವುದಿಲ್ಲ' ಎಂದು ಅದೆಷ್ಟೋ ಸಾರಿ ಗುಡುಗಿದ್ದರು ಯಡ್ಯೂರಪ್ಪನವರು. ಅಂತಹ ಸದ್ದು ಎಷ್ಟು ಸಲ ಬಂದಿತ್ತು ಎಂಬುದು ಅವರಿಗೇ ಜ್ಞಾಪಕವಿರಲಾರದು. ಇದು ಸಹಜವೇ ಅನ್ನಿ. ಒಂದೋ ಎರಡೋ ಸಲ ಹೇಳಿದ್ದರೆ ಎಷ್ಟು ಸಲ ಹೇಳಿದ್ದೆ ಎಂದು ಖಚಿತವಾಗಿ ಹೇಳಬಹುದು. ಎಚ್ಚರ ಇದ್ದಲಾಗಲೆಲ್ಲ ಅದೇ ಮಾತು ಹೇಳುತ್ತಿದ್ದರೆ ಯಾರಿಗೆ ತಾನೆ ನೆನಪಿರುತ್ತೆ ಹೇಳಿ. ಅವರು ಹೀಗೆ ಬಿಡಲಾರೆ ಮಂತ್ರ ಜಪಿಸುತ್ತಿದ್ದಂತೆಯೇ ಅಂತಹವರ ಮಾತಿಗೆ ಕಿಲುಬುಕಾಸಿನ ಬೆಲೆಯನ್ನೂ ಕೊಡಬಾರದು ಎನ್ನುವಂತೆ ಜಗದೀಶ್ ಶೆಟ್ಟರ್ ಆಯವ್ಯಯ ಮಂಡಿಸಿಯೇ ಬಿಟ್ಟರು! ಬಿಟ್ಟಾದ ಮೇಲೆ ಯಡ್ಯೂರಪ್ಪನವರು 'ಈ ಬಜೆಟ್‌ನಲ್ಲಿ ಉಪ್ಪು ಹುಳಿ ಖಾರ ಏನೇನೂ ಇಲ್ಲ, ನನ್ನ ದಾರೀನೆ ತುಳಿದಷ್ಟೆ. ಹೊಸತನ ಅನ್ನೋದು ಇಲ್ಲವೇ ಇಲ್ಲ' ಎಂದೆಲ್ಲ ಆರೋಪಿಸಿದರು. ಅಲ್ಲ ಶೆಟ್ಟರ್ ಅವರನ್ನು ಹೀಯಾಳಿಸಲು ಹೋಗಿ ಯಡ್ಯೂರಪ್ಪನವರು ತಮ್ಮನ್ನು ತಾವೇ ಹಳಿದುಕೊಂಡ ಹಾಗಾಯಿತು ಅಲ್ಲವಾ! ಅದು ಹಾಗಿರಲಿ.



ಯಡ್ಯೂರಪ್ಪನವರು ಯಾಕೆ ಬಜೆಟ್ ಮಂಡಿಸೋಕೆ ಬಿಡುವುದೇ ಇಲ್ಲ ಅಂತೆಲ್ಲ ಕೂಗುಮಾರಿ ಅವತಾರ ಎತ್ತುತ್ತಿದ್ದರು ಎಂದರೆ ಅದಕ್ಕೂ ಕಾರಣ ಇದೆಯಂತೆ. ಸನ್ಮಾನ್ಯರು 'ರೈತ ಬಜೆಟ್' ಮಾದರಿಯಲ್ಲೇ ಸಾಮಾನ್ಯ ಬಜೆಟ್ ಒಳಗೇ 'ಮಠ ಬಜೆಟ್' ತಳಿ ಹುಟ್ಟುಹಾಕಿದ್ದರಲ್ಲಾ, ಕಾವಿಧಾರಿಗಳ ಮೊಕಮೊರದಗಲ ಮಾಡಿದ್ದರಲ್ಲಾ, ಅದರ ಪೇಟೆಂಟ್ ತಗೊಂಡಿರಲಿಲ್ಲವಂತೆ. ಅಧ್ಯಾತ್ಮದ ಸೋಗಿನಲ್ಲಿ ಮೌಢ್ಯವನ್ನೇ ಬಿತ್ತಿ ಮೌಢ್ಯವನ್ನೇ ಸಮೃದ್ಧವಾಗಿ ಬೆಳೆಸುವ ಮಠಗಳಿಗೆ ಸಾರ್ವಜನಿಕ ಹಣ ಹೀಗೆ ಪೋಲು ಮಾಡಬಾರದು ಎಂದು ಏನಾದರೂ ಶೆಟ್ಟರ್ ಆದಕ್ಕೆ ತಡೆ ಒಡ್ಡಿದ್ದರೆ ಅಪಾಯ ಎದುರಾಗುತ್ತಿರಲಿಲ್ಲ, ಆದರೆ ಹಾಗಾಗುವ ಲಕ್ಷಣಗಳು ಕಾಣುತ್ತಿಲ್ಲ. ಕಾವಿಧಾರಿಗಳಾದ ಕಾವಿಧಾರಿಗಳೇ ಶೆಟ್ಟರ್ ಬಳಿ ತೆರಳಿ ಆಶೀರ್ವದಿಸಿ ಮೌಢ್ಯದ ಫಸಲು ಸಮೃದ್ಧವಾಗಿ ಬೆಳೆಸಬೇಕಾದರೆ ಆದಕ್ಕೆ ಸರಿಯಾದ ಪ್ರಮಾಣದಲ್ಲಿ ಆರೈಕೆ ಮಾಡುವುದು ಅನಿವಾರ್ಯ, ಅದಕ್ಕೆ ಬೇಕಾದ ಸವಲತ್ತನ್ನು ಒದಗಿಸಿ ಎಂದೆಲ್ಲ ದೈನೇಸಿಕೊಂಡರಂತೆ. ಇಂತಹವು ಏನಾದರೂ ನಡೆದು ತಾನು ಪೇಟೆಂಟ್ ತೆಗೆದುಕೊಳ್ಳದಿರುವುದನ್ನೇ ಬಂಡವಾಳ ಮಾಡಿಕೊಂಡು ಮಠಮಾನ್ಯಗಳಿಗೆ ಚೈತನ್ಯ ಮೀರಿ ದೇಣಿಗೆ ನೀಡಿ ಕಾವಿಧಾರಿಗಳನ್ನು ಕೌಚಿ ಹಾಕಿಕೊಂಡರೆ ಏನು ಗತಿ ಎಂಬ ದಿಗಿಲಿನಿಂದ ಹೀಗೆ ಕೂಗುಮಾರಿ ಅವತಾರವೆತ್ತುತ್ತಿದ್ದುರಂತೆ!

ದುರಂತ ಅಂದರೆ ಇದು. ಯಡ್ಯೂರಪ್ಪನವರು ಯಾವುದು ಆಗಬಾರದೆಂದು ಬಯಸಿದ್ದರೋ ಅದೇ ಆಗಿದೆ. ಶೆಟ್ಟರ್ ಆಯವ್ಯಯದಲ್ಲಿ ಮಠಗಳಿಗೆ ಮಾತ್ರ ಅಲ್ಲ, ಟ್ರಸ್ಟ್‌ಗಳಿಗೂ ಅತ್ತೆಯ ಆಸ್ತಿಯನ್ನು ಅಳಿಯ ದಾನ ಮಾಡಿದ ಹಾಗೆ ಯಾವ ಎಗ್ಗೂ ಇಲ್ಲದೆ ಕೋಟಿಕೋಟಿ ಹಣ ನೀಡಿದ್ದಾರೆ. ಇಷ್ಟಕ್ಕೆ ನಿಂತಿಲ್ಲ ಅವರ ಪ್ರತಾಪ. ಬಜೆಟ್ ಮೇಲಿನ ಚರ್ಚೆ ಇತ್ತಲ್ಲ ಅವತ್ತೂ ಮನಸೋಇಚ್ಛೆ ದೇಣಿಗೆ ಹಂಚಿದ್ದಾರೆ. ಈ ಮಠಗಳು, ಟ್ರಸ್ಟ್‌ಗಳು ಬರ್ತಾಬರ್ತಾ ಕುಟುಂಬದ ಆಸ್ತಿ ಆಗುತ್ತವೆ ಇಲ್ಲ ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿರುತ್ತವೆ ಎಂಬುದು ಸಾರ್ವತ್ರಿಕ ಸತ್ಯ. ಅಂತಹದ್ದರಲ್ಲಿ ಹೀಗೆ ಹಣ ನೀಡುವುದು ಸರಿಯಲ್ಲ ಅನ್ನುವುದು ಶಾಸಕರಿಗೆ ತಿಳಿದಿಲ್ಲ ಅಂತ ಅಲ್ಲ. ಆದರೆ ಏನು ಮಾಡುತ್ತೀರಿ. ಚುನಾವಣೆ ಬಂದು ಬಾಗಿಲಿನಲ್ಲಿ ನಿಂತಿದೆ. ವಿರೋಧಿಸಿದರೆ ಮಠಾಧೀಶರ 'ಮಠ ಶಾಪ'ಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ಭಯದಿಂದ ಬಾಲ ಮುದಿರು ಕೊಂಡಿರುವರಂತೆ. ಆದರೂ ಎಷ್ಟೇ ಆಗಲಿ ಅವರೂ ರಾಜಕಾರಣಿಗಳು: ಉರಿಯೋ ಮನೇಲಿ ಇರಿದಷ್ಟೇ ಲಾಭ ಅಂತ ತಮ್ಮ ಹಿತೈಷಿಗಳಿರುವ 'ಈ ಟ್ರಸ್ಟ್‌ಗೆ ಇಷ್ಟು ಕೊಡಿ', 'ಆ ಮಠಕ್ಕೆ ಅಷ್ಟು ಕೊಡಿ' ಅಂತ ಚೀಟಿ ಬರೆದು ಶೆಟ್ಟರ್ ಮುಂದೆ ಸಾಲಾಗಿ ನಿಂತು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ತಯಾರಾದರಂತೆ. ಶೆಟ್ಟರ್ ಧರ್ಮಾತ್ಮರು ಚೀಟಿಯಲ್ಲಿ ಸೂಚಿಸಿದವರಿಗೆ ಉದಾರವಾಗಿ ದೇಣಿಗೆ ನೀಡಿದರಂತೆ!

ಅಧಿವೇಶನ ಏನಾದರೂ ಅಕಸ್ಮಾತ್ ಮುಂದುವರಿದರೆ ಈ ಹಾಳಾದ ಶೆಟ್ಟರ್ ಯಾವಯಾವ ಮಠಾಧೀಶರುಗಳಿಗೆ ಹಣ ನೀಡಿ ಕೌಚ ಹಾಕಿಕೊಳ್ಳುತ್ತಾನೋ ಅನ್ನುವ ಆತಂಕದಲ್ಲಿದ್ದ ಯಡ್ಯೂರಪ್ಪನವರು ಅಧಿವೇಶನ ಮುಗಿಯಿತು ಎಂಬ ಖಚಿತ ಸುದ್ದಿ ತಲುಪಿದ ನಂತರ ನಿಟ್ಟುಸಿರುಬಿಟ್ಟರಂತೆ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಯಡ್ಡಿ 'ಕಾರ್ ಪಾದ' ಯಾತ್ರೆ

ಚುನಾವಣೆ ಎನ್ನುವುದು ಬರಬಾರದು ಕಣ್ರಿ. ಬಂದರೆ ಬರಲಿ. ನಿಮಗೇನು ಗೂದೆರೋಗ ಅನ್ನಬೇಡಿ. ಬಂಜೆಗೆ ಏನು ಗೊತ್ತು ಹೆರುವ ನೋವು ಅನ್ನುವ ಹಾಗೆ ಆಗುತ್ತೆ. ಆ ಸಂಕಟ ಅನುಭವಿಸಿದವರಿಗೆ ಅರ್ಥ ಆಗುವಂತಹದ್ದು. ಚುನಾವಣೆನೂ ಹಾಗೇನೆ. ಹಾಳಾದ್ದು ಬಂತು ಅಂದ್ರೆ ಹೇಳಬಾರದ್ದು ಹೇಳಿಸುತ್ತೆ, ಮಾಡಬಾರದ್ದನ್ನು ಮಾಡಿಸುತ್ತೆ.

ಶ್ರೀರಾಮುಲು ನೋಡಿ. 'ಬಡವರಿಗೆ ಎರಡು ರೂಪಾಯಿಗೆ ಒಂದು ಕೆಜಿ ಅಕ್ಕಿ ಕೊಡ್ತೀನಿ' ಅಂದ್ರು. ಈ ದರಿದ್ರ ಜನಕ್ಕೆ ಇದಕ್ಕಿಂತ ಇನ್ನೇನು ಬೇಕು, ಇದೇ ಭೇಷಾಯಿತು ಅಂದುಕೊಂಡಿರಬೇಕು. ಆದರೇನು ಮಾಡ್ತೀರಿ. ಹಾಳಾದ ಮುಖ್ಯಮಂತ್ರಿ ಇದೇ ಆಶ್ವಾಸನೆಯನ್ನ ಬಜೆಟ್‌ನಲ್ಲಿ ಸೇರಿಸಿದ್ರು ಅಂದ್ರೆ ಬಿಎಸ್‌ಆರ್ ಮಾತ ಭಾಜಪ ಕಾಪಿ ಮಾಡಿತ್ತು, ಇದು 'ಕಾಪಿ ಕುಳ' ಅಂತ 'ಒರಿಜಿನಲ್ ಕುಳ' ಸುಮ್ಮನಿರುವಹಾಗಿರಲಿಲ್ಲ. ಶ್ರೀರಾಮುಲು ಏನು ಮಾಡಿದರು 'ನಮ್ಮ ಪ್ರಣಾಳಿಕೆಯನ್ನು ಅವರು ಕದ್ದವ್ರೆ. ನಾನು ಮುಫತ್ ಅಕ್ಕಿ ಬೇಳೆ ಎಲ್ಲಾನೂ ಕೊಡ್ತೀನಿ' ಅಂತ ಸಾರಿದ್ರು. ಭಾಜಪನೂ ಹಂಗೇ ಅಂದಿದ್ರೆ ಶ್ರೀರಾಮುಲು ಏನು ಮಾಡುತ್ತಿದ್ದರೋ ತಿಳೀದು. ಪ್ರಾಯಶಃ ನಿಮ್ಮ ಮನೇನೆ ದಿನಸಿ ಉಗ್ರಾಣ ಮಾಡ್ತೀನಿ ಅಂದರೂ ಅನ್ನುತ್ತಿದ್ದರೇನೋ! ಯಾಕೆ ಅಂದರೆ ಚುನಾವಣೆ ಬಂತು ಅಂದ್ರೆ ಕಿವಿಗೆ ನೊಚ್ಚಗಾಗುವ ಸುಳ್ಳು ಹೇಳಲೇಬೇಕಾಗುತ್ತೆ. ಇವ್ರು ಹೆಂಗಿದ್ದರೂ ಅಧಿಕಾರದ ಹತ್ತಿರವೂ ಬರಲ್ಲ ಅಂತಾನೋ ಏನೋ ಯಾರೂ ಅದೆಂಗೆ ಕೊಡ್ತೀಯಪ್ಪ ಅಂತ ಯಾವ ನನ್‌ಮಗನೂ ಕೇಳಲಿಲ್ಲ ಅನ್ನಿ.

ಇನ್ನು ಕೆಜೆಪಿ ಕಡೆ ವಸಿ ನೋಡಾನ. ಯಡ್ಯೂರಪ್ಪನವರಿಗೂ ನನಗೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ವಯಸ್ಸು. ಅಮ್ಮಮ್ಮ ಅಂದ್ರೆ ನಾನು ಒಂದು ದಿನಕ್ಕೆ ಎರಡು ಮೂರು ಕಿ.ಮೀ. ನಡೆದೇನು. ಅದಕ್ಕೂ ಹೆಚ್ಚಿಗೆ ಕಿಸೀತಿನಿ ಅಂತ ಏನಾದರೂ ಹೋದರೆ ಬೆಳಗ್ಗೆ ಹಾಸಿಗೆ ಬಿಟ್ಟು ಮೇಲೇಳಲೇ ಆಗುವುದಿಲ್ಲ, ಕೈಕಾಲೆಲ್ಲ ಪದ ಹಾಡ್ತಿರ್ತವೆ. ಅಂತಹದ್ದರಲ್ಲಿ ಯಡ್ಯೂರಪ್ಪನವರು ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡ್ತೀನಿ ಅಂತ ಹೊರಟರು. ಈ ವಯಸ್ಸಿನಲ್ಲಿ ಇದು ಹುಚ್ಚು ಸಾಹಸವೇ ಸರಿ. ಆದರೆ ಅವರಿಗೆ ಅದು ಅನಿವಾರ್ಯ ಆಗಿತ್ತು. ಕನ್ನಂಬಾಡಿ ಕಟ್ಟೆಯಿಂದ ತಮಿಳುನಾಡಿಗೆ ನೀರು ಬಿಡಬೇಕು ಎಂದು

ತುಳುವರು ಯಾವಾಗ ವೈದಿಕರ ಕಪಿಮುಷ್ಟಿಯಿಂದ ಹೊರಬರುವುದು?



ಎಲ್ಲಾ ಹಿಂದೂ ದೇವರಿಗೆ ಎರಡು ಮೂರು ಪತ್ನಿಯರಿದ್ದರೂ ಯಾರಿಗೂ ಹೆಣ್ಣು ಮಕ್ಕಳೇಕಿಲ್ಲ ಎಂಬ ನನ್ನ ಪ್ರಶ್ನೆಗೆ (ಗೌರಿ ಲಂಕೇಶ್ 13-2-2013) ಕೆಲವರು ಕೊಟ್ಟ ಉತ್ತರ: ಈ ಎಲ್ಲಾ ಕಾಲ್ಪನಿಕ ಪುರಾಣ ಕಥೆಗಳನ್ನು ಬರೆದವರು ಗಂಡಸರೇ ಆಗಿದ್ದರಿಂದ ಅವರು ತಮ್ಮ ಕಥೆಯಲ್ಲಿ ಪಕ್ಷಪಾತ ಮಾಡಿದ್ದರೆಂಬುದು ಸರ್ವವಿದಿತ.

ಇನ್ನೊಂದು ವಿಷಯ ನನ್ನ ಗಮನ ಸೆಳೆದಿದ್ದೇನೆಂದರೆ: ವೈದಿಕರು ತಮ್ಮ ಚಿತ್ರ-ವಿಚಿತ್ರ ದೇವರುಗಳನ್ನು ಕರಾವಳಿಯ ತುಳುವರ ಮೇಲೆ ಮೋಸದಿಂದ ಹೇರುವ ಮೊದಲು ತುಳುನಾಡಿನಲ್ಲಿ ಕೇವಲ ನಾಗನನ್ನು ಹಾಗು ಸತ್ಯದ ಪ್ರತೀಕವಾಗಿ ಭೂತಗಳನ್ನು ಮಾತ್ರ ಪೂಜಿಸಲಾಗುತಿತ್ತು ಎಂಬುದು. ಇನ್ನೊಂದು ವಿಶೇಷತೆಯೆಂದರೆ ನಾಗನನ್ನು ಗಂಡು ಅಥವಾ ಹೆಣ್ಣು ಎಂದು ಲಿಂಗಭೇದ ಮಾಡುತ್ತಿರಲಿಲ್ಲ, ಮತ್ತೊಂದು ಪ್ರಮುಖ ವಿಷಯವೇನೆಂದರೆ ಭೂತಗಳನ್ನು ತುಳುವರು ಕೇವಲ ಸತ್ಯದ ಪ್ರತೀಕವಾಗಿ ಮಾತ್ರ ಕಂಡರೆ ಹೊರತು ವೈದಿಕರಂತೆ ರಸಿಕತೆ-ಕಾಮುಕತೆಯನ್ನು ಭೂತಗಳಲ್ಲಿ ತುಂಬಲಿಲ್ಲ, ಹಾಗಾಗಿ ಭೂತಗಳಲ್ಲಿ ಗಂಡ-ಹೆಂಡತಿ-ಉಪಪತ್ನಿ-ಪ್ರೇಯಸಿ ಮುಂತಾದ ಭೂತಗಳು ಇಲ್ಲವೇ ಇಲ್ಲ! ಕೇವಲ ಅಣ್ಣ-ತಮ್ಮ ಮತ್ತು ಅಣ್ಣ-ತಂಗಿ ಭೂತಗಳು ಹಾಗು ಸ್ವತಂತ್ರ ಭೂತಗಳು ಮಾತ್ರ ಇವೆ. ಹಾಗಾಗಿ ವರ್ಷಕ್ಕೊಮ್ಮೆ ಶ್ರೀನಿವಾಸ ಕಲ್ಯಾಣದಂತೆ "ಭೂತ-ಕಲ್ಯಾಣ" ಆಚರಿಸುವ ಪ್ರಮೇಯ ತುಳುನಾಡಿನಲ್ಲಿ ಬರಲೇ ಇಲ್ಲ, ಇದು ತುಳುವರ ಸಾತ್ವಿಕತೆ ಹಾಗು ಸತ್ಯಸಂಧತೆ ತೋರಿಸುತ್ತದೆ.

ವೈದಿಕರ ಲೈಂಗಿಕ ರಸಿಕತೆಗೆ ಪ್ರಾಚೀನ ತುಳುನಾಡಿನಲ್ಲಿ ಸ್ಥಾನವೇ ಇರಲಿಲ್ಲ, ವೈದಿಕ ಋಷಿ-ಮುನಿಗಳು ಅರಣ್ಯದಲ್ಲಿ ವಾಸಿಸುತ್ತಿದ್ದರೂ ಅವರು ಎರಡು-ಮೂರು ಪತ್ನಿಯರನ್ನು ಹಾಗು ಹಲವಾರು ಪರಿಚಾರಿಕೆಯರನ್ನು ಹೊಂದಿರುತ್ತಿದ್ದರು. ಇದು ಆ ಋಷಿ-ಮುನಿಗಳ ರಸಿಕತೆಯ ದ್ಯೋತಕ. ಇಂತಹ ಋಷಿ-ಮುನಿಗಳು ರಚಿಸಿದ ಪೌರಾಣಿಕ ಕಥೆಗಳಲ್ಲಿ ರಸಿಕತೆ-ಕಾಮುಕತೆ ಇಲ್ಲದಿರಲು ಹೇಗೆ ಸಾಧ್ಯ? ಮೂಲತಃ ತುಳುವರ ನಾಗದೇವರು ಹಾಗು ಭೂತಗಳು ಸ್ವತಂತ್ರ ಶಕ್ತಿಗಳಾಗಿದ್ದವೆಯೇ ಹೊರತು ಯಾವುದೇ ವೈದಿಕ ದೇವರುಗಳ ಅಡಿಯಾಳು ಅಥವಾ ಸಂಕೇತ ಆಗಿರಲಿಲ್ಲ, ಆದರೆ ವೈದಿಕರು ತುಳುನಾಡಿಗೆ ವಲಸೆ ಬಂದಮೇಲೆ ಅವರು ಕುತಂತ್ರದಿಂದ ಭೂತಗಳು ಶಿವನ ಅದೀನ ಗಣಗಳು ಹಾಗು ನಾಗನು ಸುಬ್ರಹ್ಮಣ್ಯ, ಆದಿಶೇಷ, ವಾಸುಕಿ- ಈ ವೈದಿಕ ದೇವರ ಪ್ರತೀಕ ಎಂದು ಹೇಳಿ ತುಳುವರನ್ನು ವೈದಿಕರ ಮಾನಸಿಕ ಗುಲಾಮಗಿರಿಗೆ ತಳ್ಳಿದರು.

ಜತೆಗೆ ವೈಷ್ಣವರೂ ಎಲ್ಲಿಯೂ ಇಲ್ಲದ ಪೊಳ್ಳು ವಿಷ್ಣು ಗಣವನ್ನು ಹುಟ್ಟು ಹಾಕಿದರು. ಪರೀಕ್ಷಿತ -ಜನಮೇಜಯ, ಕದ್ರು-ವಿನುತ, ಇವರ ಕಾಲ್ಪನಿಕ ಕಥೆಯನ್ನು ನಾಗಾರಾಧನೆಗೆ ಕೃತಕವಾಗಿ ಜೋಡಿಸಿ ಮೂಲ ತುಳುವ ಸಂಸ್ಕೃತಿಯನ್ನು ಹತ್ತಿಕ್ಕಿದರು. ಅಷ್ಟೇ ಅಲ್ಲ ನಾಗ ದೇವರಲ್ಲೂ ಗಂಡು-ಹೆಣ್ಣು ಎಂದು ವಿಭಜಿಸಿ ನಾಗಮಂಡಲ ಎಂಬ ನೃತ್ಯೋತ್ಸವವನ್ನು ಪ್ರಾರಂಭಿಸಿ ಇಡೀರಾತ್ರಿ ನಾಗ ಹಾಗು ನಾಗಿಣಿಯ ಲೈಂಗಿಕ ಮಿಲನ ಸಂಕೇತಿಸುವ ರಸಿಕ ನೃತ್ಯ ಸೇರಿಸಿದರು. ಈ ರಸಿಕ ವೈದಿಕರ ಕುತಂತ್ರದಿಂದಾಗಿ ಸತ್ಯದ ಪ್ರತಿರೂಪವಾದ ತುಳು ಸಂಸ್ಕೃತಿ ಸಂಪೂರ್ಣ ನಶಿಸಿ ಹೋಗುತ್ತಿದೆ.

ಭೂತಗಳ ತುಳು ಹೆಸರುಗಳ ಬದಲಿಗೆ ಸಂಸ್ಕೃತ ಹೆಸರುಗಳನ್ನೂ ವೈದಿಕರ ಬಾಲಬಡಕರಾದ ಬಂಟ ಪತ್ರಕರ್ತರ ಸಹಾಯದಿಂದ ತುಳು ಜನರ ತಲೆಗೆ ತುರುಕಲಾಗುತ್ತಿದೆ. ಪವಿತ್ರ ಕ್ಷೇತ್ರಗಳ ಹೆಸರುಗಳನ್ನೂ ಸಂಸ್ಕೃತೀಕರಣಗೊಳಿಸಿ ತುಳುವರ ಮೇಲೆ ಹೇರಲಾಗುತ್ತಿದೆ. ತುಳುವರು ಯಾವಾಗ ಎದ್ದೇಳುವುದು ಮತ್ತು ವೈದಿಕರ ಕಪಿಮುಷ್ಟಿಯಿಂದ ಹೊರಬರುವುದು?

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ರಘುಪತಿ ಭಟ್ಟನಿಗೆ ಹೆದರಿ ಭೂದೇವಿ ಡೆಲ್ಲಿಗೆ ಕಂಬಿಕೀಳದಿದ್ದರೆ ಸಾಕಪ್ಪ...

ಚುನಾವಣೆ ಇನ್ನೇನು ಹತ್ತಿರ ಬಂದಾಗಿದೆ. ಈ ಸಂದರ್ಭದಲ್ಲಿ ಜನಪರವಾಗಿ ಕೆಲಸ ಮಾಡಿದ ನಾಯಕರು ತಮ್ಮ ಗೆಲುವಿನ ಬಗ್ಗೆ ವಿಶ್ವಾಸದಿಂದಿದ್ದರೆ ಯಾರು ನೀಚ ಕೆಲಸಗಳನ್ನು ಮಾಡಿದ್ದರೋ ಅವರೆಲ್ಲ ತಮ್ಮ ಬಗ್ಗೆ ಭರವಸೆಯನ್ನು ಕಳೆದುಕೊಂಡು ಈಗಿಂದೀಗಲೇ ಜನರನ್ನು ಬುಟ್ಟಿಗೆ ಹಾಕಿಕೊಳ್ಳಲು ಹೊಸ ಹೊಸ ಗಿಮಿಕ್ಕುಗಳನ್ನು ಪ್ರಾರಂಭಿಸಿದ್ದಾರೆ. ಭೂಗಳ್ಳ ಮತ್ತು ವಂಚಕ ಕೃಷ್ಣಯ್ಯ ಶೆಟ್ಟಿ ತನ್ನ ಇಂತಹ 'ಸತ್ಕಾರ್ಯ'ಗಳಿಂದಾಗಿಯೇ ಜೈಲೂಟ ಉಂಡು ಬಂದಿದ್ದ. ಅಂಥವನು ಇತ್ತೀಚೆಗೆ ತನ್ನ ಕ್ಷೇತ್ರವಾದ ಮಾಲೂರಿನಲ್ಲಿ ಅನ್ನದಾನ, ಸೀರೆ ಹಂಚಿಕೆಯಂತಹ ಕಾರ್ಯಕ್ರಮ ಇಟ್ಟುಕೊಂಡು ಜನರಿಂದ ಲಾತಾ ಹೊಡೆಸಿಕೊಂಡದ್ದು (ಲಂಕೇಶ್, ಫೆ. 27, 2013ರ ಸಂಚಿಕೆ) ಒಳ್ಳೆಯ ಬೆಳವಣಿಗೆಯೇ.

ಆದರೆ ಉಡುಪಿಯಲ್ಲಿ ಮಾತ್ರ ಹಾಗಾಗಲಿಲ್ಲ.

ಯಾರಾದರೂ ಕಳೆದ ಒಂದೆರಡು ತಿಂಗಳಿಂದ ಉಡುಪಿಯ ಆಸುಪಾಸಿನಲ್ಲಿ ಪ್ರಯಾಣಿಸಿದ್ದಾದರೆ ಇಲ್ಲಿ ಬಿಜೆಪಿಯ ಉಡುಪಿ ಶಾಸಕ ರಘುಪತಿ ಭಟ್ಟ ರಜನಿಕಾಂತರ 'ಭಾಷಾ' ಗೆಟಪ್ಪಿನಲ್ಲಿ ಪೋಸು ಕೊಟ್ಟಂತಹ ರಾಶಿರಾಶಿ ಹೊಗಳಿಕೆಗಳ ಫ್ಲೆಕ್ಸ್‌ಗಳನ್ನು ಕಂಡೇ ಕಂಡಿರುತ್ತೀರಿ. ಆದರೆ ಯಾವ ಫ್ಲೆಕ್ಸ್‌ನಲ್ಲೂ ಆತನಿಗೆ 'ವಿಶ್ವ ಕುಖ್ಯಾತಿ' ತಂದ 'ಕೌಟುಂಬಿಕ ಸಾಧನೆ'ಯ ಬಗ್ಗೆ ಮಾತ್ರ ಹೇಳಿರಲಿಲ್ಲ. ಒಂದು ಫ್ಲೆಕ್ಸ್‌ನಲ್ಲಂತೂ 'ಉಡುಪಿಯ ಮೋದಿ' ಎಂದು ಭಟ್ಟನನ್ನು ಬಣ್ಣಿಸಲಾಗಿದೆ!!



ಇತ್ತೀಚೆಗೆ ಚಿಂತಕ ಡಾ.ಪುರುಷೋತ್ತಮ ಬಿಳಿಮಲೆಯವರು ತಮ್ಮ ಅಂಕಣದಲ್ಲಿ (ವಿ.ಕ. ಫೆ. 3) ಹೀಗೆ ಬರೆದಿದ್ದರು: "ಕರಾವಳಿ ಜಿಲ್ಲೆಯಲ್ಲಿ ಕನ್ನಡ ಶಾಲೆಗಳಿಗೆ 5 - 10 ರೂ. ಕೊಡಲು ಹಿಂದೇಟು ಹಾಕುವ ಮಂದಿ ಬ್ರಹ್ಮ ಕಲಶ, ಅಷ್ಟಮಂಗಲ ಎಂದಾಕ್ಷಣ ಸಲೀಸಾಗಿ ಲಕ್ಷಾಂತರ ರೂ. ಸಂಗ್ರಹಕ್ಕಿಳಿದುಬಿಡುತ್ತಾರೆ..."

ಮೊನ್ನೆ ಮೊನ್ನೆ ರಘುಪತಿ ಭಟ್ಟನ ನೇತೃತ್ವದಲ್ಲಿ ಮಲ್ಪೆ ಬೀಚ್‌ನಲ್ಲಿ ಭರ್ಜರಿ ಶ್ರೀನಿವಾಸಕಲ್ಯಾಣೋತ್ಸವ ನಡೆಯಿತು. ಇದರ ಬಗ್ಗೆ ಓದಿದಾಗ ಬಿಳಿಮಲೆಯವರು ಮಾತು ನೆನಪಾಯಿತು. ಯಾಕೆಂದರೆ ಭಟ್ಟನ ಈ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಜನರು, ಜನಪ್ರತಿನಿಧಿಗಳು, ನಾಯಕರು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ತಮ್ಮ ಮನೆಯಲ್ಲಿ ಪ್ರಾಯ ದಾಟಿದ ಮಗಳಿಗೋ, ತಂಗಿಗೋ ಮದುವೆಯಾಗದಿದ್ದರೂ ಇವರಿಗೆಲ್ಲ ಚಿಂತೆಯಿಲ್ಲ. ಸೀಮೆಗಿಲ್ಲದ ದೇವರ ಮದುವೆಯೆಂದರೆ ಮಾತ್ರ ಎಲ್ಲಿಲ್ಲದ ಉತ್ಸಾಹ. ದಿವಂಗತ ಮುಖ್ಯಮಂತ್ರಿ ಜೆ.ಎಚ್.ಪಟೇಲರು "ಕಳ್ಳಕಾಕರು ಹೆಚ್ಚಾದಷ್ಟು ದೇವರುಗಳಿಗೆ ಭರ್ಜರಿ ಲಾಭ" ಎಂದದ್ದು ಇಂತದಕ್ಕೇ ಇರಬೇಕು.

ಮಲ್ಪೆಯಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವ ಹೆಸರಿಗಷ್ಟೇ ಸಾರ್ವಜನಿಕ ಹಾಗು ಪಕ್ಷಾತೀತ ಎನಿಸಿದರೂ ಹತ್ತಿರದಲ್ಲೇ ಇರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಇದನ್ನು ನಡೆಸಲಾಗಿದೆ. ಅವತ್ತು ಇದೇ ಮಲ್ಪೆ ಬೀಚ್‌ನ ಹಿನ್ನೆಲೆಯಲ್ಲಿರುವ ಸೈಂಟ್ ಮೇರಿ ಐಲ್ಯಾಂಡ್‌ನಲ್ಲಿ ಇದೇ ದಿ ಗ್ರೇಟ್ ಸಂಸ್ಕೃತಿ ರಕ್ಷಕ ಪಕ್ಷದ ಭಟ್ಟ ನಂಗಾನಾಚ್ ಕಾರ್ಯಕ್ರಮವನ್ನು ಆಯೋಜಿಸಿ ಜನರಿಂದ ಛೀ... ಥೂ... ಎನಿಸಿಕೊಂಡಿದ್ದ. ಆದರೀಗ ಕಲ್ಯಾಣೋತ್ಸವ ಸಮಿತಿಯ ಅಧ್ಯಕ್ಷನಾಗಿ ಭಟ್ಟ ಜನರಿಗೆ ಮೂವತ್ತು ಸಾವಿರದಷ್ಟು ತಿರುಪತಿ ಲಡ್ಡು ಹಂಚಿ ನಗೆ ಬೀರಿದ್ದಾನೆ.

ಸುಪ್ರೀಂಕೋರ್ಟು ಆದೇಶಿಸಿತ್ತು, ನ್ಯಾಯಾಲಯದ ಮಾತು ಕೇಳಲೇಬೇಕು ಎನ್ನುವುದು ಅವರಿಗೂ ತಿಳಿದಿತ್ತು. ಆದರೂ ರೈತರ ಮನ ಒಲಿಸಿಕೊಳ್ಳಬೇಕಿತ್ತಲ್ಲ, ರೈತ ಪರ ಕಾಳಜಿ ವ್ಯಕ್ತಪಡಿಸಬೇಕಿತ್ತಲ್ಲಾ, ಪಾದಯಾತ್ರೆ ಮಾಡಬೇಕಾಯ್ತು. ಅಪ್ಪಿತಪ್ಪಿ ಬೇರೆ ಪಕ್ಷದ ಕಾರ್ಯಕರ್ತರೂ ಸೇರಿದರೂ ಸೇರಲಿ ಎಂದು 'ಇದು ನಮ್ಮ ಪಕ್ಷದ ಕಾರ್ಯಕ್ರಮ ಅಲ್ಲ, ರೈತರ ಪರ ಇದನ್ನ ಮಾಡುತ್ತಿದ್ದೀವಿ. ಯಾರು ಬೇಕಾದರೂ ಭಾಗವಹಿಸಬಹುದು' ಅಂತಾನೂ ಸಾರಿದರು. ಆದರೆ ನಾವು ಹೋಗಿ ಯಾಕೆ ಇವನಿಗೆ ಹೆಸರು ತರಬೇಕು ಎಂದೋ ಏನೋ ಅವರು ಯಾರೂ ಭಾಗವಹಿಸಿದಂತಿಲ್ಲ.

ಪಾದಯಾತ್ರೆಯಲ್ಲಿ ಬೇರೆ ಪಕ್ಷದವರು ಸೇರಲಿಲ್ಲ ಅಂದೆನಲ್ಲ, ಅದೂ ವಸಿ ಸುಳ್ಳೇ. ಪಾಪ ರೈತಸಂಘದ ಕೆಲವು ನಾಯಕರು ಅವರನ್ನ ಸ್ವಾಗತಿಸಲು ತುದಿಗಾಲಿನಲ್ಲಿ ನಿಂತಿದ್ದರು. 'ಇದೇನ್ರೀ ನಾಯಕರೆ ಇವನು ಮಹಾನ್ ಭ್ರಷ್ಟ, ಜೈಲಿಗೆ ಹೋಗಿ ಬಂದವ್ನೆ ಅಂತೆಲ್ಲ ಹಿಗ್ಗಾಮುಗ್ಗಾ ಜಾಡಿಸುತ್ತಿದ್ದರಲ್ರೀ. ಈಗ ನೋಡಿದರೆ ಸ್ವಾಗತಿಸೋಕೆ ಟೊಂಕಕಟ್ಟಿ ನಿಂತಿದ್ದೀರಿ' ಅಂತ ಯಾರೋ ಕೇಳಿದ್ದಕ್ಕೆ 'ಕಾವೇರಿ ನೀರಿಗಾಗಿ ಹೋರಾಡುವ ಎಲ್ಲರನ್ನೂ ಸ್ವಾಗತಿಸುತ್ತೇವೆ' ಅಂದರಂತೆ ನಾಯಕರು! ಅರೆರೆ, ಇದೇನಪ್ಪ ಈ ವರಸೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿ ಕಾವೇರಿ ನೀರಿನ ವಿಚಾರಕ್ಕೆ ಬೆಂಗಳೂರಿನಿಂದ ಮಂಡ್ಯಕ್ಕೆ ಪಾದಯಾತ್ರೆ ಮಾಡಲು ಹೊರಟಾಗ ಇವರೇ ಅದನ್ನ ವಿರೋಧಿಸಿದ್ದರಲ್ಲ ಅಂತೆಲ್ಲ ಕೇಳಬಾರದು ಕಣ್ರಿ. ಪಾಪ ಅವರು ತಾನೆ ಏನು ಮಾಡುತ್ತಾರೆ ಹೇಳಿ. ಅವರ ಒಂದೊಂದು ಕ್ಷೇತ್ರದಲ್ಲೂ ಹತ್ತೋ, ಹದಿನೈದೋ, ಇಪ್ಪತ್ತೋ ಸಾವಿರ ಲಿಂಗಾಯತರ ಮತ ಇದಾವೆ. ಅವರ ಮನ ಒಲಿಸಬೇಕು. ಅವರು ಈ ಭಾಗದಲ್ಲಿ ಅಲ್ಪಸಂಖ್ಯಾತರು. ಅವರ ಮತಗಳೆಲ್ಲ ಒಂದೇ ಕಡೆ ಬೀಳ್ತವೆ ಅನ್ನೋ ಪ್ರತೀತಿ ಬೇರೆ ಇದೆ. ಯಡ್ಯೂರಪ್ಪನವರೇ ಅವರ ನಾಯಕರು ಅಂತ ಹೇಳಲಾಗುತ್ತಿದೆ. ಯಡ್ಯೂರಪ್ಪನವರನ್ನ ಸ್ವಾಗತಿಸದೇ ಹೋದರೆ ಆ ಮತಗಳೆಲ್ಲ ಬೇರೆ ಕಡೆ ಹರಿದಾವು ಅನ್ನೊ ಆತಂಕ ಎಂತಹವರಿಗೂ ಇದ್ದೇ ಇರುತ್ತೆ, ಹಾಗಾಗಿ ಹೀಗೆಲ್ಲ ಮಾಡಬೇಕಾಗುತ್ತೆ!

ಯಡ್ಯೂರಪ್ಪನವರ ಪಾದಯಾತ್ರೆ ಮಂಡ್ಯ ತಲುಪಿತು. ಮಾರನೆ ದಿನ ಅದು ಮುಂದುವರೆಯಿತು. ಧ್ವನಿವರ್ಧಕದಲ್ಲಿ ಇದರ ಸುದ್ದಿ ಕೇಳಿ ಮನೆಯಿಂದ ಹೊರಕ್ಕೆ ಬಂದೆ. ಐವತ್ತು ಅರವತ್ತು ಜನರ ಸಂಗಡ ಯಡ್ಯೂರಪ್ಪನವರು ಪಾದಯಾತ್ರೆ ಹೊರಟಿದ್ದು ಕಂಡೆ.

ಮಧ್ಯಾಹ್ನ ಟಿವಿ ಹಾಕ್ತೀನಿ. ಅಪ್ಪನವರು ಕೆಆರ್‌ಎಸ್‌ನಲ್ಲಿದ್ದಾರೆ! ಅರೆರೆ ಇದೇನಪ್ಪ ಇದು ಸಿಂಧಘಟ್ಟದ ದೇವರು ಹಿಂದುಮುಂದೆ ಅದಂಗೆ ಇವರ ಪಾದಯಾತ್ರೆಯೂ ಆಯಿತೆ ಅಂತ ಸುದ್ದಿ ವಿವರ ಕೇಳಿದೆ. ತಮಿಳುನಾಡಿಗೆ ಕೆಆರ್‌ಎಸ್‌ನಿಂದ ನೀರು ಬಿಟ್ಟಿದ್ದರಂತೆ. ಅದನ್ನು ಪ್ರತಿಭಟಿಸಲು ಪಾದಯಾತ್ರೆ ಅಂತ್ಯಗೊಳಿಸಿ ಕಾರಿನಲ್ಲಿ ಅಲ್ಲಿಗೆ ಬಂದಿದ್ದರಂತೆ. ಅಂತೂಇಂತೂ ಯಡ್ಯೂರಪ್ಪ 'ಕಾರ್ ಪಾದಯಾತ್ರೆ' ಅಂದ ಹಾಗಾಯಿತು!


ಇವರು ಯಾಕೆ ಯಾವಾಗಲೂ ಇಂತಹ ಯಡವಟ್ಟು ಕೆಲಸ ಮಾಡಿಕೊಳ್ತಾರಲ್ಲ, ಕೆಲವು ದಿವಸಗಳ ಹಿಂದೆ ಇವರು ಮಹಾತ್ಮ ಗಾಂಧಿ ಪ್ರತಿಮೆ ಬಳಿ ಹಗಲೂ ರಾತ್ರಿ ಸತ್ಯಾಗ್ರಹ ಮಾಡ್ತೀನಿ ಅಂತ ಮಾಧ್ಯಮಗಳಲ್ಲಿ ಪೋಸು ಕೊಟ್ಟರು. ಆದರೆ ಅವತ್ತೇ ಮಳೆ ಬಂದಿತು. ಸತ್ಯಾಗ್ರಹ ಮೊಟಕುಗೊಳಿಸಿದರು. ಈಗ ನೀರು ಬಿಟ್ಟರು ಅನ್ನುವ ನೆಪ ಹೇಳುತ್ತಿದ್ದಾರೆ. ಇದರ ಬದಲು 'ಈ ಇಳಿವಯಸ್ಸಿನಲ್ಲಿ ನಾನು ಅಷ್ಟು ದೂರ ನಡೆಯಲಾರೆ' ಎಂದು ನೇರವಾಗಿ ಹೇಳಬಹುದಾಗಿತ್ತಲ್ಲಾ. ಅಂದರೆ ಚುನಾವಣೆ ಹತ್ತಿರ ಬಂದಿದೆ, ಜನರನ್ನು ಮರುಳು ಮಾಡಬೇಕಲ್ಲಾ, ಅಯ್ಯೋ ಪಾಪ! ●


ಸುವರ್ಣದ ವೈಶಿಷ್ಟ್ಯ ಕಾರ್ಯಕ್ರಮ

ಪುನೀತ್ ರಾಜ್‌ಕುಮಾರ್ ನಡೆಸಿಕೊಡುವ ಟಿವಿ ಕಾರ್ಯಕ್ರಮ 'ಕನ್ನಡದ ಕೋಟ್ಯಾಧಿಪತಿ' ಮಾರ್ಚ್ 11 ರಿಂದ ಸುವರ್ಣ ಚಾನಲ್‌ನಲ್ಲಿ ಆರಂಭವಾಗಲಿದೆ.

ಪುನೀತ್ ಸುವರ್ಣ ಚಾನಲ್‌ನಲ್ಲಿ ಕಾಣಿಸಿಕೊಂಡ ನಂತರ ಆ ಚಾನಲ್‌ನ ವರ್ಚಸ್ಸು ಹೆಚ್ಚಾಗಿದ್ದು ಎಲ್ಲರಿಗೂ ಗೊತ್ತೇ ಇದೆ. ಈ ಬಾರಿ ಮತ್ತೆ ಅಂತಹ ಮ್ಯಾಜಿಕ್‌ನ್ನು ಪುನೀತ್ ರಾಜ್‌ಕುಮಾರ್ ರಿಪೀಟ್ ಮಾಡುತ್ತಾರೋ ಎಂಬ ಭಯ ಮತ್ತು ಆತಂಕ ಬೇರೆ ಚಾನಲ್‌ನವರನ್ನು ಕಾಡುತ್ತಿದೆ.

ಅಂದಹಾಗೆ, ಈ ಬಾರಿ ಕಾರ್ಯಕ್ರಮದ ನಿರೂಪಣಾ ಶೈಲಿಯನ್ನು ಸ್ವಲ್ಪ ಬದಲಾಯಿಸಿದ್ದಾರಂತೆ. ಮುಖ್ಯವಾಗಿ ಕರ್ನಾಟಕದ ಎಲ್ಲ ಜಿಲ್ಲೆಗಳ ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿಸುವ ಹೊಸ ಆಯಾಮ ಈ. ಕಾರ್ಯಕ್ರಮದಲ್ಲಿ ಇದೆಯಂತೆ. ಒಂದೊಂದು ಎಪಿಸೋಡಿನಲ್ಲಿ ಒಂದೊಂದು ಜಿಲ್ಲೆಯ ಪರಂಪರೆ ಮತ್ತು ವೈಶಿಷ್ಟತೆಯನ್ನು ಪುನೀತ್ ವಿವರಿಸುತ್ತಾರಂತೆ. ಅದೇನೇ ಇರಲಿ, ಕನ್ನಡದ ಇಂತಹ ಜನಪ್ರಿಯ ಕಾರ್ಯಕ್ರಮದಲ್ಲಿ ನಮ್ಮ ನಾಡಿನ ಬಗ್ಗೆ ಮಾಹಿತಿ ನೀಡಲು ಹೊರಟಿರುವುದು ಮೆಚ್ಚಬೇಕಾದ ಸಂಗತಿ.





ಅವಹೇಳನದ ಅಟ್ಟಹಾಸ

"ಎ.ಎಂ.ಆರ್.ರಮೇಶ್ ನಿರ್ದೇಶನದ 'ಅಟ್ಟಹಾಸ' ಚಿತ್ರವನ್ನು ನಮ್ಮ ಕುಟುಂಬದ ಯಾವುದೇ ಸದಸ್ಯರು ನೋಡುವುದಿಲ್ಲ. ಈ ಚಿತ್ರವನ್ನು ನೋಡಬೇಕೆಂದು ನಿರ್ದೇಶಕ ರಮೇಶ್ ಅವರು ಆಹ್ವಾನಿಸಿದ್ದರು. ಆದರೆ ನಾವು ಯಾರೂ ನೋಡಬಾರದು ಎಂಬ ತೀರ್ಮಾನಕ್ಕೆ ಬಂದಿದ್ದೆವು" ಎಂದು ಮೊನ್ನೆ ಹೇಳಿದ್ದು ಬೇರೆ ಯಾರೂ ಅಲ್ಲ, ಡಾ.ರಾಜ್‌ಕುಮಾರ್ ಅವರ ಎರಡನೆ ಪುತ್ರ ರಾಘವೇಂದ್ರ ರಾಜ್‌ಕುಮಾರ್.

"ನಾವು, ಅಂದರೆ ನಮ್ಮ ಕುಟುಂಬದವರು, ಈ ಒಂದು ದುರ್ಘಟನೆಯನ್ನು ಮರೆತು ಅದರಿಂದ ಹೊರಬರಬೇಕೆಂದು ಇನ್ನೂ ಪ್ರಯತ್ನಿಸುತ್ತಲೇ ಇದ್ದೀವಿ. ಇಂತಹ ಸಂದರ್ಭದಲ್ಲಿ ಅಪ್ಪಾಜಿ ಕಾಡಿಗೆ ಹೋದ ಅದ್ಯಾವುದೋ ಒಂದೆರಡು ದೃಶ್ಯಗಳನ್ನು ನೋಡಲು ನಾವು ಯಾಕೆ ಸಿನಿಮಾಕ್ಕೆ ಹೋಗಬೇಕು? ಆ ಚಿತ್ರಕ್ಕೆ ದುಡ್ಡು ಹಾಕಿದ ನಿರ್ಮಾಪಕನಿಗೆ ಯಾವುದೇ ನಷ್ಟ ಆಗಬಾರದು ಎಂದು ನಾವು ಈ ತನಕ ಆ ಸಿನಿಮಾದ ಬಗ್ಗೆ ಮಾತನಾಡಿರಲಿಲ್ಲ, ಅಷ್ಟೇ ಅಲ್ಲ, ಆ ಸಿನಿಮಾದ ಬಗ್ಗೆ ಎಲ್ಲೂ ಯಾವುದೇ ಹೇಳಿಕೆಯನ್ನೂ ನೀಡಿರಲಿಲ್ಲ" ಎಂದು ಹೇಳುವ ಮೂಲಕ ರಾಘವೇಂದ್ರ ರಾಜ್‌ಕುಮಾರ್ ಅವರು 'ಅಟ್ಟಹಾಸ' ಚಿತ್ರದ ಬಗ್ಗೆ ಬೇಸರದಲ್ಲೇ ಮಾತನಾಡಿದರು.

ಒಂದು ಮಾತಂತೂ ನಿಜ. ಇಡೀ 'ಅಟ್ಟಹಾಸ' ಚಿತ್ರದಲ್ಲಿ ರಾಜ್‌ಕುಮಾರ್ ಪ್ರಕರಣ ಯಾವ ರೀತಿಯಲ್ಲೂ ಕನ್ನಡಿಗರಿಗೆ ಖುಷಿಕೊಡುವುದಿಲ್ಲ. ಹಾಗೆಯೇ ಕರ್ನಾಟಕ ಪೊಲೀಸರನ್ನು ಅವಹೇಳನ ಮಾಡಿದ ಕುಖ್ಯಾತಿಗೆ ಈ ಚಿತ್ರ ಒಳಗಾಗಿದೆ. ಅಷ್ಟೇ ಅಲ್ಲ, ಚಿತ್ರದಲ್ಲಿ ತಮಿಳುನಾಡು ಸರ್ಕಾರದ ಮುಖ್ಯಮಂತ್ರಿ ಜಯಲಲಿತಾ ಅವರನ್ನು ಸಿಕ್ಕಾಪಟ್ಟೆ ಪ್ರಶಂಸಿಸಲಾಗಿದೆ. ಹೀಗೆ ಎಲ್ಲ ರೀತಿಯಲ್ಲೂ ಕನ್ನಡಿಗರ ಮನಸ್ಸನ್ನು ನೋವು ಮಾಡುವ ಈ ಚಿತ್ರವನ್ನು ಕನ್ನಡಿಗರೇ ನಿರ್ದೇಶಿಸಿದ್ದು ಮತ್ತು ಇದನ್ನು ಕನ್ನಡ ಚಿತ್ರವಾ ಎಂದು ಹೇಳಬೇಕಾಗಿ ಬಂದಿರುವುದು ನಮ್ಮ ದೌರ್ಭಾಗ್ಯವೇ ಸರಿ.

ಬಹುಶಃ ಈ ಎಲ್ಲಾ ಕಾರಣಕ್ಕಾಗಿಯೇ ಬಾಕ್ಸ್ ಆಫೀಸ್‌ನಲ್ಲಿ 'ಅಟ್ಟಹಾಸ' ಚಿತ್ರ ನಿರೀಕ್ಷಿಸಿದಷ್ಟು ಜಯಭೇರಿ ಭಾರಿಸದೇ ಕುಂಟುತ್ತಾ ಸಾಗುತ್ತಿದೆ. ● ಶೆಣೈ

ಈ ಕಲ್ಯಾಣೋತ್ಸವವನ್ನು ಕಂಡು, ಜೊತೆಗೆ ಭಟ್ಟನ 'ಕಲ್ಯಾಣ ಗುಣ'ಗಳ ಬಗ್ಗೆ ಅರಿತು ಶ್ರೀನಿವಾಸನ ಪತ್ನಿ ಭೂದೇವಿಯಾಗಲೀ, ಪದ್ಮಾವತಿ (ಪದ್ಮಪ್ರಿಯ?)ಯಾಗಲೀ ಮುಂದೆ ಡೆಲ್ಲಿಗೆ ಹೋಗಿ ಅನಾಹುತ ಮಾಡಿಕೊಳ್ಳದಿದ್ದರೆ ಸಾಕು.

- ಓದುಗ, ಈ ಮೇಲ್ ಮೂಲಕ

ಫೆಬ್ರವರಿ 20, 2013ರ ಸಂಚಿಕೆಯಲ್ಲಿ ಗೌರಿ ಲಂಕೇಶ್ ಬರೆದ "ಲೈಂಗಿಕ ದೌರ್ಜನ್ಯ ಕಾಯ್ದೆ: ಮಹಿಳೆಯರನ್ನು ವಂಚಿಸಿರುವ ಕಾಂಗ್ರೆಸ್" ಬರಹ ಇಷ್ಟವಾಯಿತು. ಈ ದೇಶದಲ್ಲಿ ರಚಿತವಾಗುವ ಎಲ್ಲ ಕಾನೂನುಗಳು ಎರಡು ರೀತಿಯಲ್ಲಿಯೇ ರಚನೆಯಾಗುತ್ತಿವೆ. ಒಂದು: ಎಲ್ಲ ಕಾನೂನುಗಳು ಬಂಡವಾಳಶಾಹಿ ಮತ್ತು ಅಧಿಕಾರಶಾಹಿ ಹಿತಾಸಕ್ತಿಗಳನ್ನು ಕಾಪಾಡಲೆಂದೇ ರಚನೆಯಾಗುತ್ತವೆ. ಎರಡು: ಹಾಗೆ ರಚನೆಯಾಗುವ ಕಾನೂನುಗಳು ಮುಖ್ಯವಾಗಿ ಹೆಣ್ಣಿನ ಶೋಷಣೆಗೆ ಇಂಬುಕೊಡುವಂತಿರುತ್ತವೆ. ದುರಂತವೆಂದರೆ ಇಂಡಿಯಾದ ಎಲ್ಲ ಪಕ್ಷಗಳು-ರಾಜಕಾರಣಿಗಳು ಇಂತಹ ಕಾನೂನಿನ ಸೃಷ್ಟಿಕರ್ತರೂ-ಪ್ರತಿಪಾದಕರೂ ಆಗಿರುವುದು! ಇಂತಹ ವ್ಯವಸ್ಥೆಯಲ್ಲಿ ಬದುಕುತ್ತಿರುವ ಹೆಣ್ಣಿಗೆ ನ್ಯಾಯ ಸಿಗಲಿ ಎಂದು ಆಶಿಸುವುದಷ್ಟೇ ನಮ್ಮ ಮುಂದಿರುವ ದಾರಿಯಾಗಿದೆ.

- ಕು.ಸ.ಮಧುಸೂದನ, ರಂಗೇನಹಳ್ಳಿ

ಪ್ರವೀಣ್ ಎಸ್. ಶೆಟ್ಟಿ (ಫೆಬ್ರವರಿ 27, 2013ರ ಸಂಚಿಕೆ) ಅವರು ತಮ್ಮ ಬರಹದಲ್ಲಿ 'ಸಿನಿಮಾ ಸಿಂಡ್ರೋಮ್' ಎಂದು ಕೊಟ್ಟ ಹೆಸರು ಸೂಕ್ತವಾಗಿದೆ. ಯಾಕೆಂದರೆ ಇಂತಹ ಸಿನಿಮಾಗಳಿಂದ ಜನಸಾಮಾನ್ಯರಲ್ಲಿ ಒಂದು ರೀತಿಯ ಮನೋರೋಗ ಮತ್ತು ಮೈಂಡ್-ಸೆಟ್ ಸೃಷ್ಟಿಯಾಗುತ್ತದೆ.

ಸಿನಿಮಾಗಳಿಂದಾಗಿ ಯುವಪೀಳಿಗೆಯಲ್ಲಿ ಕೇವಲ ಅವರ ದೈನಿಕ ಭಾಷೆ ಬದಲಾಗಿರುವುದು ಮಾತ್ರವಲ್ಲ ಅವರ ಆಲೋಚನಾ ಕ್ರಮಗಳಲ್ಲೂ ಬಹಳಷ್ಟು ಬದಲಾವಣೆಗಳಾಗಿವೆ ಎಂಬುದು ನಿಜ. ಶಾಲಾ-ಕಾಲೇಜು ಗಳಲ್ಲಿ ಕಲಿಯುತ್ತಿರುವಾಗ ಹುಡುಗಿಯರೊಂದಿಗೆ ಬೆರೆಯಲು ಅವಕಾಶ ಸಿಗದಿರುವುದು ತಾವು ಜೀವನದಲ್ಲಿ ಏನೋ ಮಹತ್ವವಾದದ್ದನ್ನು ಕಳೆದುಕೊಂಡಿದ್ದೇವೆ ಎಂಬ ಭಾವನೆ ಯುವಜನರ ಅಂತರಾಳವನ್ನು ಕಾಡುತ್ತದೆ. ಅಂತಹ ಒಂದು ಕೊರಗು ಕೆಲವರಲ್ಲಿ ಕೇವಲ ಮತ್ಸರವಾಗಿ ಪರಿವರ್ತಿತವಾದರೆ ಇನ್ನು ಕೆಲವು ಅತೃಪ್ತ ಜೀವಿಗಳಲ್ಲಿ ಅಪಾಯಕಾರಿ ಮನೋರೋಗವಾಗಿ ಪರಿವರ್ತಿತವಾಗುತ್ತಿದೆ. ಪರಿಣಾಮವಾಗಿ ಅವರಿಂದ ತಪ್ಪು ಕೆಲಸಗಳನ್ನು ಮಾಡಿಸುತ್ತವೆ. ಮತ್ಸರವು ಕೆಲವು ಯುವಕರನ್ನು ನೈತಿಕ ಪೊಲೀಸರನ್ನಾಗಿ ಮಾಡಿದರೆ, ಮನೋರೋಗವು ಕೆಲವು ಯುವಕರನ್ನು ಅತ್ಯಾಚಾರಿಗಳನ್ನಾಗಿ ಮಾಡುತ್ತದೆ. ಶೆಟ್ಟಿ ಅವರು ಅಂದಂತೆ ಸಿನಿಮಾಗಳಲ್ಲಿಯ ಐಟಂ-ಡಾನ್ಸ್‌ಗಳನ್ನು ಮತ್ತು ಹೊಲಸು ದ್ವಂದ್ವಾರ್ಥದ ಹಾಡುಗಳನ್ನು ನಿಷೇಧಿಸುವುದೇ ಉತ್ತಮ.

-ವೀರಪ್ಪ, ದಿ. ಎನ್, ಮಡಿಕೇರಿ

'ಕರಾವಳಿ ಅಲೆ' ಪತ್ರಿಕೆಯ ಧೈರ್ಯ ಮತ್ತು ಕಷ್ಟದ ಬಗ್ಗೆ ಓದಿ (ಫೆಬ್ರವರಿ 27, 2013ರ ಸಂಚಿಕೆ) ನೋವು ಎರಡೂ ಆಯಿತು. ಸತ್ಯ ಹೇಳುವ ಧೈರ್ಯ ಎಲ್ಲರಲ್ಲೂ ಇರುವುದಿಲ್ಲ, ಕಷ್ಟವನ್ನು ಅನುಭವಿಸಲು ತಯಾರಾಗಿರಬೇಕು ಎಂಬುದು ನನ್ನ ಅನುಭವಕ್ಕೂ ಬಂದಿದೆ.

ಪತ್ರಿಕೆಯ ಧೈರ್ಯವನ್ನು ಮೆಚ್ಚುವುದರಿಂದಲೇ ನಾನು ನಿಮ್ಮ ಪತ್ರಿಕೆಯನ್ನು ಓದಲು ಮುಖ್ಯ ಕಾರಣ.

'ಕರಾವಳಿ ಅಲೆ'ಗೆ ನನ್ನ ಬೆಂಬಲವಿದೆ.

-ರಂಗಸ್ವಾಮಿ, ಮೈಸೂರು

ನಟಿ ತಾರಾ ಅವರು (ಪತ್ರಿಕೆಯ ಫೆಬ್ರವರಿ 27, 2013ರ ಸಂಚಿಕೆ) ಕಳೆದ ಎಂಭತ್ತು ತಿಂಗಳಿನಿಂದ ಗರ್ಭಿಣಿ ಆಗಿದ್ದರು ಎಂದು ಪ್ರಕಟಿಸಲಾಗಿದೆ. ಇದು ವಿಶ್ವದ ಒಂಬತ್ತನೇ ಅಚ್ಚರಿ ಆಗಿರಬಹುದೇ?



-ಓದುಗ, ಎಸ್‌ಎಂಎಸ್ ಮೂಲಕ

('ಒಂಬತ್ತು' ಎಂಬುದರ ಬದಲಾಗಿ 'ಎಂಭತ್ತು' ಎಂದು ತಪ್ಪಾಗಿ ಪ್ರಕಟಿಸಿದ್ದಕ್ಕೆ ನಮ್ಮ ಓದುಗರಿಗೂ, ತಾರಾ ಅವರಿಗೂ ಈ ಮೂಲಕ 'ಸಾರಿ ಕಣ್ರೀ' ಎಂದು ಹೇಳುತ್ತೇವೆ- ಸಂ)

ಐನ್‌ಸ್ಟೈನ್ ಎಂದೂ ಸರಸ್ವತಿ ಪೂಜೆಯನ್ನು ಮಾಡಲಿಲ್ಲ - ಆದರೂ ಆತ ಜಗತ್ತಿನ ಶ್ರೇಷ್ಠ ವಿಜ್ಞಾನಿ ಎಂದು ಹೆಸರು ಮಾಡಿದ.

ಲೂಯಿ ಪಾಶ್ಚರ್ ಎಂದೂ ಧನ್ವಂತರಿ ಪೂಜೆ ಮಾಡಲಿಲ್ಲ - ಆದರೂ ಆತ ರೇಬೀಸ್ ಅನ್ನು ಗುಣಪಡಿಸುವ ಲಸಿಕೆಯನ್ನು ಕಂಡುಹಿಡಿದ.

ಮೇರಿ ಕ್ಯೂರಿ ಎಂದೂ ಗಣೇಶನ ಪೂಜೆ ಮಾಡಲಿಲ್ಲ - ಆದರೂ ಆಕೆ ದಿಟ್ಟತನದಿಂದ ಹಲವಾರು ಅಡಚಣೆಗಳನ್ನು ಎದುರಿಸಿ ವಿಜ್ಞಾನದಲ್ಲಿ ಯಶಸ್ಸು ಸಾಧಿಸಿ ಎರಡು ಬಾರಿ ನೊಬೆಲ್ ಪ್ರಶಸ್ತಿಗೆ ಪಾತ್ರಳಾದಳು.

ಬಿಲ್‌ಗೇಟ್ಸ್ ಎಂದೂ ಲಕ್ಷ್ಮಿ ಪೂಜೆ ಮಾಡಲಿಲ್ಲ - ಆದರೂ ಆತ ತಂತ್ರಜ್ಞಾನದಲ್ಲಿ ವಿವಿಧ ಅಭಿವೃದ್ಧಿಗಳನ್ನು ಮಾಡಿ ಜಗತ್ತಿನ ಅತಿದೊಡ್ಡ ಶ್ರೀಮಂತನಾದ.

ಇದೆಲ್ಲದರಿಂದ ಅರ್ಥವಾಗುವುದು ಏನು? ಮೌಢ್ಯಗಳಲ್ಲಿ ಕುರುಡುನಂಬಿಕೆ ಹೊಂದಿರುವ ಬದಲಾಗಿ ದೂರದೃಷ್ಟಿ, ಶತತ ಪ್ರಯತ್ನ ಮತ್ತು ಛಲ ಮಾತ್ರ ಯಶಸ್ಸಿಗೆ ಕಾರಣ ಎಂದಲ್ಲವೇ? ಇದು ನಮ್ಮ ಜನರಿಗೆ ಅರ್ಥವಾಗುವುದು ಎಂದು?

-ರವಿಕುಮಾರ್, ಹಾಸನ

ಪಾರ್ವತೀಶರು 'ಸಾಕೇತ್, ನೂರ್ ಶ್ರೀಧರ್ ಮತ್ತು ಮಾವೋನ ಕೊನೆಯ ನರ್ತಕ' ಎಂಬ ಬಿಡಿಚಿತ್ರಗಳನ್ನು ನೀಡುತ್ತಾ (13-2-13) ಮಾವೋ ಹೇಳಿದಂತೆ ಕಲೆಗಾಗಿ ಕಲೆ ಅಲ್ಲ ಎಂಬುದು ಹೇಗೆ ಅಸಂಬದ್ಧವೋ ಅದೇ ರೀತಿ ಹೋರಾಟಕ್ಕಾಗಿಯೇ ಹೋರಾಟ ಎಂಬ ಕೆಲವು ಹೋರಾಟಗಾರರ ನಿಲುವು ಕೂಡ ಅಸಂಬದ್ಧವೆ. ಆದ್ದರಿಂದ ಕರ್ನಾಟಕದ ಮಾವೋವಾದಿಗಳು ಕೇವಲ ಇಲ್ಲಿನ ಸರ್ಕಾರ, ಪುರೋಹಿತಶಾಹಿ, ಪಾಳೆಗಾರಿಕೆ, ಅಮೆರಿಕನ್ ಸಾಮ್ರಾಜ್ಯಶಾಹಿ ಹಾಗೂ ಬ್ಯಾಲೆ ನರ್ತಕ ಲೀ ತರಹದ ಪೊಳ್ಳು ಮಾವೋವಾದಿಗಳು ಒಡ್ಡುವ ಸವಾಲುಗಳನ್ನು ಎದುರಿಸಬೇಕಾಗಿದೆ ಎನ್ನುವುದು ಅರ್ಥಪೂರ್ಣ.

ನಮ್ಮ ಸಂದರ್ಭಕ್ಕೆ ಮಾವೋ ಚಿಂತನೆಗಳೇನು ಅಪ್ರಸ್ತುತವಲ್ಲ, ಆದರೆ ನೂರ್ ಶ್ರೀಧರ್ 'ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳವಳಿ' ಪುಸ್ತಕದಲ್ಲಿ ಪ್ರತಿಪಾದಿಸಿರುವಂತೆ ಮಾವೋ ಚೀನಾದಲ್ಲಿ ಅಳವಡಿಸಿದ ಕಾರ್ಯತಂತ್ರಗಳೇ ನಮ್ಮ ವಿಮೋಚನೆಯ ಹಾದಿಯೂ ಆಗಲಾರದು. ಸಾಕೇತ್‌ಗೆ ಇದು ಮನವರಿಕೆಯಾಗಿದ್ದರೆ, ಈ ಕರ್ನಾಟಕದಲ್ಲಿ ಜನಮುಖಿ ಹೋರಾಟಗಳು ಇನ್ನಷ್ಟು ಬಲಿಷ್ಠಗೊಂಡು, ಜನಶಕ್ತಿ ಸಂಚಯನವಾಗಿ ಪ್ರಭುತ್ವದ ಕ್ರೌರ್ಯವನ್ನು ಎದುರಿಸುತ್ತ ಸುಖೀ ಸಮಾಜದತ್ತ ಮುನ್ನಡೆಯಬಹುದಿತ್ತು ಆದರೆ ಇದು ಹಾಗಾಗಲಿಲ್ಲ ಎಂದು ಪಾರ್ವತೀಶ್ ವಿಷಾದ ವ್ಯಕ್ತಪಡಿಸುತ್ತಾರೆ. ಆದರೆ ಅವರು ಹೀಗೆ ನಿರಾಶೆಗೊಳ್ಳಲು ಅವಕಾಶವಿಲ್ಲದಂತೆ ಸದ್ಯ ನಮ್ಮ 'ಕರ್ನಾಟಕದಲ್ಲಿ ಸಂಘಟನೆಗಳು' ರೂಪುಗೊಳ್ಳುತ್ತಿವೆ. ಹೊಸ ಕರ್ನಾಟಕ ಕಟ್ಟುವ ಆಶಯದೊಂದಿಗೆ ಕರ್ನಾಟಕ ಶ್ರಮಿಕ ಸಂಘಟನೆಗಳು, ಕಾರ್ಮಿಕ ಹಾಗೂ ವಿದ್ಯಾರ್ಥಿ ಸಂಘಟನೆಗಳು ಹಾಗೂ ಅನೇಕ ಸಮಾನ ಮನಸ್ಕ ಸಂಘಟನೆಗಳು ಕೈಗೂಡಿಸುತ್ತಿರುವುದು ಸ್ವಾಗತಾರ್ಹ. ಮಾವೋವಾದಿಗಳ ಹೋರಾಟ ಹೀಗೆ ಬೇರೆ ಬೇರೆ ವಿನ್ಯಾಸದಲ್ಲಿ ಸರ್ಕಾರಕ್ಕೆ ಮುಖಾಮುಖಿಯಾಗುವುದು ಒಳ್ಳೆಯ ಬೆಳವಣಿಗೆ.

-ಪ್ರೊ. ಶಿವರಾಮಯ್ಯ, ಬೆಂಗಳೂರು

ಖ್ಯಾತ ಹಿಂದಿ ಸಾಹಿತಿ ಮತ್ತು ಬಾಲಿವುಡ್‌ನ ಯಶಸ್ವೀ ನಿರ್ದೇಶಕರಾದ ಗುಲ್ಜಾರ್ ಅವರನ್ನು ಇತ್ತೀಚೆಗೆ ಪಾಕಿಸ್ತಾನದ ಕರಾಚಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು. ಮೂಲತಃ ಸಿಖ್ ಧರ್ಮೀಯರಾದ ಗುಲ್ಜಾರ್ ಅವರು ಹುಟ್ಟಿ ಬೆಳೆದದ್ದು ಪಾಕಿಸ್ತಾನದಲ್ಲಿ. ಅವರು ದೇಶವಿಭಜನೆ ಸಮಯದಲ್ಲಿ ಭಾರತಕ್ಕೆ ವಲಸೆ ಬಂದು 'ಗುಲ್ಜಾರ್' ಎಂಬ ಕಾವ್ಯನಾಮವನ್ನು ಆಯ್ಕೆಮಾಡಿಕೊಂಡರು. ಪಾಕಿಸ್ತಾನಕ್ಕೆ ಗುಲ್ಜಾರ್ ಅವರು ಹೋಗಿದ್ದಾಗ ತಾವು ಓದಿದ ಶಾಲೆ ಮತ್ತು ಬೆಳೆದ ಮನೆಯನ್ನು ನೋಡಿ ಭಾವುಕರಾದರು. ಅದೇ ಹೊತ್ತಿಗೆ ಹಲವು ಮುಸ್ಲಿಮ್ ಮೂಲಭೂತವಾದಿಗಳು ಅವರು ಕರಾಚಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಕೂಡದು ಎಂದು ಅಬ್ಬರಿಸಿದರು. ಇದರಿಂದ ಬೇಸರಗೊಂಡ ಗುಲ್ಜಾರ್ ಸಮ್ಮೇಳನದಲ್ಲಿ ಭಾಗವಹಿಸದೇ ಭಾರತಕ್ಕೆ ಹಿಂದಿರುಗಿದರು. ಈಗ ಪಾಕಿಸ್ತಾನದಿಂದ ಬಂದಿರುವ ಸುದ್ದಿಯ ಪ್ರಕಾರ ಗುಲ್ಜಾರ್ ಅವರು ಓದಿದ್ದ ಶಾಲಾ ಕಟ್ಟಡಕ್ಕೆ 'ಗುಲ್ಜಾರ್ ಕಾಲಾ ಬ್ಲಾಕ್' ಎಂದೂ, ಅವರ ಮನೆ ಇರುವ ರಸ್ತೆಗೆ 'ಗುಲ್ಜಾರ್ ಸ್ಟ್ರೀಟ್' ಎಂದೂ ಮರುನಾಮಕರಣ ಮಾಡಲಾಗಿದೆ.

-ಓದುಗ, ಎಸ್‌ಎಂಎಸ್ ಮೂಲಕ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 06-03-2013 RNI No. KARKAN2005/14648

ಕನ್ನಡ ಚಿತ್ರರಂಗದ ಪರಿಸ್ಥಿತಿ ಹೇಗಿದೆ ನೋಡಿ.

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. 'ಯಾರೇ ಕೂಗಾಡಲಿ' ಚಿತ್ರ ಬಿಡುಗಡೆಯಾದ ನಂತರ ಬೇರೆ ಯಾರಿಗೂ ಪುನೀತ್ ತಮ್ಮ ಕಾಲ್‌ಶೀಟ್ ಕೊಟ್ಟಿಲ್ಲ. "ಕಮರ್ಷಿಯಲ್ ಆಗಿ ಕೋಟ್ಯಾಂತರ ರೂಪಾಯಿ ಲಾಭವನ್ನು ತಂದುಕೊಡುವ ತಾಕತ್ತು ಇರುವ ಈ ಸೂಪರ್ ಸ್ಟಾರ್ ಹೀಗೆ ವರ್ಷದಲ್ಲಿ ಆರು ತಿಂಗಳು ಸಿನಿಮಾ ಮಾಡದೇ ಕುಳಿತರೆ ಉದ್ಯಮ ಅಭಿವೃದ್ಧಿ ಆಗುವುದು ಹೇಗೆ?" ಎಂಬುದು ಗಾಂಧಿನಗರದ ಕೆಲವರ ಪ್ರಶ್ನೆಯಾಗಿದೆ.







ಕನ್ನಡ ತಾರೆಯರ ಪಾರ್ಟ್ ಟೈಂ ಡ್ಯೂಟಿ!



ಪುನೀತ್ ಕಥೆ ಹೀಗಾದರೆ ಪವರ್‌ಫುಲ್ ಸ್ಟಾರ್ ಸುದೀಪ್ ಕಥೆ ಇನ್ನೊಂದು ರೀತಿಯದ್ದು. ಆತನಿಗೆ ಈಗ ಸಿಕ್ಕಾಪಟ್ಟೆ ಡಿಮಾಂಡ್ ಇದೆ. ಪ್ರತಿ ದಿನ ಆವರ ಮನೆ ಮುಂದೆ ಹಣದ ಥೈಲಿಯನ್ನು ಹಿಡಿದುಕೊಂಡು ನಿರ್ಮಾಪಕರು ಹಾಜರಾಗುತ್ತಿದ್ದಾರೆ. ಆದರೆ ಸುದೀಪ್ ಮಾತ್ರ "ಸೆಲೆಬ್ರಿಟಿ ಕ್ರಿಕೆಟ್ ಮ್ಯಾಚ್ ಮುಗಿಯುವತನಕ ನಾನು ಯಾವುದೇ ಹೊಸ ಸಿನಿಮಾವನ್ನು ಒಪ್ಪುವುದಿಲ್ಲ" ಎಂದು ಅವರನ್ನೆಲ್ಲ ಹಿಂದೆ ಕಳುಹಿಸುತ್ತಿದ್ದಾರೆ. "ಸಿನಿಮಾ ಮಾಡುವುದನ್ನು ಬಿಟ್ಟು ಕ್ರಿಕೆಟ್ ಬ್ಯಾಟ್ ಹಿಡಿದು ವರ್ಷದ ಮೂರ್ನಾಲ್ಕು ತಿಂಗಳುಗಳನ್ನು ಕ್ರೀಡಾಂಗಣದಲ್ಲಿ ಕಳೆದರೆ ಕನ್ನಡ ಚಿತ್ರರಂಗ ಹೇಗೆ ಅಭಿವೃದ್ಧಿಯಾಗುತ್ತದೆ?" ಎಂಬ ಪ್ರಶ್ನೆಯನ್ನು ಗಾಂಧಿನಗರದ ಹಲವರು ಕೇಳುತ್ತಿದ್ದಾರೆ.

ಬೇಡಿಕೆಯಲ್ಲಿರುವ ಇಬ್ಬರು ನಟರ ಕತೆ ಇಂತಹದ್ದಾದರೆ ಕನ್ನಡ ಚಿತ್ರರಂಗದ ನಂಬರ್ 1 ನಟಿ ರಮ್ಯಾಳದ್ದು ಇನ್ನೊಂದು ರೀತಿಯ ಧೋರಣೆ. ಕಳೆದ ವರ್ಷ ರಮ್ಯಾ ಸದ್ಯದಲ್ಲೇ ಮದುವೆ ಆಗುತ್ತಾಳೆಂದು ಭಾವಿಸಿದ ನಿರ್ಮಾಪಕರು ಆಕೆಯ ಕಾಲ್‌ಶೀಟ್ ಕೇಳುವುದನ್ನೇ ನಿಲ್ಲಿಸಿದರು. ಈಗ ಆಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಾಳೆ ಎಂದು ಭಾವಿಸಿ ಅಕೆ ಇನ್ನು ತಮ್ಮ ಕೈಗೆ ಸಿಗುವುದಿಲ್ಲ ಎಂದು ಸುಮ್ಮನಾಗಿದ್ದಾರೆ. ಇದಕ್ಕೆ ಸರಿಯಾಗಿ ರಮ್ಯಾ ಕೂಡ ವರ್ಷಕ್ಕೆ ಒಂದೋ ಅಥವಾ ಎರಡು ಸಿನಿಮಾಗಳಲ್ಲಿ ನಟಿಸಿದರೆ ಸಾಕು ಎಂಬ ಮನೋಭಾವವನ್ನು ಹೊಂದಿದ್ದಾರೆ. ಈಗ ನಾಯಕಿಯರಲ್ಲಿ ಅತ್ಯಂತ ಅಗ್ರಸ್ಥಾನದಲ್ಲಿರುವ ರಮ್ಯಾ ಹೀಗೆ ಕನ್ನಡ ನಿರ್ಮಾಪಕರಿಗೆ ನಾಟ್ ರೀಚೆಬಲ್ ಆಗಿರುವುದು ಬಹಳ ದುಃಖದ ವಿಷಯ.

ಉಳಿದಂತೆ ನಾಯಕರಲ್ಲಿ ದರ್ಶನ್ ಮತ್ತು ನಾಯಕಿಯಲ್ಲಿ ರಾಧಿಕಾ ಪಂಡಿತ್ ಹಾಗೂ ರಾಗಿಣಿ ಬಗ್ಗೆ ನಿರ್ಮಾಪಕರಿಗೆ ಎಲ್ಲಿಲ್ಲದ ವಿಶ್ವಾಸ ಇದೆ. ಆದರೆ ದರ್ಶನ್ ಬಹುತೇಕ ಎಲ್ಲರಿಗೂ ಸುಲಭವಾಗಿ ಸಿಗುತ್ತಿಲ್ಲ.

ಒಟ್ಟಾರೆಯಾಗಿ ಈಗ ಕನ್ನಡ ಚಿತ್ರ ರಂಗದಲ್ಲಿ ಬೇಡಿಕೆಯಲ್ಲಿರುವ ನಟನಟಿಯರು ಸಿನಿಮಾ ಹೊರತುಪಡಿಸಿ ಬೇರೆ ರಂಗದಲ್ಲಿ ಬ್ಯುಸಿ ಆಗಿರುವುದರಿಂದ ಒಂದು ಅರ್ಥದಲ್ಲಿ ಕನ್ನಡ ಚಿತ್ರರಂಗ ಕುಂಟುತ್ತಿದೆ ಎಂದರೆ ತಪ್ಪಾಗಲಾರದು.

ದೀಪಾಳ ಬೇಜವಾಬ್ದಾರಿ ವರ್ತನೆ



ದೀಪಾ ಸನ್ನಿಧಿ ಎಂಬ ಕನ್ನಡದ ಉದಯೋನ್ಮುಖ ನಟಿಯ ಅದೃಷ್ಟ ಯಾಕೋ ಏನೋ ಅಡ್ಡದಾರಿಯಲ್ಲಿ ಸಾಗುತ್ತಿದೆ. ಕಳೆದ ವರ್ಷ ದೀಪಾ ಸನ್ನಿಧಿಯನ್ನು ಗಾಂಧಿನಗರದ ನಿರ್ಮಾಪಕರು 'ಅದೃಷ್ಟದ ತಾರೆ' ಎಂದು ಹೊಗಳಿದ್ದೇ ಹೊಗಳಿದ್ದು. ಇದಕ್ಕೆ ಮುಖ್ಯ ಕಾರಣ ಈಕೆ ನಟಿಸಿದ್ದ 'ಸಾರಥಿ' ಮತ್ತು 'ಪರಮಾತ್ಮ' ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಭಾರಿ ಯಶಸ್ಸನ್ನು ಕಂಡಿದ್ದು. ಚಿತ್ರರಂಗಕ್ಕೆ ಕಾಲಿಡುವಾಗಲೇ ಸೂಪರ್‌ಸ್ಟಾರ್‌ಗಳಾದ ಪುನೀತ್ ರಾಜ್‌ಕುಮಾರ್ ಮತ್ತು ದರ್ಶನ್ ಜೊತೆಗೆ ನಟಿಸುವ ಅವಕಾಶ ಪಡೆದ ಈಕೆ ಖಂಡಿತವಾಗಿಯೂ ರಮ್ಯಾಳನ್ನು ಓವರ್ ಟೇಕ್ ಮಾಡುತ್ತಾಳೆ ಎಂಬ ಮಾತುಗಳು ಕೇಳಿಬಂದಿತ್ತು.

ಆದರೆ ಅರು ತಿಂಗಳ ನಂತರ ಈಗ ಆಕೆಯ ಬಗೆಗಿನ ಮಾತು ಬೇರೆ ತರ ಕೇಳಿಬರುತ್ತಿದೆ. ಕಳೆದ ವರ್ಷ ಅದೃಷ್ಟದ ತಾರೆಯಾಗಿದ್ದ ದೀಪಾ ಸನಿಧಿ ಈಗ 'ನತದೃಷ್ಟತಾರೆ'ಯಾಗಿ ಯಾರಿಗೂ ಬೇಡವಾಗಿದ್ದಾಳೆ. ಉದಾಹರಣೆಗೆ, ಆರಂಭದಲ್ಲಿ ಸುದೀಪ್ ನಾಯಕನಾಗಿ ನಟಿಸಿರುವ 'ಬಚನ್' ಚಿತ್ರಕ್ಕೆ ಈಕೆ ನಾಯಕಿಯಾಗಿ ಆಯ್ಕೆಯಾಗಿದ್ದಳು. ಚಿತ್ರದ ಮುಹೂರ್ತಕ್ಕೂ ಥಳುಕುಬಳುಕಿನ ಬಟ್ಟೆ ಹಾಕಿ ಬಂದಿದ್ದಳು. ಆದರೆ ಮರುದಿನವೇ ಆಕೆಗೆ ಆ ಚಿತ್ರದಿಂದ ಗೇಟ್‌ಪಾಸ್ ನೀಡಲಾಗಿತ್ತು, ಇದೀಗ ಅದೇ ತರಹದ ಘಟನೆ ಪುನರಾವರ್ತನೆಯಾಗಿದೆ. ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಲಿರುವ 'ಬಜರಂಗಬಲಿ' ಚಿತ್ರಕ್ಕೆ ದೀಪಾ ಸನ್ನಿಧಿ ನಾಯಕಿಯಾಗಿ ಆಯ್ಕೆಯಾಗಿದ್ದಳು. ಆದರೆ ಚಿತ್ರ ಆರಂಭವಾಗುವ ಎರಡು ದಿನದ ಮೊದಲು ಆಕೆಯ ಬದಲಿಗೆ ಐಂದ್ರಿತಾ ರೈ ಆಯ್ಕೆಯಾಗಿದ್ದಾಳೆ. ಇದೇ ರೀತಿ ಇನ್ನೂ ಎರಡು ಚಿತ್ರಗಳಿಗೆ ದೀಪಾ ಮೊದಲು ಆಯ್ಕೆಯಾಗಿ ಆನಂತರ ಹೊರಬಿದ್ದ ಸುದ್ದಿ ಕೇಳಿಬಂದಿದೆ.

ಈ ದೀಪಾ ಸನ್ನಿಧಿಯ ಬಗ್ಗೆ ಅನೇಕ ದೂರುಗಳು ಕೇಳಿಬರುತ್ತಿವೆ. ಯಾವುದೇ ನಿರ್ದೇಶಕರು ಆಕೆಗೆ ಫೋನ್ ಮಾಡಿದರೂ ಆಕೆ ಅವರ ಕರೆಗಳನ್ನು ಸ್ವೀಕರಿಸುವುದಿಲ್ಲ. ಈಕೆಯ ಇಂತಹ ಧಿಮಾಕಿನ ವರ್ತನೆಯಿಂದಾಗಿ ಆಕೆ ಹಲವಾರು ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾಳೆ.

ಅತ್ಯಂತ ಪೈಪೋಟಿಯ ಈ ಕ್ಷೇತ್ರದಲ್ಲಿ ಈಗಿನ್ನೂ ಅಂಬೆಗಾಲಿಡುತ್ತಿರುವ ಈ ನಾಯಕಿಯ ಇಂತಹ ವರ್ತನೆ ನಿಜಕ್ಕೂ ಎಲ್ಲರಿಗೂ ಆಶ್ಚರ್ಯ ತಂದಿದೆ.

ಚಿತ್ರ್ರರಂಗದ ಕೆಸರೆರಚಾಟ

ಮುಂದಿನ ವಾರ ಬಹುನಿರೀಕ್ಷೆಯ 'ಮೈನಾ' ಚಿತ್ರ ಬಿಡುಗಡೆಯಾಗಲಿದೆ. ಈ ಚಿತ್ರ ತುಂಬ ಚೆನ್ನಾಗಿ ಮೂಡಿಬಂದಿದೆ ಎಂಬ ವರದಿ ಬಂದಿದೆ. 'ಸಂಜು ವೆಡ್ಸ್ ಗೀತಾ' ಚಿತ್ರವನ್ನು ನಿರ್ದೇಶಿಸಿದ್ದ ನಾಗಶೇಖರ್ 'ಮೈನಾ' ಚಿತ್ರದ ಮೂಲಕ ಮತ್ತೊಮ್ಮೆ ಕನ್ನಡ ಪ್ರೇಕ್ಷಕರ ಹೃದಯ ಗೆಲ್ಲುವ ಮಾತು ಕೇಳಿಬರುತ್ತಿದೆ.



ಇಂತಹ ಒಳ್ಳೆ ಸುದ್ದಿ ಕೇಳಿಬರುತ್ತಿರುವಾಗಲೇ ನಾಗಶೇಖರ್ ಅವರು ಲಹರಿ ಸಂಸ್ಥೆಯ ವೇಲು ಜೊತೆಗೆ ವಿವಾದ ಮಾಡಿಕೊಂಡಿದ್ದು ನಿಜಕ್ಕೂ ಅವರಿಗೆ ಶೋಭೆ ತರುವಂತಿರಲಿಲ್ಲ. ವಿಷಯ ಇಷ್ಟೇ: ಈ ಚಿತ್ರದಲ್ಲಿ ಕುವೆಂಪು ಅವರು ಬರೆದಿರುವ ಮತ್ತು ಸಿ.ಅಶ್ವಥ್ ಅವರು ಹಾಡಿರುವ "ಕಾಣದ ಕಡಲಿಗೆ ಹಂಬಲಿಸುವ ಮನ. . . ." ಎಂಬ ಹಾಡನ್ನು ನಾಗಶೇಖರ್ ಬಳಸಿಕೊಂಡಿದ್ದಾರೆ. ಜೊತೆಗೆ ಈ ಚಿತ್ರವನ್ನು ಸಿ.ಅಶ್ವಥ್ ಅವರಿಗೆ ಅರ್ಪಿಸಿದ್ದಾರೆ. ಅದರೆ ಲಹರಿ ವೇಲು ಮಾತ್ರ "ಆ ಹಾಡಿನ ಹಕ್ಕು ನನ್ನ ಬಳಿ ಇದೆ. ಇದನ್ನು ಬಳಸಬೇಕಾಧರೆ ನನಗೆ ನೀಡಬೇಕಾದ ರಾಯಲ್ಟಿಯನ್ನು ಕೊಡಬೇಕು" ಎಂದು ವಾದಿಸುತ್ತಿದ್ದಾರೆ. ನಾಗಶೇಖರ್ ಅದಕ್ಕೆ ಒಪ್ಪದೆ "ನಾನು ಸಿ.ಅಶ್ವಥ್ ಅವರ ಪತ್ನಿ ಮತ್ತು ಮಕ್ಕಳ ಬಳಿ ಅನುಮತಿ ಕೇಳಿದ್ದೇನೆ. ಕನ್ನಡ ಹಾಡೊಂದನ್ನು ಸಿನಿಮಾಕ್ಕೆ ಬಳಸಿ ಅದನ್ನು ಕನ್ನಡಿಗರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇನೆ. ಇಂತಹ ಸಂದರ್ಭದಲ್ಲಿ ಲಹರಿ ವೇಲು ಅವರು ವಿಷಯವನ್ನು ಅರ್ಥಮಾಡಿಕೊಳ್ಳದೆ ಹಣದಾಸೆಗೆ ಅಂಟಿಕೊಂಡು ಹಣ ಕೇಳುತ್ತಿರುವುದು ಬೇಸರ ತಂದಿದೆ" ಎಂಬಂತಹ ಬಾಲಿಶ ವಾದವನ್ನು ಮಂಡಿಸುತ್ತಿದ್ದಾರೆ.

ವಾಸ್ತವವಾಗಿ ಅನುಮತಿ ಇಲ್ಲದೆ ಹಾಡೊಂದನ್ನು ಬಳಸಿಕೊಂಡಿದ್ದಲ್ಲದೆ ಅದರ ಹಕ್ಕುದಾರರಿಗೆ ರೋಫ್ ಹಾಕುವುದು ಸರಿಯಲ್ಲ. ಇದನ್ನು ಅರಿತ ಕಲಾವಿದರ ಸಂಘದ ಕಾರ್ಯದರ್ಶಿ ರಾಕ್‌ಲೈನ್ ವೆಂಕಟೇಶ್, ನಿರ್ದೇಶಕರ ಸಂಘದ ಅಧ್ಯಕ್ಷ ರಮೇಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನಂ ನಾಯ್ಡು ಮತ್ತು ಇತರರು ನಾಗಶೇಖರ್ ಅವರಿಗೆ ಬುದ್ಧಿ ಹೇಳಿ ಈಗ ವಿವಾದವನ್ನು ತಿಳಿಗೊಳಿಸಿದ್ದಾರೆ.

ಏನೇ ಆಗಲಿ ಕನ್ನಡ ಚಿತ್ರರಂಗದವರು ತಮ್ಮತಮ್ಮೊಳಗೆ ಕಿತ್ತಾಡುವ ಘಟನೆಗಳು ಗಾಂಧಿನಗರದಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವುದು ಬೇಸರದ ವಿಷಯ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore - 4, Phone : 2...
Fax : 26604526, E-mail : lankesh79@rediffmail...